# ಪ್ರಸಾದ

ಮಾಸಿಕ

ಸಂಪುಟ 39 ಸಂಚಿಕೆ 3 ಮಾರ್ಚ್ 2024



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಚಿಕ್ಕಬಳ್ಳಾಪುರದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಡಾ. ಎಂ. ವೀರಪ್ಪ ಮೊಯಿಲಿಯವರ ಗದ್ಯ ಮಹಾಕಾವ್ಯ 'ವಿಶ್ವಸಂಸ್ಕೃತಿಯ ಮಹಾಯಾನ' ಕೃತಿಯನ್ನು ಸುತ್ತೂರು ಮತ್ತು ಆದಿಚುಂಚನಗಿರಿ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಲೋಕಾರ್ಪಣೆಗೊಳಿಸಲಾಯಿತು. ಶ್ರೀ ನಿತಿನ್ ಷಾ, ಡಾ. ಎಂ. ವೀರಪ್ಪ ಮೊಯಿಲಿ, ಪ್ರೊ. ಪುರುಷೋತ್ತಮ ಬಿಳಿಮಲೆ, ಶ್ರೀ ಎನ್.ಎಚ್. ಶಿವಶಂಕರರೆಡ್ಡಿಯವರುಗಳಿದ್ದಾರೆ (3 ಮಾರ್ಚ್ 2024)

# ಪ್ರಸಾದ

ಸಂಪುಟ 39 : ಸಂಚಿಕೆ 3 ಮಾರ್ಚ್ 2024

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004




**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

**ಮುಖಪುಟ ಚಿತ್ರ**

ಮೈಸೂರು ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪದವೀಧರರ ದಿನಾಚರಣೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಡಾ. ಬಿ. ಸುರೇಶ್, ಡಾ. ಹೆಚ್. ಬಸವನಗೌಡಪ್ಪ, ಡಾ. ಶಶಾಂಕ್ ಆರ್. ಜೋಷಿ, ಡಾ. ಸಿ.ಜಿ. ಬೆಟಸೂರಮಠ, ಡಾ. ಸುರೀಂದರ್ ಸಿಂಗ್‌ರವರುಗಳೊಂದಿಗೆ ಪದಕ ಮತ್ತು ಪ್ರಶಸ್ತಿ ವಿಜೇತ ಪದವೀಧರರುಗಳಿದ್ದಾರೆ (23 ಮಾರ್ಚ್ 2024)


**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

# ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ಬೆಳಕಿನ ಬಾಳು 9
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ತೋರುಂಬ ಲಾಭ 12
ಡಾ. ಎಂ.ಎನ್. ನಂದೀಶ್ ಹಂಚೆ

ಶಬರಶಂಕರ ವಿಲಾಸ–ಟೀಕು 15
ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ವಚನ ಸಾಹಿತ್ಯದಲ್ಲಿ ನೈತಿಕತೆ – ಒಂದು ಅವಲೋಕನ 23
ಎಚ್.ಎಸ್. ಸಿದ್ಧಗಂಗಪ್ಪ

ವೀರಶೈವ ಸಂಸ್ಕೃತ ಸಾಹಿತ್ಯದ ಸಿಂಹಾವಲೋಕನ 31
ಡಾ. ಬಿ. ನಂಜುಂಡಸ್ವಾಮಿ

ವಚನ ಸಾಹಿತ್ಯದಲ್ಲಿ ಶಾಂತಿ ಮತ್ತು ಸಾಮರಸ್ಯದ ಅಭಿವ್ಯಕ್ತಿ 40
ಹುಸ್ಕೂರು ಅಂಬಿಕಾ ಶಿವನಂಜಪ್ಪ

ರಾಮದುರ್ಗದ ಗುಹಾಂತರ ದೇವಾಲಯ 46
ಡಾ. ಎಸ್.ಜಿ. ರಾಮದಾಸ ರೆಡ್ಡಿ
(ಧಾರ್ಮಿಕ ಕ್ಷೇತ್ರಗಳ ದರ್ಶನಮಾಲಿಕೆ)

ಗ್ರಂಥ ಪರಾಮರ್ಶೆ 53

ವಾರ್ತಾವಿಹಾರ 56
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 62

ಕೋಗಿಲೆ ಸರಗೈದಿತೆಂದು
ಕಾಗೆ ಅದಕ್ಕೆ ಎದುರಾಗಿ ಕುಳಿತು ಕರ್ರೆಂದು ಕಟಕಿಯನಾಡಿದರೆ
ಆ ಕೋಗಿಲೆಗಾದ ಕೊರತೆಯೇನಯ್ಯಾ?
ಸೂರ್ಯಪ್ರಕಾಶವನುಳ್ಳುವನನ್ನು ಕತ್ತಲೆಯ ಮೈಯವನೆಂದು
ಹಗಲು ಕಣ್ಣು ಕಾಣದ ಗೂಗೆ ಕೆಟ್ಟು ನುಡಿದರೆ
ಸೂರ್ಯನಿಗಾದ ಕೊರತೆಯೇನಯ್ಯಾ?
ಕನ್ನಡಿಗೆ ಮೂಗಿಲ್ಲವೆಂದು ಮೂಕೊರೆಯ ಹೇಳಿದರೆ,
ಆ ಕನ್ನಡಿಗಾದ ಕೊರತೆಯೇನಯ್ಯಾ?
ದ್ವೈತ ಅದ್ವೈತವ ನೂಂಕಿ, ಅಂಗ–ಲಿಂಗದ ಹೊಲಬನರಿದು,
ಸ್ವಯಂ ಲಿಂಗಿಯಾದ ಶರಣನ
ಅಂಗವಿಕಾರದ ಪಂಗುಳ ಮಾನವನು
ಜರಿದು ಝುಂಕಿಸಿ ನುಡಿದಡೆ
ಆ ಲಿಂಗಾನುಭವಿಗಾದ ಕೊರತೆಯೇನಯ್ಯಾ?
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ!

**– ಘನಲಿಂಗಿದೇವರು**

# ಗುರುವಾಣಿ

ಅಕತ ಞ್ಞಸ್ಸ ಪೋಸಸ್ಸ ನಿಷ್ಚಂ ವಿವರದಸ್ಸಿ ನೋ
ಸಚ್ಚಿಂ ಚೇ ಪಠವಿಂ ಪಜ್ಜ ನೇವ ನ ಅಭಿರಾಧಯೇ

ಮೇಲಿನ ಪಂಕ್ತಿಯು ಬುದ್ಧನ ನಿಕಾಯದ ಜಾತಕಕಥೆ "ಸೀಲವ ನಾಗರಾಜ ಜಾತಕ"ದಲ್ಲಿ ಬರುವ ಗಾಥೆ. ಧರ್ಮಸಭೆಯಲ್ಲಿ ಕುಳಿತಿದ್ದ ಭಿಕ್ಕುಗಳು "ಮಿತ್ರರೇ! ದೇವದತ್ತನು ಕೃತಘ್ನ. ತಥಾಗತರ (ಬುದ್ಧನ) ಗುಣಗಳನ್ನು ಅವನು ತಿಳಿದಿಲ್ಲ" ಎಂದು ಹೇಳುತ್ತಿದ್ದರು. ಆಗ ಶಾಸ್ತರು ಬಂದು "ಭಿಕ್ಕುಗಳೇ! ಈಗ ಇಲ್ಲಿ ಕುಳಿತುಕೊಂಡು ಏನು ಮಾತನಾಡುತ್ತಿದ್ದೀರಿ?" ಎಂದು ಕೇಳಿ "ಭಿಕ್ಕುಗಳೇ! ಈಗ ಮಾತ್ರ ದೇವದತ್ತನು ಕೃತಘ್ನನಾಗಿಲ್ಲ. ಹಿಂದೆಯೂ ಆತ ಕೃತಘ್ನನಾಗಿಯೇ ಇದ್ದನು" ಎಂದು ಹೇಳಿದರು. ದೇವದತ್ತನ ಹಿಂದಿನ ವೃತ್ತಾಂತವನ್ನು ತಿಳಿಸುತ್ತಾ ಕೃತಘ್ನನಾದವನು ಯಾವಾಗಲೂ ದೋಷವನ್ನೇ ಹುಡುಕುತ್ತಾನೆ. ಸಮಸ್ತ ಪೃಥ್ವಿಯನ್ನು ಕೊಟ್ಟರೂ ಅಂಥ ಮನುಷ್ಯನನ್ನು ಸಂತೋಷಪಡಿಸಲಾಗುವುದಿಲ್ಲ ಎಂದು ಈ ಗಾಥೆಯ ಅರ್ಥಕ್ಕೆ ಅನುಗುಣವಾಗಿ ದೇವದತ್ತನ ಜನ್ಮವೃತ್ತಾಂತವನ್ನು ವಿವರಿಸಿದನು. ಕೃತಜ್ಞತೆ ಮತ್ತು ಕೃತಘ್ನತೆ ಎಂಬ ಎರಡು ಪದಗಳ ಚಾಕ್ಷುಷ ರೂಪದಲ್ಲಿ ಸಣ್ಣ ವ್ಯತ್ಯಾಸವಿದೆ. ಆದರೆ ಈ ಸಣ್ಣ ಅಕ್ಷರಗಳಿಂದ ಉಂಟಾಗುವ ಅರ್ಥವ್ಯತ್ಯಾಸ ಅಗಾಧ ಅಂತರವನ್ನು ಹೊಂದಿದೆ. ಒಂದು, ಉಪಕಾರಸ್ಮರಣೆ ಮಾಡಿದರೆ ಮತ್ತೊಂದು ಅದರ ಸ್ಮರಣೆಯಿಲ್ಲದೆ ಇರುವ ಸ್ಥಿತಿ. ಸ್ಮರಣೆ ಎಂದರೆ ಯಾರೋ ಒಬ್ಬರು ಮಾಡಿದ ಯಾವುದೋ ಸಹಾಯಕ್ಕೆ ಅಂತಹುದೇ ಸಹಾಯ ಮಾಡುವುದು ಎಂದರ್ಥವಲ್ಲ. ಯಾರೋ ಮಾಡಿದ ಸಹಾಯಕ್ಕೆ ಪ್ರತ್ಯುಪಕಾರ ಮಾಡಲು ಅವಕಾಶ ದೊರೆಯದೆ ಇರಬಹುದು. ಅವರಿಗೆ ಅಂತಹ ಸಂದರ್ಭ ಒದಗಿ ಬರದಿರುವುದರಿಂದ ಅವರಿಗೆ ಸಹಾಯ ಮಾಡಲಾಗಲಿಲ್ಲವಲ್ಲ ಅಂತ ಅಂದುಕೊಳ್ಳಬಾರದು. ಕ್ರಿಯೆಗೆ ಪ್ರತಿಕ್ರಿಯೆ ಮಾತ್ರವಲ್ಲ, ಅದನ್ನು ಸದಾ ಸ್ಮರಿಸುತ್ತಾ ಅಂಥ ಪರಿಸ್ಥಿತಿಯಲ್ಲಿರುವ ಯಾರಿಗೇ ಆದರೂ ಸಹಾಯ ಮಾಡುತ್ತ ಸಹಾಯ ಮಾಡಿದವರನ್ನು ಸ್ಮರಿಸುವುದೂ ಒಂದು ರೀತಿಯ ಕೃತಜ್ಞತೆ. ಅದೊಂದು ಸುಂದರ ಭಾವ. ಮನುಷ್ಯತ್ವವನ್ನು ಆರ್ದ್ರಗೊಳಿಸುವ ಮಾನವೀಯ ಒರತೆ. ಈ ಒರತೆ ಬತ್ತಿದರೆ ಹೃದಯ ವಿಕಾರಕ್ಕೆ ಒಳಗಾಗುತ್ತದೆ. ಅಂತಃಸ್ಸತ್ವ ಬತ್ತಿಹೋಗುತ್ತದೆ. ಮಮಕಾರ, ಪ್ರೀತಿ, ವಾತ್ಸಲ್ಯಗಳ ದಾರಿದ್ರ್ಯ ಆವರಿಸುತ್ತದೆ. ಬಡತನದಿಂದ ಉಂಟಾಗುವ ದಾರಿದ್ರ್ಯಕ್ಕಿಂತಲೂ ಹೃದಯದಾರಿದ್ರ್ಯ

ಬಹಳ ಕೆಟ್ಟದ್ದು. ಬಡತನವನ್ನು ಬೇಕಾದರೆ ಹೋಗಲಾಡಿಸಬಹುದು, ಆದರೆ ಹೃದಯದಾರಿದ್ರ್ಯ ಹೋಗಲಾಡಿಸುವಂಥದಲ್ಲ.

ಆದರೆ ಪ್ರಸಕ್ತ ದಿನಗಳಲ್ಲಿ ಕೃತಜ್ಞತೆ ಎಂಬ ಪದಕ್ಕೆ ಅರ್ಥವೇ ಇಲ್ಲವೇನೋ ಎನ್ನುವಂತಾಗಿದೆ. ಇಂದಿನ ಜಗತ್ತಿನಲ್ಲಿ ಕೃತಘ್ನರ ಸಂಸ್ಥೆ ಅಧಿಕವಾಗುತ್ತಿದೆ. ಇಂಥವರಿಗೆ ಉಪಕಾರಸ್ಮರಣೆಯಿರುವುದಿಲ್ಲ; ಅವರನ್ನು ಯಾವುದರಿಂದಲೂ ತೃಪ್ತಿಪಡಿಸಲಾಗುವುದಿಲ್ಲ. ಅಳತೆ ಮೀರಿದ ಆಸೆಗಳಿಂದ ಆವೃತರಾಗಿ, ಹಿಂಗದ ದಾಹಕ್ಕೆ ಬಲಿಯಾಗಿರುತ್ತಾರೆ. ಎರಡು ಸಣ್ಣ ದೃಷ್ಟಾಂತಗಳನ್ನು ನೀಡುವುದಾದರೆ ಒಂದು ಜ್ಯೂಲಿಯಸ್ ಸೀಸರ್. ತನ್ನ ಪ್ರಾಣಸ್ನೇಹಿತನಾಗಿದ್ದ ಸೀಸರನನ್ನು ಆತನ ಶತ್ರುಗಳ ಜೊತೆ ಸೇರಿಕೊಂಡು ಬ್ರೂಟಸ್ ಕೊಲ್ಲುತ್ತಾನೆ. ಹಾಗೆಯೇ ಮ್ಯಾಕ್‌ಬೆತ್ ನಾಟಕದಲ್ಲಿ ಲೇಡಿ ಮ್ಯಾಕ್‌ಬೆತ್ತಳ ಮಾತಿಗೆ ಮರುಳಾಗಿ ರಾಜ್ಯದ ಮೇಲಿನ ಮೋಹದಿಂದ ಮ್ಯಾಕ್‌ಬೆತ್ ಡಂಕನ್ ದೊರೆಯನ್ನು ಕೊಲ್ಲುತ್ತಾನೆ. ಸೀಸರ್ ಹೇಳುವ **"Brutus, You too''** ಎಂಬ ನುಡಿ, ''Macbeth, Kill the sleep**"** ಎಂಬ ಡಂಕನ್ ದೊರೆಯ ಮಾತುಗಳು ತುಂಬಾ ಮಾರ್ಮಿಕವಾದವು. ಸೀಸರ್ ಹೇಳುವ **"You too"**, ಡಂಕನ್ ಹೇಳುವ **"Kill the sleep"** ಎಂಬ ಮಾತುಗಳು ಬದುಕು ಯಾವ ದಿಕ್ಕಿನಲ್ಲಿ ನಡೆಯಬೇಕು, ಹೃದಯದಲ್ಲಿ ಯಾವ ಗುಣ ತುಂಬಿರಬೇಕು ಎಂಬುದನ್ನು ವಿವರಿಸುತ್ತವೆ. ನಾವು ಕೃತಘ್ನರಾದರೆ ವಾಸ್ತವವಾಗಿ ನಮ್ಮ ಮನಸ್ಸು ಕಲ್ಲಾಗುತ್ತದೆ. ಮೌಲ್ಯರಹಿತವಾಗುತ್ತದೆ. ಮ್ಯಾಕ್‌ಬೆತ್ ಕೊಂದದ್ದು ಡಂಕನ್ನನ್ನು, ಆದರೆ ಹೇಳಿದ್ದು "ನೀನು ನಿನ್ನ ನಿದ್ರೆಯನ್ನು ಕೊಂದೆ" ಎಂದು. ವಾಸ್ತವವಾಗಿ ಡಂಕನ್ ಚಿರನಿದ್ರೆಗೆ ಜಾರಿದ್ದ. ಆದರೆ ಬದುಕಿದ್ದ ಮ್ಯಾಕ್‌ಬೆತ್ ನಿದ್ರೆ ಕಳೆದುಕೊಂಡಿದ್ದ. ಈ ಸಂಬಂಧವಾಗಿ ಕೆಳಗಿನ ಶ್ಲೋಕ ಉಲ್ಲೇಖನೀಯ.

> ಕೃತಾರ್ಥಾ ಹ್ಯಕೃತಾರ್ಥಾನಾಂ
> ಮಿತ್ರಾಣಾಂ ನ ಭವಂತಿ ಯೇ ।
> ತಾನ್ ಮೃತಾನಪಿ ಕ್ರವ್ಯಾದಾಃ
> ಕೃತಘ್ನಾನ್ನೋಪಭುಂಜತೇ ॥

ಮೇಲಿನ ಉಕ್ತಿಯು ರಾಮಾಯಣದಲ್ಲಿ ಬರುತ್ತದೆ. ಯಾರು ತಮ್ಮ ಕಾರ್ಯವನ್ನು ಮಾತ್ರ ಸಾಧಿಸಿಕೊಂಡು ಇನ್ನೂ ಕಾರ್ಯವನ್ನು ಸಾಧಿಸದಿರುವ ತಮ್ಮ ಉಪಕಾರಿ ಮಿತ್ರರ ಸಮಯಕ್ಕೆ ಒದಗುವುದಿಲ್ಲವೋ ಅಂತಹವರು ಸತ್ತ ಮೇಲೆ ನಾಯಿನರಿಗಳೂ ಅವರುಗಳನ್ನು ಮುಟ್ಟಲಾರವು ಎಂಬುದು ಇಲ್ಲಿನ ಭಾವಾರ್ಥ. ಇಲ್ಲಿ ಯಾವುದೋ ಒಂದು ಪ್ರಾಣಿಯನ್ನು ಹೀನಭಾವದಿಂದ ಕಾಣಲಾಗಿದೆ ಎಂಬುದರ ಕಡೆಗೆ ಗಮನ ಕೊಡದೆ "ಕಾಗೆ, ಕೋಳಿಗಿಂತ ಕರಕಷ್ಟ ನರನ ಬಾಳುವೆ" ಎಂಬ ಶರಣಭಾವದ ಕಡೆ ಗಮನ ಹರಿಯಬೇಕು. ಸದಾ ಕೃತಜ್ಞತೆಯನ್ನು ಬದುಕಿನ ಭಾಗವನ್ನಾಗಿಸಿಕೊಳ್ಳಬೇಕು.

**– ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

**ಅನ್ನವುಣುವಂದು ಕೇಳ್ ಅದನು ಬೇಯಿಸಿದ ನೀರ್**
**ನಿನ್ನ ದುಡಿತದ ಬೆವರೊ, ಪರರ ಕಣ್ಣೀರೋ?**
**ತಿನ್ನು ನಿಂ ಜಗಕೆ ತಿನಲಿತ್ತನಿತ, ಮಿಕ್ಕೂಟ**
**ಜೀರ್ಣಿಸದ ಬಹುಶೇಷ – ಮಂಕುತಿಮ್ಮ**

ಎಲ್ಲರೂ ದುಡಿಯುವುದು, ಬದುಕಿಗಾಗಿ ಮತ್ತು ಬದುಕುವುದಕ್ಕಾಗಿ; ಬದುಕು ನಾವು ಕಲ್ಪಿಸಿಕೊಂಡಷ್ಟೂ ಹಿಗ್ಗಿಸಿಕೊಂಡಷ್ಟೂ ವಿಸ್ತಾರವಾಗುತ್ತದೆ, ಕುಗ್ಗಿಸಿಕೊಂಡಷ್ಟೂ ಕುಗ್ಗುತ್ತದೆ. ಬದುಕಿಗೆ ಎರಡು ರೀತಿಗಳಿರುತ್ತವೆ. ಒಂದು ನಡತೆ, ಮತ್ತೊಂದು ಜೀವಿಸುವಿಕೆ. ನಡತೆ ನಮ್ಮ ಅಂತರಂಗಕ್ಕೆ ಸಂಬಂಧಿಸಿದ್ದು. ಅದು ಘನವಾದಷ್ಟೂ ನಮ್ಮ ವ್ಯಕ್ತಿತ್ವವೂ ಘನವಾಗುತ್ತದೆ. ಆದರೆ ನಾವು ಜೀವಿಸುವಿಕೆಯ ಆಡಂಬರದಿಂದ ನಾವು ಉನ್ನತ ವ್ಯಕ್ತಿತ್ವವನ್ನು ಹೊಂದಬಹುದು ಎಂದು ಭಾವಿಸುತ್ತೇವೆ. ಆದರೆ ಅದು ತೋರಿಕೆಯ ವ್ಯಕ್ತಿತ್ವ, ನಡತೆ ಘನವಾಗದ ಹೊರತು ನಮಗೆ ಗೌರವ ದೊರಕುವುದಿಲ್ಲ. ಇದೇ ಬದುಕಿನ ಮಹಾಮಾರ್ಗ.

ಇದರ ಸ್ವರೂಪವನ್ನೇ ಮತ್ತೊಂದು ಬಗೆಯಲ್ಲಿ ಬದುಕು ಒಳಗೊಂಡಿರುತ್ತದೆ. ಕೇವಲ ಬದುಕುವುದಕ್ಕಾಗಿ ಬದುಕುವುದೇ ಇಂದಿನ ರೀತಿಯಾಗಿದೆ. ಬದುಕುವುದಕ್ಕಾಗಿ ಅನ್ನ ಆಹಾರಾದಿಗಳ ಸೇವನೆ, ವಾಸಕ್ಕೆ ಮನೆ, ಜೀವನಕ್ಕೆ ಬೇಕಾದ ಹಣ, ಹೀಗೆ ಎಲ್ಲವೂ ಅಗತ್ಯ. ಆದರೆ ಇದನ್ನು ಸಾಧಿಸುವ ಬಗೆ ಹೇಗೆ. ಕ್ರಮಿಸಬೇಕಾದ ದಾರಿ ಯಾವುದು ಎನ್ನುವುದು ಮುಖ್ಯ. ಮೇಲಿನ ಕಗ್ಗದಲ್ಲಿ ಈ ಮಾರ್ಗ ಯಾವುದಾಗಿರಬೇಕು ಎಂಬುದನ್ನು ಸೂಚಿಸಿದರೆ ಪ್ರತಿನಿತ್ಯ ಉದರಪೋಷಣೆಗಾಗಿ ನಾವು ಆಹಾರ ಸ್ವೀಕರಿಸುತ್ತೇವೆ. ಆಹಾರವೇನು ನಮಗೆ ನೀರು, ಗಾಳಿಯಂತೆ ಸುಲಭಕ್ಕೆ ದೊರೆಯುವುದಿಲ್ಲ. ಅದನ್ನು ಕಷ್ಟಪಟ್ಟು ಸಂಪಾದಿಸಲೇಬೇಕು. ಈ ಸಂಪಾದನೆಯ ರೀತಿ ಯಾವುದು ಎನ್ನುವುದೇ ಇಲ್ಲಿ ಮುಖ್ಯ ಪ್ರಶ್ನೆ. ಶ್ರಮದ ಮಾರ್ಗದಿಂದ ಸ್ವತಃ ತಾನೇ ದುಡಿಯುವುದನ್ನು ಕಾಯಕವೆನ್ನಬಹುದು. ವಚನಕಾರರು “ಕಾಯಕವೇ ಕೈಲಾಸ” ಎಂದ ಮಾತು ಈ ಅರ್ಥದಲ್ಲಿಯೇ, ಸ್ವತಃ ತನ್ನ ದೈಹಿಕ ಶ್ರಮದಿಂದ ಸಂಪಾದಿಸುವ ರೀತಿ ಅದು. ಮತ್ತೊಂದು ಬಾಹ್ಯ ಸಂಸ್ಕೃತಿಯಲ್ಲಿ ಈ ಪದ ಮಾರ್ಕ್ಸ್ ಸಿದ್ಧಾಂತದಲ್ಲಿದೆ. ಆದರೆ ಅಲ್ಲಿನ ವ್ಯತ್ಯಾಸವೆಂದರೆ

ಬೇರೆಯವರು ದುಡಿಯುವ ಫಲವನ್ನು ತಾನು ಪಡೆಯುವುದು, ಇಲ್ಲಿ ಫಲ ಪಡೆಯುವವನು ಯಾವ ಶ್ರಮವನ್ನೂ ಹಾಕುವುದಿಲ್ಲ. ನಿಜವಾದ ಶ್ರಮಿಕನಿಗೆ ಇಲ್ಲಿ ದೊರೆಯುವ ಬೆಲೆ ಗೌಣ. ಆದರೆ ಧನಿಕನು ತನ್ನ ಹಣದಿಂದ ಎಲ್ಲವನ್ನೂ ಕೊಂಡುಕೊಳ್ಳಲು ಬಯಸುತ್ತಾನೆ. ಈ ಕೊಳ್ಳುವ ಶಕ್ತಿ ಬಂದದ್ದು ಕೂಡ ಶ್ರಮವಿಲ್ಲದೆಯೇ. ಇದು ಯೋಗ್ಯವಾದ ಮಾನದಂಡವಲ್ಲ. ಆದುದರಿಂದಲೇ ಡಿವಿಜಿಯವರು ಹೇಳುತ್ತಾರೆ; ಪ್ರತಿನಿತ್ಯ ಊಟ ಮಾಡುವಾಗ ನಾವು ತಿನ್ನುವ ಆಹಾರ ನಮ್ಮ ಶ್ರಮದ ಸಂಪಾದನೆಯದೋ ಅಥವಾ ಇನ್ನೊಬ್ಬರ ಶ್ರಮದಿಂದ ಗಳಿಸಿದ್ದೋ ಎಂದು ಆಲೋಚಿಸಬೇಕು.

ನಾವು ದುಡಿದು ತಿನ್ನಬೇಕು, ಜೊತೆಗೆ ಬೇರೆಯವರು ದುಡಿಯುವುದಕ್ಕೆ ಅನುವು ಮಾಡಿಕೊಡಬೇಕು. ಅಗತ್ಯಕ್ಕಿಂತ ಹೆಚ್ಚು ಗಳಿಸಿದರೆ, ಅದನ್ನು ಜೀರ್ಣಿಸಿಕೊಳ್ಳಲಾಗುವುದಿಲ್ಲ; ಅದು ಭೂಶೇಷವಾಗುತ್ತದೆ. ಆದರೆ ನಮಗೆ ಸಂಗ್ರಹಿಸುವುದರಲ್ಲಿಯೇ ಆಸಕ್ತಿ ಅಗತ್ಯವಿರಲಿ, ಇಲ್ಲದಿರಲಿ ಆ ವಸ್ತು ನಮ್ಮ ಮನೆಯ ಅಂಗಳದಲ್ಲಿರಬೇಕು ಎನ್ನುವುದು ನಮ್ಮ ಎಡೆಬಿಡದ ಬಯಕೆ. ನಮ್ಮ ಮನೆಯಲ್ಲಿ ಎಲ್ಲ ವಸ್ತುಗಳನ್ನೂ ಸಂಗ್ರಹಿಸುತ್ತಾ ನಾವೂ ಒಂದು ವಸ್ತುವಾಗಿ ರೂಪಾಂತರಗೊಳ್ಳುವುದರ ಬಗ್ಗೆ ನಮಗೆ ಯಾವ ಆತಂಕವೂ ಇಲ್ಲವಾಗಿದೆ.

ಜಗತ್ತಿನ ಪ್ರಸಿದ್ಧ ಕಥೆಗಾರ ಕಾಫ್ಕನ "ದ ಮೆಟಫರ್" ಕತೆ ಮೇಲಿನ ಕಗ್ಗಕ್ಕೆ ಒಂದು ಸುಂದರ ರೂಪಕವಾಗುತ್ತದೆ ವಾಸ್ತವವಾಗಿ ಕಾಫ್ಕನ ಈ ಕಥೆಯನ್ನು "ರೂಪಾಂತರ" ಎಂಬ ಹೆಸರಿನಲ್ಲಿ ಕೆ.ವಿ. ಅಕ್ಷರರವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಕಥೆಯಲ್ಲಿನ ಮನುಷ್ಯ ಒಂದು ಫ್ಯಾಕ್ಟರಿಯಲ್ಲಿ ಹಗಲಿರುಳು ದುಡಿಯುತ್ತಾ ಒಂದು ದಿನ ತನ್ನ ಕೋಣೆಯಲ್ಲಿ ಜೇಡರಹುಳುವಾಗಿ ಪರಿವರ್ತನೆಯಾಗಿ ಬಿಡುತ್ತಾನೆ. ಅವನ ದುಡಿಮೆಯನ್ನು ಪ್ರೀತಿಸುತ್ತಿದ್ದ ಜನರೇ ಅವನಿಂದ ದೂರವಾಗುತ್ತಾರೆ. ಈ ಕಥೆಯ ಕೇಂದ್ರವಸ್ತು ಒಂದು ತೆರಣಿಯ ಹುಳು. "ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ ತನ್ನ ನೂಲಿನಿಂದ ತಾನೇ ಸುತ್ತಿಕೊಂಡು ಸಾಯುವಂತೆ ಆಗುವುದು. ಆರಂಭಿಕ ಕಾಲದಲ್ಲಿ ನಾವೇ ನಮ್ಮ ಸುತ್ತ ಸೃಷ್ಟಿಸಿಕೊಳ್ಳುವ ಬಗೆಬಗೆಯ ಆಸೆಬುರಕತನ ನಮ್ಮನ್ನು ಹೇಗಾದರೂ ಸರಿಯೇ ಸಂಪತ್ತನ್ನು ಹೊಂದುವಂತೆ ಪ್ರೇರೇಪಿಸುತ್ತದೆ. ಕೇವಲ ದೋಚುವ ಕ್ರಿಯೆಯಲ್ಲಿಯೇ ನಿರತರಾಗುವಂತೆ ಮಾಡಿದೆ. ಇದು ಅಪಾಯಕಾರಿ. ನಮ್ಮ ಶ್ರಮ ಅದಕ್ಕೆ ತನ್ನ ಪ್ರತಿಫಲ, ಪ್ರತಿಫಲಕ್ಕೆ ತಕ್ಕ ಬದುಕು ನಮ್ಮದಾಗಿರಬೇಕು.

**ಡಾ. ಎಂ.ಎನ್. ನಂದೀಶ್ ಹಂಚೆ**

ಪ್ರವಚನಸಾರ

# ಬೆಳಕಿನ ಬಾಳು

**ಶ್ರೀ ಸಿದ್ಧೇಶ್ವರ ಸ್ವಾಮಿಗಳು**

ಮುಂಡಕೋಪನಿಷತ್ತಿನಲ್ಲಿ ಅಂತಿಮ
ವಸ್ತುವನ್ನು ಕುರಿತು ಒಂದು ಮಾತು ಹೀಗಿದೆ.
ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ
ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ ।
ತಮೇವ ಭಾಂತಮನುಭಾತಿ ಸರ್ವಂ
ತಸ್ಯ ಭಾಷಾ ಸರ್ವಮಿದಂ ವಿಭಾತಿ ।
(ಶ್ಲೋಕ 10)

ಅಲ್ಲಿ ಸೂರ್ಯನು ಪ್ರಕಾಶಿಸುವುದಿಲ್ಲ. ಚಂದ್ರ ತಾರಕೆಗಳು ಮಿನುಗುವುದಿಲ್ಲ. ವಿದ್ಯುತ್ ಪ್ರಕಾಶವೂ ಅಲ್ಲಿಲ್ಲ. ಅಂದ ಮೇಲೆ ಈ ಅಗ್ನಿಯ ಪಾಡೇನು? ಅವನು ಪ್ರಕಾಶಿಸುತ್ತಾನೆ. ಅವನ ಪ್ರಕಾಶವನ್ನು ಗ್ರಹಿಸಿಯೇ ಎಲ್ಲಾ ವಸ್ತುಗಳು ಪ್ರಕಾಶಿಸುವವು.

ಹೀಗೆ ಸೂರ್ಯ–ಚಂದ್ರರನ್ನೂ, ವಿದ್ಯುತ್–ತಾರೆ–ಅಗ್ನಿಗಳನ್ನೂ ಬೆಳಗುವ ಆ ಪರಮಪ್ರಕಾಶ ಯಾವುದು?

ಗಿರಿ–ಗಹ್ವರ, ಗಿಡ–ಗಂಟಿ, ಪಶು–ಪಕ್ಷಿ, ಹಳ್ಳ–ಕೊಳ್ಳ, ಜೀವ–ಜಂತುಗಳಿಂದ ಕೂಡಿದ ಈ ಬಾಹ್ಯ ಪ್ರಪಂಚ ಸುವಿಶಾಲ! ಇಲ್ಲಿರುವ ವಸ್ತುಗಳನ್ನು ನೋಡಲು ಸೂರ್ಯ–ಚಂದ್ರಾದಿಗಳ ಭೌತ ಪ್ರಕಾಶವು ಅತ್ಯವಶ್ಯ. ಅದಿಲ್ಲದಿದ್ದರೆ ಈ ಪ್ರಪಂಚದಲ್ಲಿ ನಾವು ಕಣ್ಣಿದ್ದೂ ಕುರುಡರೇ!

ಇನ್ನು ನಮ್ಮಂತರಂಗದಲ್ಲಿ ಮನದೊಳಗೆ ಅದಕ್ಕಿಂತಲೂ ಭವ್ಯ ಪ್ರಪಂಚವಿದೆ. ಬಾಹ್ಯ ಪ್ರಪಂಚದ ವಸ್ತುಗಳಿಗೆ ಒಂದು ಅಳತೆ, ಸಂಖ್ಯೆ, ಸೀಮೆಯಾದರೂ ಇರಬಹುದು. ಆದರೆ ನಮ್ಮೊಳಗಿರುವ ವಿಷಯಗಳಿಗೆ, ವಿಚಾರಗಳಿಗೆ, ಭಾವನೆಗಳಿಗೆ, ಕಲ್ಪನೆಗಳಿಗೆ ಸಂಖ್ಯೆಯಿಲ್ಲ, ಸೀಮೆಯಿಲ್ಲ! ರಾಗ–ದ್ವೇಷ, ಸುಖ–ದುಃಖ, ಮೋಹ–ಮದ, ಆಶೆ–ಆಮಿಷ, ಒಂದೇ ಎರಡೇ? ಅನಂತ ವಿಷಯಗಳು ನಮ್ಮ ಅಂತರಂಗದೊಳಗೆ. ಅವುಗಳನ್ನೆಲ್ಲ ನಾವು ಯಾವ ಬೆಳಕಿನಲ್ಲಿ ಕಾಣುತ್ತೇವೆ?

ಒಂದು ಮಗು ಎಂದೋ ತೀರಿಹೋಗಿದೆ. ಇಂದಿಗೂ ತಾಯಿ ಆ ಮಗುವನ್ನು ಸ್ಮರಿಸಿಕೊಂಡು ತನ್ನ ಹೃದಯದಲ್ಲಿ ಅದನ್ನು ಸ್ಪಷ್ಟವಾಗಿ ಕಾಣುತ್ತಾಳೆ! ಕಣ್ಣೆದುರಿಗಿರದ,

ಜಗವನ್ನೇ ತೊರೆದ ಆ ಮಗುವನ್ನು ನಿಚ್ಚಳವಾಗಿ ತಂದು ತೋರಿದ ಆ ದಿವ್ಯ ಬೆಳಕು ಯಾವುದು? ಎಲ್ಲಿದೆ? ಅದರ ಸ್ವರೂಪವೇನು? ಒಂದು ಕ್ಷಣ ಕಣ್ಣು ಮುಚ್ಚಿ ಧ್ಯಾನಕ್ಕೆ ಕುಳಿತುಕೊಳ್ಳಿ. ಆಗ ಹೊರಗಿನ ಮನೆ ಒಳಗಿನ ಮನೆಯಾಗುತ್ತದೆ. ಹೊರಗಿರುವ ಜೀವಜಂಗುಳಿ ಸಮಸ್ತ ಪ್ರಪಂಚವೆಲ್ಲ ನಮ್ಮೊಳಗಿನ ಪ್ರಪಂಚವಾಗಿಬಿಡುತ್ತದೆ. ಹೊರಗಿನ ಪ್ರಪಂಚಕ್ಕಿಂತ ಚೆನ್ನಾಗಿ, ಮುದ್ದಾಗಿ ಕಾಣುತ್ತದೆ! ಅದು ಯಾವ ಬೆಳಕಿನಡಿಯಲ್ಲಿ, ಮೋಡಿಯಲ್ಲಿ ಕಂಡಿತು? ಯಾವುದೋ ತೆರೆಯ ಮರೆಯಲ್ಲಿರುವ ಆ ಬೆಳ್ಳಂಬೆಳಕನ್ನು ಗುರುತಿಸುವ ಬಗೆ ಯಾವುದು? ಬಟ್ಟೆ ಯಾವುದು?

ಎಣ್ಣೆಯಿಂದ, ಬೆಣ್ಣೆಯಿಂದ ಉರಿಯುವ, ಕಣ್ಣಿದ್ದರೆ ಕಾಣುವ ಬಹಿರಂಗದ ಬೆಳಕಿನ ಮೂಲಗಳಿಗೆ ನಿಶ್ಚಿತ ಕೇಂದ್ರವಿದೆ, ಮೇರೆಯಿದೆ, ಆಕಾರವಿದೆ, ಆಯುಷ್ಯವಿದೆ. ಕೋಟ್ಯಂತರ ವರುಷಗಳಿಂದ ಈ ಬ್ರಹ್ಮಾಂಡವನ್ನು ಬೆಳಗುತ್ತಿರುವ ರವಿತಾರೆಗಳೂ ಈ ನಿಯಮಕ್ಕೆ ಹೊರತಾಗಿಲ್ಲ! ಆದರೆ ಯಾವುದರ ಹಂಗೂ ಇಲ್ಲದೆ ನಿರಂತರ ಬೆಳಗುವ ಅಂತರಂಗದ ಅರಿವಿನ ಜ್ಯೋತಿಯು ನಿರಾಕಾರ-ನಿಸ್ಸೀಮ-ನಿರ್ಮಲ, ಅಖಂಡ, ಅನ್ವಯ! ಈ ಜ್ಯೋತಿಯೇ ಪರಂಜ್ಯೋತಿ ಪರಮಾತ್ಮ. ಸೂರ್ಯ ಚಂದ್ರ ನಕ್ಷತ್ರಾದಿಗಳೆಲ್ಲವೂ ಆ ಪರಂಜ್ಯೋತಿ ಪರಮಾತ್ಮನ ಪ್ರಕಾಶದಲ್ಲಿಯೇ ಬೆಳಗುತ್ತಲಿವೆ!

ಅಂತರಂಗದ ಈ ಮಹಾಜ್ಯೋತಿಯಿಂದ ನಮ್ಮ ಕಣ್ಣೊಳಗೆ ಕಳೆ, ಭಾವದಲ್ಲಿ ಬಲ, ಬುದ್ಧಿಯಲ್ಲಿ ತೇಜ, ಆತ್ಮನಲ್ಲಿ ಅರಿವು! ಹೆಚ್ಚೇನು ವ್ಯಷ್ಟಿ-ಸಮಷ್ಟಿಗಳಿಂದ ಕೂಡಿದ ಈ ಸಮಸ್ತ ಪ್ರಪಂಚವು ಆ ಕರುಣಾಳು ಬೆಳಕಿನ ಬಲದಿಂದ ಬದುಕಿದೆ! ಚರಾಚರ ಪ್ರಪಂಚದ ಪ್ರಾಣಕ್ಕೆ ಪ್ರಾಣವಾಗಿರುವ ಆ ಮಹಾಬೆಳಗಿನ ಅರಿವುಳ್ಳಾತನೇ ಗುರು. ಬೆಳಕನ್ನೇ ದೇವರು ಎಂದಾಗ ಗುರು ಬೇರೆಯಲ್ಲ, ದೇವರು ಬೇರೆಯಲ್ಲ, ಗುರುವಿನ ಅದೃಶ್ಯರೂಪವೇ ದೇವನು. ದೇವನ ದೃಶ್ಯರೂಪವೇ ಗುರು! ಆ ಪರಂಜ್ಯೋತಿ ಪರಮಾತ್ಮನ "ಅರಿವನ್ನೇ" ತನ್ನ ಸರ್ವಾಂಗದ ಒಳಹೊರಗೆಲ್ಲ ತುಂಬಿಕೊಂಡು ಅರಿವಿನ ಮೂರುತಿಯಾದ ಗುರು ದೇವರಲ್ಲದೆ ಮತ್ತಿನ್ನೇನು?

ದೇವರ ಸ್ವರೂಪನಾದ ಆ ಗುರುವಿನ ವಾಣಿ ಅದು ದೇವವಾಣಿ! ದಿವ್ಯವಾಣಿ! ಬೆಳ್ಳಂಬೆಳಕಿನ ಭವ್ಯವಾಣಿ! ಶ್ರೀಗುರುದೇವರ ಆ ಬೆಳಕಿನ ವಾಣಿಯನ್ನು ಸುಕರ್ಮದೊಂದಿಗೆ ನಾವು ಬಳಸಿದರೆ ನಮ್ಮ ಭಕ್ತಿಗೆ ಅದಮ್ಯ ಶಕ್ತಿ! ಎಂಥಾ ಎಡರುತೊಡರುಗಳನ್ನು ಎದುರಿಸಿಯೂ ಭಕ್ತನ ಸಾಧನೆ ನಿರಂತರ ನಡೆಯುತ್ತದೆ! ಸಿದ್ಧಿಯ ಶ್ರೀಗಿರಿಯನ್ನು ತಲುಪುತ್ತದೆ! ಅರಿವಿನ ಅಮೃತಫಲವನ್ನು, ಜೀವನ್ಮುಕ್ತಿಯನ್ನು ಕರುಣಿಸುತ್ತದೆ! ಅದೇ ಬೆಳಕಿನ ಬಾಳು!! ಆದ್ದರಿಂದ ನಿತ್ಯವೂ ನಮ್ಮೊಂದಿಗೆ ಮಹಾತ್ಮರ ಮಾತುಗಳಿರಬೇಕು. ಆ ಮಾತಿಗೆ ತಕ್ಕ ಬದುಕೂ ನಮ್ಮದಾಗಿರಬೇಕು. ಬದುಕಿರುವವರೆಗೆ ಭಕ್ತನು ಸನ್ಮಾರ್ಗದಲ್ಲಿಯೇ ನಡೆಯಬೇಕು. ಸತ್ಕಾರ್ಯಗಳನ್ನೇ ಮಾಡಬೇಕು. ಅದರಿಂದ ಅವನ ಜ್ಞಾನಕ್ಕೆ ಬಲ, ಭಕ್ತಿಗೆ ಸಂರಕ್ಷಣೆ!

ಸತ್ಕಾರ್ಯಗಳೆಂದರೆ ಯಾವುವು? ಸನ್ಮಾರ್ಗವೆಂದರೇನು? ಯಾವ ಕಾರ್ಯಗಳನ್ನು ಮಾಡಿದರೆ ಮಹಾತ್ಮರು ಕೊಟ್ಟಿರುವ ಜ್ಞಾನದ ದೀವಿಗೆ ಆರುವುದಿಲ್ಲವೋ, ಭಕ್ತಿಯ ಕುಸುಮ ಬಾಡುವುದಿಲ್ಲವೋ, ಅವು ಸತ್ಕಾರ್ಯಗಳು, ಸುಕರ್ಮಗಳು. ಹಾಗೆ ನೋಡಿದರೆ ಸತ್ಯಶುದ್ಧ ಭಾವದಿಂದ ಮಾಡಿದ ಕರ್ಮಗಳೆಲ್ಲ ಸುಕರ್ಮಗಳೇ! ಶಿವಕರ್ಮಗಳೇ! ಇನ್ನು ಸತ್ಯದರ್ಶನವನ್ನು ಮಾಡಿಕೊಡುವ ಮಾರ್ಗವೇ ಸನ್ಮಾರ್ಗ!

ಜಪಾನ್ ದೇಶದಲ್ಲಿ ಒಬ್ಬ ಶ್ರೇಷ್ಠ ಬೌದ್ಧ ಗುರು. ವಿಸ್ತಾರವಾದ ಬೌದ್ಧ ಮಂದಿರ. ಸುತ್ತೆಲ್ಲ ನಿಸರ್ಗ ಹರವಿದೆ. ಅದರ ಮಧ್ಯದಲ್ಲಿ ಗುರುವಿನ ಆನಂದವಾಸ.

ದೇಶದ ಮೂಲೆಮೂಲೆಗಳಿಂದ ಜನ ಗುರುಗಳ ದರ್ಶನಕ್ಕೆ ಬರುತ್ತಿದ್ದರು. ಒಂದು ದಿನ ಒಬ್ಬ ಯುವಕ ಬಂದ. ಕೆದರಿದ ತಲೆ, ಸೊರಗಿದ ದೇಹ, ಕೊಳಕು ಬಟ್ಟೆ, ಕಣ್ಣಲ್ಲಿ ತೇಜ, ಅಂತರಂಗದಲ್ಲಿ ನಿರ್ವಾಣದ ಆದಮ್ಯ ಬಯಕೆ.

ಗುರುಗಳಿಗೆ ವಂದಿಸಿ ಯುವಕ ಹೇಳಿದ, "ಪೂಜ್ಯರೆ, ನಾನು ನಿರ್ವಾಣ ಹೊಂದಬೇಕು. ಬುದ್ಧತ್ವ ಪಡೆಯಬೇಕು. ದಯವಿಟ್ಟು ನನಗೆ ಸನ್ಮಾರ್ಗ ತೋರಿರಿ."

ಪ್ರಪಂಚದ ಹೊಂಗನಸು ಕಾಣುವ ವಯಸ್ಸಿನಲ್ಲಿ ಪರಮಾರ್ಥವನ್ನು ಬಯಸಿ ಬಂದಿದ್ದ ಯುವಕ. ಗುರುಗಳಿಗೆ ಅಪಾರ ಸಂತಸ. ಅಲ್ಲೇ ಬಿದ್ದಿದ್ದ ಒಂದು ದೊಡ್ಡ ಬಂಡೆಗಲ್ಲನ್ನು ತೋರಿಸಿ, "ಈ ಕಲ್ಲನ್ನು ನೀನು ಕಡೆಯುತ್ತಿರು. ನಿನಗೆ ನಿರ್ವಾಣ ವಾಗುತ್ತದೆ' ಎಂದು ಹೇಳಿದರು.

ಯುವಕ ಶ್ರದ್ಧಾಳು, ಕೈಯೊಳಗೆ ಚಾಣ ಸುತ್ತಿಗೆ ಹಿಡಿದು ಕಲ್ಲು ಕಟೆಯಲು ಪ್ರಾರಂಭಿಸಿದ. ದಿನಗಳು, ಮಾಸಗಳು, ವರ್ಷಗಳೇ ಉರುಳಿದವು! ಗುರುಗಳು ಕೊಟ್ಟ ಕಾರ್ಯದಲ್ಲಿ ತನ್ನನ್ನೇ ತಾನು ಮರೆತಿದ್ದ! ಒಂದು ದಿನ ಅದೇ ಕಲ್ಲೊಳಗೆ ಭಗವಾನ್ ಬುದ್ಧ ಮೂಡಿದ್ದ! ಅವನ ಮನದೊಳಗೂ ಬುದ್ದನ ಬೆಳಗು ತುಂಬಿತ್ತು! ಒಳಗೂ ಹೊರಗೂ ಬುದ್ಧನೇ ಬುದ್ಧ! ಯುವಕನಿಗೆ ನಿರ್ವಾಣ ಪ್ರಾಪ್ತವಾಗಿತ್ತು!!

ಭಕ್ತಿಯೋಗ ಫಲಿಸಲು, ಪರಮಶಾಂತಿ ಪಡೆಯಲು ಇಂಥದೇ ಕಾರ್ಯ ಮಾಡಬೇಕೆಂದೇನಿಲ್ಲ, ಶರಣರು ಎಲ್ಲ ಕಾರ್ಯಗಳನ್ನೂ ದೇವಕಾರ್ಯಗಳೆಂದೇ ಮಾಡಿದರು! ಬಟ್ಟೆ ತೊಳೆದರು. ಬುಟ್ಟಿ ಹೆಣೆದರು, ಕಟ್ಟಿಗೆ ಮಾರಿದರು. ಜೀವನಾವಶ್ಯಕವಾದ ಯಾವ ಕಾರ್ಯವನ್ನೂ ಅವರು ಕೀಳೆಂದು ಭಾವಿಸಲಿಲ್ಲ. ಅಂತೆಯೇ ಅವರು ಭಕ್ತಿಭಾವದಿಂದ ಮಾಡಿದ್ದೆಲ್ಲ ಕಾಯಕವಾಯಿತು! ಕೈಲಾಸವಾಯಿತು!!

ಹೀಗೆ ಸದ್ಗುರುಗಳು ಕರುಣಿಸಿದ ಅರಿವಿನ ಮಹಾಬೆಳಕಿನಲ್ಲಿ ಶಿವಕರ್ಮಗಳನ್ನು ಮಾಡುತ್ತ ಸನ್ಮಾರ್ಗದಲ್ಲಿ ನಡೆಯುವುದು ಭಕ್ತಿ! ಅದೇ ಬೆಳಕಿನ ಬಾಳು!

(ಅಕ್ಟೋಬರ್ 10, 1994)

# ತೋರುಂಬ ಲಾಭ

ಡಾ. ಎಂ.ಎನ್. ನಂದೀಶ್ ಹಂಚೆ

ಒಂದೇ ಸಮನೆ ಗಂಟೆ ಬಾರಿಸುವ ಶಬ್ದ ಕೇಳಿದಾಗ ಪಂಚೆಯುಟ್ಟು, ಮೈಮೇಲೆ ಕೆಂಪು ಅಂಗವಸ್ತ್ರವನ್ನು ಅಡ್ಡಡ್ಡ ಹೊದ್ದುಕೊಂಡು ಹಣೆಗೆ ತ್ರಿಪುಂಡ್ರ ಧರಿಸಿ, ವಕ್ಷಸ್ಥಳದಲ್ಲಿ ಕರಡಿಗೆ ಇಟ್ಟುಕೊಂಡು, ಕೈಯಲ್ಲಿ ತಟ್ಟೆ ಹಿಡಿದು ನಾ ಮುಂದು ತಾ ಮುಂದು ಎಂದು ಪ್ರಸಾದಾಲಯಕ್ಕೆ ತೆರಳಿ ಸರದಿಯ ಸಾಲಿನಲ್ಲಿ ಕುಳಿತುಕೊಳ್ಳುವುದೇ ಒಂದು ಸಂಭ್ರಮ. ಈ ಮೇಲಿನ ಅಂಶಗಳಲ್ಲಿ ಯಾವುದೇ ಒಂದು ಕೊರತೆಯಾದರೂ ಅಂಥವರು ಊಟದ ಕೋಣೆಗೆ ಪ್ರವೇಶಿಸುವಂತೆ ಇರಲಿಲ್ಲ. ಅವರಿಗೆ ಆ ದಿನ ಊಟ ಇರುತ್ತಿರಲಿಲ್ಲ. ಹಾಗಾಗಿ ಎಲ್ಲರೂ ಕಡ್ಡಾಯವಾಗಿ ಈ ಸಂಪ್ರದಾಯವನ್ನು ಪಾಲಿಸಬೇಕಾಗಿತ್ತು. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ವೀರಶೈವ ವಿದ್ಯಾರ್ಥಿಗಳಲ್ಲದವರೂ ಕೂಡ ಲಿಂಗವನ್ನು ಧರಿಸುತ್ತಿದ್ದರು. ಸ್ವತಃ ಶ್ರೀಗಳೇ ಎಲ್ಲರಿಗೂ ಲಿಂಗದೀಕ್ಷೆ ನೀಡುತ್ತಿದ್ದರು. ಊಟಿ, ಕೊಳ್ಳೇಗಾಲ, ರಾಮಾಪುರದಲ್ಲಿ ಹೀಗೆ ಶ್ರೀಗಳಿಂದ ಲಿಂಗದೀಕ್ಷೆ ಸ್ವೀಕರಿಸಿದ ಸಾವಿರಾರು ಜನರಿದ್ದರು. "ಲಿಂಗ ಧರಿಸಬೇಕಾದರೆ ಅವರು ಹುಟ್ಟಿನಿಂದ ಲಿಂಗಾಯತರೇ ಆಗಬೇಕಿಲ್ಲ. ಯಾರಿಗೆ ನಂಬಿಕೆ, ಶ್ರದ್ಧೆ ಇರುತ್ತದೆಯೋ ಅವರೆಲ್ಲರೂ ಧರಿಸಬಹುದು" ಎಂದು ಶ್ರೀಗಳು ಹೇಳುತ್ತಿದ್ದರು. ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳು ದಿನಕ್ಕೆ ಎರಡು ಹೊತ್ತು ಮಾತ್ರ ಪ್ರಸಾದ ಸ್ವೀಕರಿಸಬಹುದಾಗಿತ್ತು. ಪ್ರಸಾದ ಸ್ವೀಕರಿಸುವ ಹೊತ್ತನ್ನು ವಿದ್ಯಾರ್ಥಿಯೇ ನಿರ್ಧರಿಸಬಹುದಿತ್ತು. ನಿಲಯದ ಮೇಲ್ವಿಚಾರಕರು ಆ ವಿದ್ಯಾರ್ಥಿಯು ದಿನದ ಆ ಸಮಯಕ್ಕೆ ಬಂದಿದ್ದನೆ, ಇಲ್ಲವೆ ಎಂಬುದನ್ನು ನೆನಪಿನಿಂದಲೇ ಊಹಿಸಿ ದಾಖಲಿಸುತ್ತಿದ್ದರು. ಸರತಿಯ ಸಾಲಿನಲ್ಲಿ ತಾನೇ ಮೊದಲಿಗನಾಗಿ ಪ್ರಸಾದ ಸ್ವೀಕರಿಸಬೇಕು ಎನ್ನುವುದು ಎಲ್ಲ ವಿದ್ಯಾರ್ಥಿಗಳ ಬಯಕೆಯಾಗಿರುತ್ತಿತ್ತು.

ಅಂದೂ ಹೀಗೆ ಸರತಿಯ ಸಾಲಿನಲ್ಲಿ ಕುಳಿತವರಲ್ಲಿ ಸಿದ್ದಲಿಂಗಪ್ಪನೂ ಒಬ್ಬ. ಎಂಟನೆಯ ತರಗತಿಯಲ್ಲಿ ಓದುತ್ತಿದ್ದ ಆತನಿಗೆ ವಿದ್ಯಾರ್ಥಿನಿಲಯದಲ್ಲಿ ಸ್ವಲ್ಪ ಹೆಚ್ಚಿನ ಗೌರವವಿತ್ತು. ಕಾರಣ, ಆತ ಪರಮಪೂಜ್ಯ ರಾಜೇಂದ್ರ ಶ್ರೀಗಳವರ ಪೂರ್ವಾಶ್ರಮದ ಹತ್ತಿರದ ಸಂಬಂಧಿಯಾಗಿದ್ದ. ಮಾತ್ರವಲ್ಲ, ಮುಂದೆ ಹೆಸರಾಂತ ಮಠವೊಂದಕ್ಕೆ ಉತ್ತರಾಧಿಕಾರಿ ಕೂಡ ಆಗುವವನಿದ್ದ. ಸಾಮಾನ್ಯವಾಗಿ ಬಿಡುವಿದ್ದಾಗಲೆಲ್ಲ ಶ್ರೀಗಳು ತಾವೇ ಪ್ರಸಾದದ ಪ್ರಾಂಗಣಕ್ಕೆ ಬಂದು ಪ್ರಾರ್ಥನೆಯನ್ನು ಹೇಳುತ್ತಿದ್ದರು. ಸ್ವತಃ ಪ್ರಸಾದವನ್ನು

ಕೂಡ ಬಡಿಸುತ್ತಿದ್ದರು. ಹುಡುಗರು ಸರತಿಯ ಸಾಲಿನಲ್ಲಿ ಪ್ರಸಾದ ಬಡಿಸುವುದನ್ನು ವೀಕ್ಷಿಸುತ್ತ ಶತಪಥ ಹಾಕುತ್ತಿದ್ದರು. “ಬಡಿಸಿದ ಪ್ರತಿ ಅನ್ನದ ಅಗುಳಿನಲ್ಲೂ ಭಗವಂತನಿದ್ದಾನೆ. ಹಾಗಾಗಿ ಅದನ್ನು ವ್ಯರ್ಥ ಮಾಡಬಾರದು” ಎನ್ನುವುದು ಶ್ರೀಗಳ ನಂಬಿಕೆಯಾಗಿತ್ತು. ಹಾಗೆ ನೋಡಿದರೆ, ವೀರಶೈವ ಪರಂಪರೆಯ ಎಲ್ಲ ಗುರುಗಳೂ ಸಹ ಊಟದ ತಟ್ಟೆಯಲ್ಲಿ ಬಡಿಸಿದ ಯಾವ ಪದಾರ್ಥವನ್ನೂ ಬಿಡದೆ ಸ್ವೀಕರಿಸುವುದು, ಅನಂತರ ಆ ತಟ್ಟೆಯನ್ನು ತೊಳೆದ ಆ ನೀರನ್ನೂ ಕುಡಿಯುವುದು ಒಂದು ಪದ್ಧತಿಯಾಗಿತ್ತು.

ಅಂದು ರಾಜೇಂದ್ರ ಶ್ರೀಗಳು ಪ್ರಸಾದಾಲಯಕ್ಕೆ ಬಂದವರೆ ಎಲ್ಲರ ಪ್ರಾರ್ಥನೆಯನ್ನು ಗಮನಿಸುತ್ತ ಯಾರು ಯಾರು ಕರಡಿಗೆಯನ್ನು ಧರಿಸಿದ್ದಾರೆಂಬುದನ್ನು ಪರಿಶೀಲಿಸತೊಡಗಿದರು. ವಿದ್ಯಾರ್ಥಿನಿಲಯದಲ್ಲಿ ಎಲ್ಲ ವಿದ್ಯಾರ್ಥಿಗಳೂ ಸಾಮಾನ್ಯವಾಗಿ ಕರಡಿಗೆ ಧರಿಸುತ್ತಿದ್ದರು. ಕೆಲವರು ಪ್ರಸಾದದ ಅಂಗಳದಿಂದ ತಮ್ಮ ಕೊಠಡಿಗೆ ಹೋದ ಬಳಿಕ ಕರಡಿಗೆಯನ್ನು ತೆಗೆದು ಗೂಟದಲ್ಲೋ, ತಮ್ಮ ತಮ್ಮ ಟ್ರಂಕಿನಲ್ಲೋ ಇಡುತ್ತಿದ್ದರು. ಪ್ರಸಾದಾಲಯದಲ್ಲಿ ಕರಡಿಗೆಯನ್ನು ಆಗಾಗ ಪರಿಶೀಲಿಸುವ ಕೆಲಸ ನಡೆಯುತ್ತಿತ್ತು; ಕೆಲವೊಮ್ಮೆ ಕೊಠಡಿಗೆ ಹೋಗಿ ಕೂಡ ಪರಿಶೀಲಿಸುತ್ತಿದ್ದರು. ಯಾವ ವಿದ್ಯಾರ್ಥಿಯೂ ರೂಮಿನಲ್ಲಿ ದೇವರ ಚಿತ್ರಪಟವನ್ನು ಬಿಟ್ಟು ತಮಗೆ ಇಷ್ಟವಾದ ಕ್ರೀಡಾಪಟು, ಚಿತ್ರನಟ ಮುಂತಾದವರ ಚಿತ್ರವನ್ನು ಹಾಕುವಂತಿರಲಿಲ್ಲ. ಅಲ್ಲಿ ಕನ್ನಡಿಯೂ ಇರುತ್ತಿರಲಿಲ್ಲ. ಆಗಿನ ಕಾಲದ ಪ್ರಸಾದಾಲಯದಲ್ಲಿ ಈ ಎಲ್ಲ ಸಂಗತಿಗಳನ್ನೂ ಪರಿಗಣಿಸುತ್ತಿದ್ದರು. ಸಿದ್ದಲಿಂಗಪ್ಪ ರಜೆಯಲ್ಲಿ ಊರಿಗೆ ಹೋಗಿ ವಾಪಸು ಬರುವಾಗ ತನ್ನ ಕರಡಿಗೆಯನ್ನು ಅಲ್ಲಿಯೇ ಮರೆತು ಬಂದುಬಿಟ್ಟಿದ್ದನು. ಅದು ಅವನಿಗೆ ನೆನಪಾದದ್ದು ಊಟದ ಗಂಟೆ ಹೊಡೆದಾಗಲೇ. ಕರಡಿಗೆ ಇಲ್ಲದೆ ಪ್ರಸಾದಾಲಯಕ್ಕೆ ಹೋಗುವಂತಿಲ್ಲ. ಹೋಗದೆ ಇದ್ದರೆ ಹಸಿವಿನಿಂದ ಬಳಲಬೇಕಾಗುತ್ತದೆ. ಏನು ಮಾಡಬೇಕೆಂದು ತೋಚದೆ ಚಿಂತಾಕ್ರಾಂತನಾದನು. ಆಗ ಆತನಿಗೆ ಒಂದು ಉಪಾಯ ಹೊಳೆಯಿತು. ಟ್ರಂಕಿಗೆ ಹಾಕುವ ಸಣ್ಣ ಬೀಗಕ್ಕೆ ಮಂದಲಿಗೆಯ ದಾರವನ್ನು ಕಟ್ಟಿ ಅದನ್ನು ಧರಿಸಿಕೊಂಡು ಮೈಮೇಲೆ ಕೆಂಪುವಸ್ತ್ರವನ್ನು ಹೊದ್ದುಕೊಂಡು ತಟ್ಟೆ ಹಿಡಿದು ಪ್ರಸಾದಾಲಯಕ್ಕೆ ಬಂದನು. ಇದೆಲ್ಲವನ್ನೂ ಪರಿಶೀಲಿಸಿದ ಶ್ರೀಗಳು ಅಲ್ಲಿ ಏನೂ ಮಾತನಾಡದೆ ಎಲ್ಲರಿಗೂ ಪ್ರಸಾದ ಬಡಿಸುವಂತೆ ತಿಳಿಸಿ ತಮ್ಮ ಕೋಣೆಗೆ ತೆರಳಿದರು.

ಪ್ರಸಾದ ಸ್ವೀಕರಿಸಿದ ನಂತರ ಸಿದ್ದಲಿಂಗಪ್ಪನಿಗೆ ಶ್ರೀಗಳು ಹೇಳಿ ಕಳುಹಿಸಿದರು. ಸಿದ್ದಲಿಂಗಪ್ಪ ಪ್ರಸಾದಾಲಯದಲ್ಲಿ ಶ್ರೀಗಳು ತಾನು ಕರಡಿಗೆ ಧರಿಸದೆ ಇರುವುದನ್ನು ಕಂಡುಹಿಡಿಯಲಿಲ್ಲ. ಅದೂ ಅಲ್ಲದೆ ಈಗ ಪ್ರಸಾದ ಮುಗಿದಿದೆ ಎಂದು ಮನಸ್ಸಿನಲ್ಲಿ ಧೈರ್ಯ ಮಾಡಿಕೊಂಡು ಅಡ್ಡವಸ್ತ್ರವನ್ನು ತೆಗೆದು ಅಂಗಿ ಧರಿಸಿಕೊಂಡು ಲಿಂಗವನ್ನು ತೆಗೆದುಹಾಕಿ ಶ್ರೀಗಳಿದ್ದ ಕೋಣೆಗೆ ತೆರಳಿದನು. ಶ್ರೀಗಳು ಕಚೇರಿಯಲ್ಲಿದ್ದ ಎಲ್ಲರನ್ನೂ ಹೊರಗೆ ಕಳುಹಿಸಿ, ಸಿದ್ದಲಿಂಗಪ್ಪನ ಮುಖ ನೋಡುತ್ತಾ “ಊರಿನಿಂದ ಯಾವಾಗ

ಬಂದೆ?" ಎಂದರು. "ನಿನ್ನೆ ಸಂಜೆ ಬಂದೆ" ಎಂದನು ಸಿದ್ದಲಿಂಗಪ್ಪ. ಹೀಗೆ ಹೇಳುವಾಗ ಸಿದ್ದಲಿಂಗಪ್ಪನ ಮುಖದಲ್ಲಿ ಯಾವ ಅಳುಕು, ಹಿಂಜರಿಕೆ ಇರಲಿಲ್ಲ. "ಎಲ್ಲಿ ನಿನ್ನ ಕರಡಿಗೆ ತೋರಿಸು" ಎಂದರು. ಆ ಅನಿರೀಕ್ಷಿತ ಪ್ರಶ್ನೆಯಿಂದ ಸ್ವಲ್ಪ ವಿಚಲಿತನಾದ ಸಿದ್ದಲಿಂಗಪ್ಪ ತಡವರಿಸಿಕೊಂಡು "ರೂಮಿನಲ್ಲಿದೆ" ಎಂದನು. "ಹೋಗಿ ಧರಿಸಿಕೊಂಡು ಬಾ" ಎಂದರು. ಆಗ ಸಿದ್ದಲಿಂಗಪ್ಪ "ಅದು... ಅದು..." ಎಂದು ತಡವರಿಸುತ್ತಿದ್ದಂತೆ "ನೀನು ಇಂದು ಪ್ರಾರ್ಥನೆಯಲ್ಲಿ ಕರಡಿಗೆ ಧರಿಸಿರಲಿಲ್ಲ ಅದು ನನಗೆ ಗೊತ್ತು" ಎಂದರು. ಸಿದ್ದಲಿಂಗಪ್ಪನಿಗೆ ತನ್ನ ತಪ್ಪಿನ ಅರಿವಾಗಿ ಶ್ರೀಗಳ ಕಾಲಿಗೆರಗಿ "ತಪ್ಪಾಯಿತು ಬುದ್ಧಿ" ಎಂದನು. ಆಗ ಶ್ರೀಗಳು "ನೀನು ಮಠದ ಹುಡುಗ, ಮುಂದೆ ಮಠಾಧಿಪತಿ ಆಗಬೇಕಾದವನು. ಅಂತಹವನು ಹೀಗೆ ಮಾಡಬಾರದು, ಅಲ್ಲವೆ" ಎಂದರು. "ಊಟದ ಸಮಯದಲ್ಲಿ ಕರಡಿಗೆ ಧರಿಸದಿದ್ದರೆ ಪ್ರಸಾದ ಸಿಗುವುದಿಲ್ಲವಲ್ಲ ಎಂದು ಹೀಗೆ ಮಾಡಿದೆ" ಎಂದ ಸಿದ್ದಲಿಂಗಪ್ಪ. ಆಗ ಶ್ರೀಗಳು "ನೀನು ಬೀಗವನ್ನು ಕರಡಿಗೆ ಎಂದು ಧರಿಸಿದ್ದಕ್ಕೆ ನನಗೆ ಬೇಜಾರಿಲ್ಲ, ತೋರಿಕೆಗೆ ಲಿಂಗ ಧರಿಸುವುದಕ್ಕಿಂತ ಬೀಗವನ್ನೇ ಲಿಂಗವೆಂದು ಧರಿಸಿದ್ದಿದ್ದರೆ ನನಗೆ ಇಷ್ಟವಾಗುತ್ತಿತ್ತು. ಆದರೆ ಹೀಗೆ ಮಾಡಿದ ನಿನಗೆ ಪ್ರಸಾದದ ಮೇಲಿನ ಆಸೆ ಮಾತ್ರ ಇತ್ತು. ಅದೂ ಅಲ್ಲದೆ 'ಇದು ನಮ್ಮ ಮಠ' ಎಂಬ ಒಂದು ರೀತಿಯ ಅಹಂಕಾರವಿತ್ತು. ಇದು ಯಾರಿಗೂ ಒಳ್ಳೆಯದಲ್ಲ. ಅದರಲ್ಲೂ ಮಠಾಧಿಪತಿ ಆಗುವವರಿಗೆ ಇಂಥ ಬುದ್ಧಿ ಇರಲೇಬಾರದು. ನಿನ್ನನ್ನು ಅನೇಕರು ಅನುಸರಿಸುತ್ತಾರೆ ಎಂಬುದು ನಿನಗೆ ತಿಳಿದಿರಬೇಕಾಗಿತ್ತು" ಎಂದರು. ಶ್ರೀಗಳ ಮಾತು ಸಿದ್ಧಲಿಂಗಪ್ಪನನ್ನು ಶೂಲದಂತೆ ಇರಿಯುತ್ತಿದ್ದವು. ಅವು ಆತನ ಒಳಗಣ್ಣನ್ನು ತೆರೆದವು. ಶ್ರೀಗಳ ಕಾಲು ಹಿಡಿದು, ಕಣ್ಣೀರುಗರೆದು ಮುಂದೆ "ಇನ್ನು ಮುಂದೆ ಹೀಗಾಗದಂತೆ ನೋಡಿಕೊಳ್ಳುತ್ತೇನೆ" ಎಂದು ಮಾತು ಕೊಟ್ಟನು. ಶ್ರೀಗಳು ಪ್ರೀತಿಯಿಂದ ಆತನ ತಲೆ ನೇವರಿಸಿದರು.

❑

ಅಯ್ಯಾ, ಕಾಲತೊಳೆದುಕೊಂಡು ಬಂದರೆ ಕಣ್ಣಮುಂದೆ ನಿಂದೆ.
ಕೈಯ ತೊಳೆದುಕೊಂಡು ಬಂದರೆ ಮನದ ಮುಂದೆ ನಿಂದೆ.
ತಲೆಯ ತೊಳೆದುಕೊಂಡು ಬಂದರೆ ಭಾವದ ಮುಂದೆ ನಿಂದೆ.
ಸಂದು ಸಂಶಯ ಕುಂದು ಕಲೆಯ ಕಳೆದುಳಿದು ಬಂದರೆ
ಸರ್ವಾಂಗಸನ್ನಿಹಿತನಾಗಿ ನಿಂದೆ.
ಬಂದ ಬರವು ಚಂದವಾಗಿ ನಿಂದರೆ ಅಂದಂದಿಗೆ ಅವಧರಿಸು
ಮುಂದುವರಿವೆನು ಮುದದಿಂದೆ ಗುರುನಿರಂಜನ ಚನ್ನಬಸವಲಿಂಗಾ.

**– ದೇಶಿಕೇಂದ್ರ ಸಂಗನಬಸವಯ್ಯ**

ವೀರಶೈವ ಟೀಕು ಸಾಹಿತ್ಯ ಸರಣಿ

# ಶಬರಶಂಕರವಿಲಾಸ–ಟೀಕು

**ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು**

ಇನ್ನು ವಿರೋಧಾಭಾಸಾಲಂಕಾರವನ್ನು ಹೇಳುತ್ತಾನೆ, ಇದೂ ಶ್ಲೇಷೋಪಜೀವ್ಯವಾಗಿಯೇ ಇರುವುದು, ಎಂತೆನೆ, – ಪರಸ್ಪರವಾಗಿ ವಿರುದ್ಧಾರ್ಥ ತೋರುವ ಎರಡು ವಿಶೇಷಣಗಳನ್ನು ಒಂದು ವಿಶೇಷ್ಯಕ್ಕೆ ಹೇಳಿದಾಗ ವಿಶೇಷಣ ವಾಕ್ಯದಲ್ಲಿ ತೋರುವ ವಿರುದ್ಧಾರ್ಥವನ್ನು ಶ್ಲೇಷದಿಂದ ಅರ್ಥಾತರವಂ ಕಲ್ಪಿಸಿ ಪರಿಹರಿಸುವುದರಿಂದ ಮುಂಚೆ ತೋರಿದ್ದ ವಿರೋಧವು ವಿರೊಧದ ಹಾಗೆ ಅಭಾಸವಾಗುತ್ತೆಯೇ ಹೊರತು ಅದು ದಿಟವಲ್ಲವೆಂಬಂತೆ ತೋರಿಸುವ ಕವಿ ಚಮತ್ಕಾರವೇ ವಿರೋಧಾಭಾಸಾಲಂಕಾರವೆನಿಸುವುದು. ಹೇಗೆಂದರೆ – ವಿಷಧರನಾಗಿಯುಂ – ಜಲವನ್ನು ಧರಿಸಿದ ಮೇಘವಾಗಿದ್ದರೂ, ಚಿರಪ್ರಭಾಸಂಗತಂ – ಬಹಳ ಹೊತ್ತು ಕಾಣಿಸುತ್ತಿರಲುಳ್ಳ ಬೆಳಕಿನೊಡನೆ ಕೂಡಿದ್ದು – ಎಂದರೆ – ಮೇಘವು ಅಚಿರಪ್ರಭೆಗಳಾದ ಮಿಂಚುಗಳೊಡನೆ ಸಂಗತಗಳಾಗಿರತಕ್ಕವೇ ಹೊರತು ಚಿರಕಾಲವಿರತಕ್ಕ ಕಾಂತಿಗಳುಳ್ಳವುಗೋಳೋಡನೆ ಕೂಡಿರತಕ್ಕವುಗಳಲ್ಲವಷ್ಟೆ? ಹೀಗಿರುವಲ್ಲಿ ಮೇಘಗಳನ್ನು ಪ್ರಭಾಸಂಗತಗಳೆಂದರೆ ಪ್ರತ್ಯಕ್ಷಾನುಭವದಲ್ಲಿ ಹಾಗಿಲ್ಲದ್ದರಿಂದ ವಿರೋಧ ತೋರೀತು. ಮೇಘವಾದರೆ ಕ್ಷಣಪ್ರಭೆಯಿರಬೇಕು–ಚಿರಪ್ರಭೆ ಹೇಗೆಯಿದ್ದೀತು? ಇರಲಾರದು ಎಂಬುವುದೇ ಅಪ್ರಕೃತಾರ್ಥದಲ್ಲಿ ವಿರೋಧವು. ಹೀಗೆ ತೋರಿದ ವಿರೋಧವನ್ನು ಅರ್ಥಾಂತರಕಲ್ಪನದಿಂದ ತದ್ವಾಚಕವಾಚ್ಯವಾದ ಪ್ರಕೃತಾರ್ಥದಲ್ಲಿ ಆಭಾಸಗೊಳಿಸುವುದೆಂತೆಂದರೆ – ವಿಷ ಶಬ್ದಕ್ಕೆ ನೀರು ಎಂಬ ಅರ್ಥವಾದಂತೆ ಹಾಲಾಹಲವೆಂಬ ಗರಳವೂ ಅರ್ಥವಾಗುವುದರಿಂದ ಶಿವನು ಕಂಠದಲ್ಲಿ ವಿಷವನ್ನು ಧರಿಸಿದವನಾಗಿರುವನು, ಚಿರ – ಬಹುಕಾಲವು ಸ್ಥಿರವಾಗಿರುವ ಪ್ರಭಾ–ಕಾಂತಿಯೊಡನೆ, ಸಂಗತಂ – ಕೂಡಿದವನು, ವಿಷಕಂಠನು ನಿತ್ಯಪ್ರಕಾಶನೆಂದರೆ ತೋರಬೇಕಾದ್ದು ಸಾಯಲ್ಬೇಕಾದವನು. ಚಿರಕಾಲ ಬೆಳಗುವನೆಂಬ ವಿರೋಧವೇ. ಇಲ್ಲಿ ಅವಿರೋಧವೇನೂ ತೋರಲಿಲ್ಲವು. ಹೀಗೆ ಅಪ್ರಕೃತವಾದ ಮೆಘದಲ್ಲಿಯೂ ಏಕವಾಚಕತ್ವ ಸಂಬಂಧದಿಂದ ವಿರೋಧವಂ. ತೋರಿಸಿ ಪ್ರಕೃತವಾದ ಶಿವನಲ್ಲಿ ವಿರೋಧವಂ ಪರಿಹರಿಸುವಂತೆ ಶ್ಲೇಷಾರ್ಥವಂ ಪೇಳಿದ್ದರಿಂದ ಇದೇ ವಿರೋಧಾಭಾಸಾಲಂಕಾರವಾಯಿತು. ಇದೇ ಜಾತೀಯುವಾಗಿ ಮುಂದಣ ವಿಶೇಷಣಗಳೆಲ್ಲಕ್ಕೂ ಅರ್ಥಾಭಿಪ್ರಾಯಾಲಂಕಾರಗಳನ್ನು ವಿಚಾರಿಸಿಕೊಳ್ಳಬೇಕು, ೧ನೆಯದು

ಅಪ್ರಕೃತವಾದ ವಿರೋಧಾರ್ಥ. ೨ನೆಯದು ಪ್ರಕೃತವಾದ ಆಭಾಸಾರ್ಥ. ಹೀಗೆ ಶ್ಲೇಷಾರ್ಥಗಳೆರಡು ಮಾತ್ರವೇ ಬರೆಯಲ್ಪಡುವುವು. ಮಿಕ್ಕ ನಿರ್ವಚನವು ಯಥಾಪೂರ್ವವಾಗಿ ತಿಳಿಯಲ್ತಕ್ಕದ್ದು. ಹೇಗೆಂದರೆ ಭುವನಪತಿಯಾಗಿಯುಂ – ನೀರಿಗೆ ಒಡೆಯನಾದರೂ, ಅಜಡಾಶ್ರಯಂ – (ಲಡಯೋರಭೇದಃ) ಜಲಕ್ಕೆ ಆಶ್ರಯವಾದವನಲ್ಲವು ಎಂಬುವುದರಿಂದ ಅಕೃತವಾದ ಸಮುದ್ರದಲ್ಲಿ ದೃಷ್ಟಚರವಾದ ವಿರೋಧದಂತೆ ಪ್ರಕೃತವಾದ ಶಿವನಲ್ಲಿಯೂ ಭುವನಪತಿಯಾಗಿಯು – ಲೋಕಕ್ಕೆ ಒಡೆಯನಾಗಿದ್ದರೂ ಅಜಡಾಶ್ರಯಂ – ಮೂಢರಿಗೆ ಆಶ್ರಯನಲ್ಲವೆಂದು ವಿರೋಧ ತೋರಿದರೆ ಅರ್ಥಾಂತರಕಲ್ಪನದಿಂದ ಪರಿಹರಿಸುವನು – ಅಜಡರಿಗೆ ಆಶ್ರಯನು – ಮೂಢರಲ್ಲದ ಜ್ಞಾನಿಗಳಿಗೆ ಆಧಾರವಾದವನು ಎಂದರೆ ಸಾಮಾನ್ಯವಾಗಿ ಲೋಕಪತಿಯಾದವನು, ವಿಶೇಷವಾಗಿ ಅಜಡರಿಗೆ ಆಶ್ರಯನೆಂಬುವಲ್ಲಿ ವಿರೋಧ'ವೇನೂ ತೋರಲಿಲ್ಲವಾಗಿ ವಿರೋಧಾಭಾಸವೆನಿಸಿತು. ನರಗರ್ವನಿವಾರಕನಾಗಿಯುಂ – ಅರ್ಜುನನ ಗರ್ವವನ್ನು ಹರಿಸಿದವನಾಗಿಯೂ, ಅರ್ಜುನರುಚಿಯುಂ – ಅರ್ಜುನನಲ್ಲಿ – ಅಕ್ಕರೆಯುಳ್ಳವನು ಎಂಬುದರಿಂದಲಾರ ಗರ್ವವನ್ನು ಅಣಗಿಸುವನೋ ಅವನಲ್ಲಿ ಅಕ್ಕರೆಯುಳ್ಳವನೆಂಬುವುದು ಲೋಕದೃಷ್ಟವಿರೋಧವು. ಶಿವನು – ನರ – ಬ್ರಹ್ಮರ ಗರ್ವವನ್ನಣಗಿಸಿದವನು. ಅರ್ಜುನರುಚಿಯುಂ – ಬಿಳುಪಾದ ಕಾಂತಿಯುಳ್ಳವನು ಎಂದರೆ ವಿರೋಧವಿಲ್ಲವು. ಸಾಮಜಪ – ಗಜರಾಜನಿಗೆ. ಪ್ರಿಯಂ – ಇಷ್ಟನಾಗಿಯು, ಪಂಚಾನನಂ (ಪಂಚ – ಅಗಲವಾದ ಆನನಂ – ಬಾಯಿಯುಳ್ಳದ್ದು) ಸಿಂಹವಾಗಿರುವನು ಎಂದಲ್ಲಿ ವಿರೋಧವು. ಸಾಮ – ಸಾಮವೇದ ಮಂತ್ರಗಳ ಜಪ – ಪಠನದಲ್ಲಿ, ಪ್ರಿಯನಾಗಿಯೂ ಪಂಚಾನನಂ – ಐಮೊಗನಾಗಿರುವನು, ಈಗಳ ವಿರೋಧವು. ಸದ್ಯಃ ಜಾತಾ ಆಗಿಯೂ ಆಗಲೇ ಹುಟ್ಟಿದವನಾದರೂ, ಭವರಹಿತನುಂ – ಹುಟ್ಟುವಿಕೆಯಿಂದ ಶೂನ್ಯನು ಎಂದು ವಿರೋಧವು. ಸದ್ಯೋಜಾತವೆಂಬ ಮುಖವುಳ್ಳ ಮೂರ್ತಿಯೂ, ಸಂಸಾರ ದುಃಖವಿಲ್ಲದವನಾಗಿಯೂ ಇರುವನು. ಸವ್ಯೋಮಾಂಗ ವಿಶಿಷ್ಟಂ – ಆಕಾಶವಾದ ಮೈಯೊಡನೆ ಕೂಡಿದವನಾದರೂ, ಜಾತ – ಹುಟ್ಟಿದ, ರೂಪ – ಚಲುವಿಕೆಯುಳ್ಳ, ರುಚಿಮತ್ – ಕಾಂತಿಯುಳ್ಳ, ವಿಗ್ರಹನುಂ – ಮೈಯುಳ್ಳವನು. ಬಯಲಾದ ಮೈಯುಳ್ಳವನಿಗೆ, ಚಲುವಿಕೆಯೂ ಕಾಂತಿಯೂ ಆಕಾರವೂ ಉಂಟೆಂಬುವುದೇ ವಿರೋಧವು. ಸವ್ಯ – ಎಡಭಾಗವಾದ – ಉಮಾಂಗ – ಪಾರ್ವತೀದೇಹದಿಂದ, ವಿಶಿಷ್ಟನಾಗಿಯೂ – ಕೂಡಿದವನಾದರೂ ಜಾತರೂಪ. ಬಂಗಾರದ, ರುಚಿಮತ್ – ಕಾಂತಿಯುಳ್ಳ, ವಿಗ್ರಹನುಂ – ಶರೀರವುಳ್ಳವನು, ಅರ್ಧನಾರೀಶ್ವರನು ಹಿರಣ್ಯವರ್ಣನಾಗಿರುವನೆಂದು ಭಾವವು. ಅಜಾತಶತ್ರುವಾಗಿಯುಂ – ಧರ್ಮರಾಯನಾದರೂ (ಹುಟ್ಟದೆಯಿರುವ ಶತ್ರುಗಳುಳ್ಳವನಾದರೂ), ಅನಂತ – ಅನೇಕಗಳಾದ, ಅರಿಪುರ – ಶತ್ರುನಗರಗಳಿಗೆ, ಅರಾತಿ – ವಿರೋಧಿಯಾದವನು ಎಂದು ವಿರೋಧವು. ಅ – ವಿಷ್ಣುವಿನಿಂದ ಜಾತ – ಹುಟ್ಟಿದ ಕಾಮನಿಗೆ, ಶತ್ರುವಾದರೂ,

ಅನಂತ – ನಾಶವಿಲ್ಲದ, ಅರಿ – ತಾರಕಾಸುರನ ಪುತ್ರರಾದ ದನುಜರ ಪುರ – ತ್ರಿಪುರಗಳಿಗೆ, ಅರಾತಿ – ಶತ್ರುವಾಗಿರುವನು. ಸತ್ – ಒಳ್ಳೆಯದಾದ – ಆಲೋಕ – ಬೆಳಕಿನಿಂದ, ಭರಿತಂ ತುಂಬಿದವನಾದರೂ ಅಂಧಕಾರ – ಕತ್ತಲೆಯಿಂದ, ಅತಿಪ್ರಪಿತನಂ– ಅತ್ಯಂತಪ್ರಖ್ಯಾತನು ಎಂಬುದು ವಿರೋಧವು. ಸದಾ – ಯಾವಾಗಲೂ ಲೋಕಭರಿತಂ – ಲೋಕದಲ್ಲಿ ತುಂಬಿದವನು ಅಂಧಕ – ಅಂಧಕಾಸುರನಿಗೆ, ಅರಾತಿ – ಶತ್ರುವೆಂದು, ಪ್ರತೀತನುಂ – ಪ್ರಸಿದ್ಧನು, ಸಕಲ – ಸಂಪೂರ್ಣವಾದ ಆದಿತ್ಯ – ಸೂರ್ಯನ ಗ್ರಹಣ – ಗ್ರಹಣಕ್ಕೆ, ಉಪಯುಕ್ತಂ ಉಪಯೋಗಿಸುವನಾದರೂ, ಅಧಿಕ – ಹೆಚ್ಚಾದ ಉಪರಾಗ – ಗ್ರಹಣದಿಂದ । ರಹಿತಂ ಶೂನ್ಯನೆಂದರೆ ವಿರೋಧವು ಸಕಲ – ಸಮಸ್ತರಾದ, ಆದಿತ್ಯ – ದೇವತೆಗಳ ಗ್ರಹಣ – ಅಂಗೀಕಾರಕ್ಕೆ, ಉಪಯುಕ್ತಂ – ಪ್ರಯೋಜನಕನಾದರೂ । ಅಧಿಕೋಪ – ಇರುವ ಸಿಟ್ಟಿನಿಂದಲೂ, ರಾಗ – ಅಭಿಲಾಷದಿಂದಲೂ, ರಹಿತಂ – ಶೂನ್ಯನೆಂದರೆ ವಿರೋಧವಿಲ್ಲವು. ಶುಕ – ಗಿಳಿಗೆ, ಅಮೃತಫಲ – ಅಮೃತದ ಹಾಗಿರುವ ಹಣ್ಣನ್ನು ಪ್ರದಂ – ಕೊಡುವವನಾದರೂ, ಅವನಸ್ವಭಾವಂ – ವನದ ಸಹಜಧರ್ಮವಿಲ್ಲದವನು – ಎಂದು ವಿರೋಧವು. ಶುಕ – ವ್ಯಾಸಪುತ್ರನಾದ ಶುಕಮುನಿಗೆ, ಅಮೃತಫಲಪ್ರದಂ – ಮೋಕ್ಷಫಲವನ್ನು ಕೊಟ್ಟವನು, ಅವನ – ರಕ್ಷಣವೇ । ಸ್ವಭಾವವಾಗಿ ಉಳ್ಳವನು. ಕಾಮ – ಮನ್ಮಥನ ದೇಹ – ಮೈಯೊಡನೆ ಉಪೇತನಾಗಿಯುಂ – ಕೂಡಿದವನಾದರೂ, ದರ್ಪಕ – ಮನ್ಮಥನಿಂದ ಅವಗತ – ಹೊಂದಲ್ಪಟ್ಟ । ವಿಗ್ರಹ – ಶರೀರದ ವಿದಾರಣಂ – ಸೀಳುವಿಕೆಯುಳ್ಳವನು, ಇದು ವಿರೋಧವು. ಕಾಮದೇಹ – ಕಾಮರೂಪದಿಂದ. (ಸಂಕಲ್ಪಮಾತ್ರ ಪರಿಗೃಹೀತ ದೇಹದಿಂದ) ಉಪೇತಂ ಕೂಡಿದವನು ದರ್ಪ – ಗರ್ವದಿಂದಲೂ, ಕೋಪ – ಸಿಟ್ಟಿನಿಂದಲೂ ಗತ – ಬಂದವರನ್ನು, ವಿಗ್ರಹ – ಯುದ್ಧದಲ್ಲಿ ವಿದಾರಣಂ – ಸೀಳುವನು ಎನಿಸಿ ಇರ್ದನು. ಅಂತುಂ – ಹಾಗೂ ಅಲ್ಲದೆ – (ಲೋಕ ರೀತಿಯಿಂದ ವಿರುದ್ಧಗಳಾಗಿ ತೋರುವ ಅರ್ಥಗಳೆಲ್ಲವೂ ಸರ್ವಾಧಾರನಾದ ಶಿವನಲ್ಲಿ ತೋರುವುದರಿಂದ ಯಾವ ವಿರೋಧವೂ ಇಲ್ಲವೆಂದು ಭಾವವು)॥ ೪ ॥

**ಚಂ॥** ಹರಿತನಯಾರಿಯೆಂದೆನಿಸಿಯುಂ ಧವಳಾಂಶುಕಧಾರಿ ನೀಲಕಂ ।
ಧರನೆನಿಸಿರ್ದುಮಾದೃತಸುಮಾನಸಹಂಸನುಪಾತ್ತಸಿಂಧುರಾ ।
ಜರುಚಿರನಾಗಿಯುಂ ತತಜಡಾಶ್ರಯನಪ್ರಿಯನಪ್ರಮೋಹಭಾ ।
ಸುರನೆನಿಸಿರ್ದುಮನ್ವಿತನಯಸ್ಥಿತಿಯೊಪ್ಪಿದನದ್ರಿಜಾಧವಂ ॥ ೭೯ ॥

**ಟೀಕೆ** । ಮರಳಿ ವಿರೋಧಾಭಾಸಾಲಂಕಾರವುಳ್ಳ ಪದ್ಯದಿಂ ಶಿವನ ಗುಣಂಗಳಂ ಬಂಣಿಸುವನದೆಂತೆನೆ – ೧. ಹರಿತನಯಾ – ಸೂರ್ಯನ ಮಗಳಾದ ಯಮುನೆಗೆ ಆರಿಯೆಂದೆನಿಸಿಯುಂ – ವಿರೋಧಿಯೆಂದೆನಿಸಿದರೂ, ಧವಳಾಂಶುಕ – ಬಿಳುಪಾದ ಕಿರಣಗಳನ್ನು, ಧಾರಿ – ಧರಿಸಿದ, ಗಂಗೆಯು । (ಇಲ್ಲಿ ಕಪ್ಪಾದ ಯಮುನೆ ಬಿಳುಪಾದ

ಗಂಗೆಗೆ ಗೆಳತಿಯಾಗಿ ಕೂಡಿರುವುದೇ ಹೊರತು, ಬಿಳುಪಾದ ಗಂಗೆಯು ಯಮುನೆಗೆ ಶತ್ರುವೆಂದರೆ ವಿರೋಧ ತೋರುವುದು.) ಹೀಗೆ ಅನ್ಯತ್ರ ದೃಷ್ಟಚರವಾದ ವಿರೋಧವು ಆ ಹೆಸರುಳ್ಳ ಶಿವನಲ್ಲಿಯೂ ತೋರಬಹುದಾಗಿದೆ, ಹರಿತನಯಾರಿಯೂ ಧವಳಾಂಶುಕಧಾರಿಯೂ ಶಿವನಾದರೂ ಅವಿರೋಧವಿಲ್ಲಿಲ್ಲ, ಹೇಗೆಂದರೆ ೨. ಹರಿತನಯ – ವಿಷ್ಣುವಿನ ಮಗನಾದ ಕಾಮನಿಗೆ, ಅಥವಾ ಸೂರ್ಯನ ಮಗನಾದ ಮೃತ್ಯುವಿಗೆ, ಅರಿ – ಶತ್ರುವು (ಮನ್ಮಥಾರಿ, ಕಾಲಾಂತಕನೆನಿಸಿರುವವನು) ಧವಳಾಂಶುಕಧಾರಿ – ಬಿಳುಗದಿರ್ಗಳ ಕಾಂತಿಯುಂ ಧರಿಸಿದವನು (ಶುದ್ಧಸ್ಫಟಿಕಸಂಕಾಶನೆಂದರೆ, ಧವಳಾಂಶುಕಧಾರಿ – ಶುಭ್ರವಸ್ತ್ರವಂ ಧರಿಸಿದವನೆಂಬ ವಿರೋಧವು ಆಭಾಸವಾಗಿ ತೋರುವುದು). ೧. ನೀಲಕಂಧರನೆನಿಸಿರ್ದುಂ – ಕರಿಗೊರಳನು – ನವಿಲೆನಿಸಿಕೊಂಡರೂ, ಸುಮಾನಸಹಂಸಂ – ಸಮೀಚೀನವಾದ ಮಾನಸಸರೋವರದಲ್ಲಿರುವ ಹಂಸಪಕ್ಷಿಯು, (ನವಿಲಾದರೂ ಹಂಸವಾಗಿದೆಯೆಂಬುದು ವಿರೋಧ,) ೨. ನೀಲಕಂಧರಂ – ವಿಷಪಾಹನದಿಂದ ಶಿತಿಕಂಠನಾಗಿರುವನು. ಆದೃತ –ಆದರಿಸಲ್ಪಟ್ಟ, ಸು – ಸಮೀಚೀನವಾದ, ಮಾನಸ – ಮನಸ್ಸುಳ್ಳ । ಹಂಸಕಂ – ಸನ್ಯಾಸಿಗಳುಳ್ಳವನು (ಸುಹೃದಯರಾದ ಯೋಗಿಗಳನ್ನಾದರಿಸುವವನು ಎಂಬುದರಿಂದ ಮುನ್ನ ತೋರಿರ್ದ ವಿರೋಧವು ಆಭಾಸ ಮಾತ್ರವಲ್ಲದೆ ದಿಟವಲ್ಲವೆಂದು ಸಿದ್ಧವಾಗುವುದು). ೧. ಉಪಾತ್ತ – ಹೊಂದಲ್ಪಟ್ಟ, ಸಿಂಧುರಾಜ – ಹೊಳೆಗಳಿಗೊಡೆಯನಾದ ಕಡಲಿನಿಂದ ರುಚಿರನು – ಮನೋಹರನು, ಆಗಿಯುಂ, ಆದರೂ ತತ – ವ್ಯಾಪ್ತವಾದ, ಜಡೆ – ಜಲಕ್ಕೆ, ಆಶ್ರಯವಾದ ಕಡಲಿಗೆ, ಅಪ್ರಿಯಂ ಅನಿಷ್ಟವಾದವನು (ಸಮುದ್ರಪ್ರಿಯನಾಗಿಯೂ ಸಮುದ್ರಕ್ಕೆ ಅಪ್ರಿಯನೆಂಬುವುದು ವಿರೋಧವು. ಶಬ್ದಗಳಿಗೆ ವಾಚ್ಯವಾದ ಶಿವನಲ್ಲಿಯೂ ಆಭಾಸವಾಗಿ ತೋರಿದರೆ ಅರ್ಥಾಂತರಕಲ್ಪನದಿಂದ ಆದಂತಹರಿಸುವನು.) ೨ ಶಿವನು, ಉಪಾತ್ತ – ಪಡೆಯಲ್ಪಟ್ಟ, ಸಿಂಧು – ಗಂಗಾನದಿಯಿಂದಲೂ ರಾಜಚಂದ್ರನಿಂದಲೂ, ರುಚಿರಂ, ಮನೋಹರನು, ತತ – ವಿಸ್ತಾರವಾದ, ಜಡ – ಜಡತನಕ್ಕೆ, ಆಶ್ರಯ – ಆಧಾರವಾದ ಮೂಢರಿಗೆ । ಅಪ್ರಿಯಂ – ಅನಿಷ್ಟನು ಚಂದ್ರಗಂಗಾಧರನಾದ ಶಿವನು ಮೂಢರಿಗೆ ಪ್ರಿಯನಲ್ಲವೆಂದರೆ ವಿರೋಧವೇನೂ ಇಲ್ಲವು. ೧. ಅತ್ರಮೋಹಭಾಸುರಂ – ಪ್ರಮೋಹದಿಂದ ಭಾಸುರನಲ್ಲವು ಹೆಚ್ಚಾದ ಮೋಹವೆಂಬ ಆಜ್ಞಾನದಿಂದ ಅಪ್ರಕಾಶನಾಗಿರುವನು ಎನಿಸಿರ್ದುಂ – ಎನ್ನಿಸಿಕೊಂಡಿದ್ದರೂ ಅನ್ವಿತನಯ ಸ್ಥಿತಿ – ಅನ್ವಿತ ಕೂಡಿದ, ನಯ – ನ್ಯಾಯದ ಸ್ಥಿತಿ ಇರುವಿಕೆಯುಳ್ಳವನು. ಮೋಹವುಳ್ಳವನಿಗೆ ನ್ಯಾಮವೆತ್ತಣದೆಂದು ವಿರೋಧ ತೋರುವುದು ಅಥವಾ । ಪ್ರಮಾ – ಯಥಾರ್ಥಜ್ಞಾನದ ಊಹೆಯಿಂದ ಭಾಸುರನಲ್ಲವಾದರು ನ್ಯಾಯನ್ವಿತ್ವನ್ವಿತನೆಂಬುವುದು ವಿರೋಧವು. ಪರಿಹಾರವೆಂತೆನೆ – ೨ ಶಿವನು ಅತ್ರಮಾ – ಆಯುಥಾರ್ಥ, ಜ್ಞಾನದ । ಊಹೆ ಸಂಭಾವನೆಗಳಿಂದ ಭಾಸುರಂ – ತೋರುವನೆನಿಸಿದರೂ, ಆನ್ವಿತನಯ ಸ್ಥಿತಿ – ಕೂಡಿರುವ ನ್ಯಾಯ ಸ್ಥಿತಿಯೆಂಬ

ವಿರೋಧವು, ಪ್ರಮೋಹ – ಹೆಚ್ಚು ಮೋಹದಿಂದಲೇ ಭಾಸುರಂ – ಬೆಳಗುವವನು ನ – ಅಲ್ಲವೆಂಬರ್ಥದಿಂದಲೇ ಪರಿಹೃತವಾಗುವುದು. ಶಿವನು ಅಜ್ಞಾನ ಗೋಚರನಲ್ಲವು. ಯಥಾರ್ಥ ಜ್ಞಾನಗಮ್ಯನು ನ್ಯಾಯಸ್ಥಿತಿಯಿಂ ಕೂಡಿರುವನು ಎಂದರೆ ವಿರೋಧವಿಲ್ಲವು). ಇಂತಹವನಾಗಿ, ಅದ್ರಿಜಾ – ಹಿಮಾದ್ರಿಯ ಮಗಳಿಗೆ। ಧವಂ – ಪತಿಯಾದ ಶಿವನು ಒಪ್ಪಿದಂ – ಚನ್ನಾದನು ॥ ಚಂಪಕಮಾಲೆ ॥ ॥ ೭೯ ॥

**ವ॥** ಮತ್ತಮಾಗಲೋರಣಂಗೊಂಡು ಶರಚ್ಛಶಾಂಕರುಚಿಯೋಳ್ಸೆಣಸಲೆಳಸಿ ನೆಗೆವಾವೆನಿಸಿ ರಂಜಿಪ ಧವಳ ಚಾಮರಮಂ ಬಿಂಕದಿಂ ಕೊಂಕಿನಿಂದು ಸೂಳರಿದುತೋಳಂ ನೆಗಪಿ ಢಾಳಿಪ ಗಾಯತ್ರ್ಯಾತಿ ಪರಮಶಕ್ತಿಯರಿಂ ಕರಾಂಬುಜಂ ಸಲೆವಿಡಿದ ಪೂರ್ಣೇಂದುವೆಂಬಂತೆಸೆವ ಮಣಿದರ್ಪಣಮ ಸಣಿಯರಂ ಬಿಡಿದು – ಸಿರಿಮೊಗಕ್ಕೆ – ತೋರ್ಪಾಗಳಾಮಾಲಿನಿಯಿಂ ಪಾಡಿವಸಿದು ಬವಳಿಸಿದ, ಕಂಬಳಾಶ್ವತರರ – ನಾಶ್ವಾಸಿವಂತಲರ ಬಿಜ್ಜಣಿಗೆಯಿಂದಲರ, ಒಡರ್ಚಿಬೀಸುವ, ರೋಹಿಣಿಯಿಂ – ಮಂಗಳಗೀತೆಯಂ ಪಾಡಿ, ಮಣಿವೆಳಗಿನಾರಯಂ ಬೆಳಸುವ ಭಾನುಭಾವೆಯಿಂ, ನಿಜಕರವರದೋದ್ಧೃತಸಹಸ್ರದಳ ಪುಂಡರೀಕಮನೆ ಮಿಸುಪ ಮೌಕ್ತಿಕ ಛತ್ರಮಂ ತಳೆದೊಗಿಪ ರಮಾದೇವಿಯಿಂ, ಸಲ್ಲಲಿತಪಲ್ಲಕಿಯ ಮೆಲ್ಲುಲಿಯೊಡನೆ ಪಂಚಮದಿಂಚರಂ ಮಿಗೆ ಸವಿಸವೆಯದ ಸಾರಸಂಗೀತಮಂ ಕೇಳಿ ಕೇಳಿಪವಿಡಿದ ಭಾರತಿಯಿಂ ಮಧುರಶೀತಳ ಸುರಭಿಸಲಲಿತ, ಸಂಭೃತಕನಕ ಕಲಶಮಂ ಶೃಂಗಾರದ ಜಿತ್ತು ಪಿಡಿದು ನಿಂದ ವರುಣಾಂಗನೆಯಿಂ ಕೆಂಬಲರ ಕಾಳಂಜವಿಡಿದು ಮಿಸುವ ಪುಲೋಮಜಾತಿ ರಮಣಿಯರಿಂ ಸರಸಪರಿಮಳಕ್ಕೆ ಪರಿಮರಿಮಗೊಂಡು ಮೆರದೆರಗುವ ಪರಮೆಪರಿದುರುಗಲಿಂತವಿ ಗಳ್ತನರುಗಳ್ಪನುಗುಳ್ಪರೆ ವಿರಿದಲರಮಾಲೆಯಿಂ, ಪದತಳಮಂ ಪಡೆದಲಂಕರಿಸುವುಪರತಿವತಿಯಂ ಶೂಲಕಪಾಲಖಡ್ಗ ಪರಶ್ವಧಾ ದ್ಯಾಯುಧಂಗಳಂ ಪಿಡಿದು ಬಳೀ ನೆಲಸಿನಿಂದಮ್ರತಕಾದೇವಿಯರಿಂ, ಕರಾಂಬುಜಂಗಳಂ ನೊಸಲೊಲುಳಿಸಿರೆ ಬೆಸನಂ ಸಾರ್ದು ನಿಂದ ಯೋಗಿನಿಯರಿಂ ಕರೆಕರೆದು ಸುಖಂಗೈಯ್ವ ಮಂತ್ರಶಕ್ತಿಯರಿಂ, ಪರಶಿವಾಡುವಸೂಯೆ ಮೊದಲಾದ ಮುನಿವನಿತೆಯರಿಂ, ಸಹಜ ಸಂದಣೀಯಗಣಮಂ ಸರಸವದಿಂಸಾರ್ದು ಸಂಕೀರ್ತನಂಗೈವೃತಿಸತಿಯರಿಂ, ಶೃಂಗಾರಲಕ್ಷ್ಮಿಯಂಗಂಬಡೆದನೇ ರೂಪದಿಂ ನಿಂದಂತೆ ಪೊಂದರಸರಿಯ್ಯೆ ಪುಷ್ಪಪುಟಹಸ್ತದಿಂ ಪುಷ್ಪಾಂಜಲಿಗಳ್ಕೆದರ್ದು ಮೋಹಿಸಿ ನಿಂದು, ಕಟ್ಟದಿರೋಳ್ಸಭಾಸದರೆಲ್ಲರ್ಮೆಚ್ಚಿ ಚತುರರ ಚತುರ್ವಿಧನರ್ತನಮಂ ಬಿತ್ತರಿಪರೆಂಬಾದಿ ದಿವ್ಯ ನರ್ತಕಿಯರಿಂ, ವಾಮಪಾರ್ಶ್ವದೊಳಶಿವಸಹಸ್ರಮರ್ಮ, ಜಪಿಸುತ್ತೆಸೆವ ಮಕುರನಿರೀಕ್ಷಣದೊಳೀಕ್ಷಣರವದಿಂ, ಲಕ್ಷಲಂಬಿಡಿದು ಚತುರ್ಮುಖದಿಂ ರುದ್ರಸೂಕ್ತರಥಾಂತರಾದಿ ಮಂತ್ರಮನೋಮಯಬ್ಜಭವನಿಂ ವಿವಿಧವಿನಿಯೋಗಮಂ ಮಾಳ್ಪ ಲೋಕೇಶ್ವರರಿಂ ಕರೆಗಣ್ಮುವಾನಂದಾಶ್ರುವಿಂ ಗುಡಿಗಟ್ಟಿದ ಪುಳಕದಿಂ ಸಾತ್ವಿಕ ಭಕ್ತಿವೆರಸಿ ಪೊರೆಯೇರಿನೊಸಲೊಳವರ್ಚಿದಂಜಲಿಪುಟದಿಂ ಪೊಗಳ್ವ

ಪರಮತಪೋಧನರಿಂ ನೆರದೊತ್ತರಿವಸುರಸಿದ್ಧಸಾಧ್ಯಗಂಧರ್ವಾದಿಗಳ ವಿಸರದಳಗಳದೆ ಕಳಕಳವುಂ ಪೊಂಬೆತ್ತಮನೆತ್ತಿ ಹೋ ಸಾರ್ದಲಗೆಂದು ನಿವಾರಿಸಿ ಸಮುಚಿತಸ್ಥಾನದೋಲಿಂಬುಗೈಯ್ಯುವ ಭೀಮಕಂಕಾಳರೆಂಬ ವೇತ್ರಧರರಿಂ, ಸಮಯಂಬಡಿದು ಸಾರ್ದೊಯ್ಯನೆ ಕರ್ಣಾಭರಣಂ ಪೊಸಮುಚಿತಕಾರ್ಯ ವಿಜ್ಞಾಪನಂಗೈಯ್ವ ನಂದಿಕೇಶ್ವರನಂ, ಸದ್ಧರ್ಮವೆ ಮೂರ್ತಿವೆತ್ತು ಸಮದೃಷ್ಟಿಯೊಳ್ನಿಂದ ವೃಷೇಂದ್ರನಿಂ ಬಹುವಿಧವಿಕಟವೇಷದಿಂ ವಿಕೃತಿದೋರಿಯ ನಗೆಯಿಂ ಬೀರಿ ನಲಿದು ನರ್ತಿಪ ಭೃಂಗಿರಿಟಿಯಿಂ ಸಂಗೀತವುಂ ಪಾಡಿ ಮೋಹಿಪ ಗರುಡಗಂಧರ್ವ ಚಾರಣದೋರಣಂಬಿಡಿದೋರಂತೆ ನಿಂದ ವೀರಪ್ರಥಮರಿಂ ನೆರೆನೆರೆದು ತರಂಗೊಂಡು ಸಂದಣಿಸಿ ನೆಲಸಿದ ಸುರವಿಸರದಿನನಂತಾಶ್ಚರ್ಯಮನನೂನಸೌಭಾಗ್ಯಮನ ಮಂದಸೌಂದರ್ಯಮನಪೂರ್ವತರವಿಳಾಸಮನೊಳಕೊಂಡೆಣಿಕೆಗತೆರ್ಕ್ಯಮಾಗಿಪೆಂಪನಾಳ್ದ ಪರಮಸಭೆ ಕಂಗೊಳಿಸಿರ್ದುದಂತು ಮೆಲ್ಲದೆಯುಂ ॥

**ಟೀಕ॥** ಮತ್ತಂ – ಮತ್ತು – ಆಗಳ್ ಆಗ – ಒರನಂಗೊಂಡು ವರಸಗೊಂಡು – ಶರಚ್ಛಶಾಂಕರುಚಿಯೋಳ್ ಶರತ್ಕಾಲದಚಂದ್ರಕಾಂತಿಯೊಡನೆ ಸೆಣಿಸಲು – ವಿರೋಧಿಸಲು – ಎಣಸಿ ಬಯಸಿ – ನೆಗೆವ ಹಾರುತ್ತಿರುವ – ಅವು ಸರ್ಪವು – ಎನಿಸಿ ಎನ್ನಿಸಿಕೊಂಡ – ರಂಜಿಪ ಬೆಳಗುವ – ಧವಳಚಾಮರಮಂ ಬಿಳುಮರಿಯನ್ನು – ಬಿಂಕದಿಂ ಬಿಗುಮಾನದೊಡನೆ – ಕೊಂಕಿ – ಮೈಯನ್ನು ಸೊಟ್ಟಗೆಪಕ್ಕದಲ್ಲಿಬಿಗ್ಗಿಸಿಕೊಂಡು – ನಿಂದು ನಿಂತು – ಸೂಳ್ ಅರಿದು – ಸಮಯವನ್ನು ಸಂದರ್ಬವನ್ನು ಅರಿತು – ತೋಳಂ ಭುಜವನ್ನು – ನೆಗಪಿ – ಎತ್ತಿ ಥಾಳಿಪ – ಪ್ರಕಾಶಿಸುವಂತೆಬೀಸುತ್ತಿರುವಗ – ಗಾಯಿತ್ರಿ ಗಾಯಿತ್ರಿಮಂತ್ರದೇವತಿಯೆ – ಆದಿ – ಮೊದಲಾಗಿವುಳ್ಳ – ಪರಮಶಕ್ತಿಯರಿಂ – ಉತ್ಕೃಷ್ಟಶಕ್ತಿದೇವತೆಯರಿಂದಲು ಗಾಯಿತ್ರಿಯು ಶಿವನಿಗೆ ಬಿಳಿ ಚಾಮರವನ್ನು ಬೀಸುತ್ತಿರಲು – ಅದು ಮೇಲಕ್ಕೆ ಹಾರುತ್ತಿರುವಾಗ – ಹೇಗಿತ್ತೆಂದರೆ ಬಿಳ್ಪ ನಾಗರು ತನ್ನ ಜಾತಿಯ ಸರ್ಪವಾದ – ರಾಹುವಿಗೆ ವಿರೋಧಿಯಾದ – ಚಂದ್ರನೊಡನೆ ತಾನು – ಸೆಣಸಬೇಕೆಂದು ಛತ್ರಮಂ ನೋಡಿ ಚಂದ್ರನೆಂಬ ಭ್ರಾಂತಿಯಿಂದ – ಮೇಲಕ್ಕೆ ಹಾರುತ್ತದೆಯೋ – ಎಂಬ ಹಾಗಿತ್ತೆಂದು, ಉತ್ಪ್ರೇಕ್ಷಾಲಂಕಾರವು – ಕರಾಂಬುಜಂ – ಕೈಯೆಂಬ ಕಮಲವು ಸೆರೆವಿಡಿದ ಹಿಡಿದನಿರ್ಭಂದದಲ್ಲಿಟ್ಟು – ಪೂರ್ಣೇಂದುಎಂಬಂತೆ ರಾಕಾಚಂದ್ರನೋಯೆಂಬ ಹಾಗೆ – ಎಸೆವ, ಬೆಳಗುವ – ಮಣಿದರ್ಪಣಮಂ, ರನ್ನ ಗನ್ನಡಿಯಂ, ಅಣೀಯರಂ – ಅತಿಶಯವಾಗಿ ಪಿಡಿದು ಹಿಡಿದು ಸಿರಿಮೊಗಕ್ಕೆ, ಶ್ರೀಮನ್ಮುಖಕ್ಕೆ, ತೋರ್ಪ – ತೋರಿಸುವ, ಕಳಾಮಾಲಿನಿ ಎಂಬ ದೇವತೆಯಿಂದಲು – ಪತಿಗೊಡತಿಯಾದ ದೇವತೆಯು ಶಿವನ ಶ್ರೀಮುಖಕ್ಕೆ ರತ್ನದ ಕನ್ನಡಿಯಂ ತೋರಿಸುತ್ತಿರಲು – ಆಕೆಯ ಕೈಲಿರುವ ಕನ್ನಡಿಯು ಹೇಗಿತ್ತೆಂದರೆ – ಕಮಲವೇ ತನ್ನ ವಿರೋಧಿಯಾದ – ಪೂರ್ಣಚಂದ್ರನಂ ಸೆರೆಹಿಡಿದುಕೊಂಡಿದೆಯೇ ಎಂಬ ಹಾಗಿತ್ತು ಎಂದರೆ ಉತ್ಪ್ರೇಕ್ಷೆಯಿಂದ

ಅವಳ ಕೈ ಕಮಲದ ಹಾಗು ರನ್ನಗನ್ನಡಿಯು ಪೂರ್ಣಚಂದ್ರಬಿಂಬದಂತೆಯೂ – ಇತ್ತೆಂದು ಉಪಮಾಲಂಕಾರವು – ವ್ಯಂಗವಾಗಿ ತೋರುತ್ತೆ ಪಾಡಿ ಹಾಡಿ – ವಸಿದು ಹಸಿವುಗೊಂಡು – ಬಸವಳಿದ ಆಯಾಸದಿಂ ಬೆಂಡಾದ – ಕಂಬಳಾಶ್ವತರರಿಂ – ಕಂಬಳನು ಅಶ್ವತರನು – ಎಂಬ ಸಾಮಗಾಯಕರಾದ ನಾಗರಾಜರನ್ನು – ಆಶ್ವಾಶಿಪಂತೆ – ವಿಶ್ರಮಿಸಿಕೊಳ್ಳವಂತೆ, ಅಲರ ಬಿಜ್ಜಣಿಗೆಯಿಂ – ಹೂವ್ವಿನ ಬೀಸಣಿಗೆಯಿಂದ, ಎಲರಂ ಒಡರ್ಚಿ – ಗಾಳಿಯನ್ನುಂಟುಮಾಡಿ, ಬೀಸುವ – ಬೀಜನಂಗೈಯ್ಯ, ರೋಹಿಣೀಯಿಂ – ರೋಹಿಣೀದೇವಿಯಿಂದಲೂ – ಕಂಬಳಾಶ್ವತರರೆಂಬಸರ್ಪರಾಜರು ಶಿವಸೇವಾರ್ಥವಾಗಿ – ಕರ್ಣಕುಂಡಲ ರೂಪವ ಧರಿಸಿ ಶಿವನ ಕಿವಿಬಳಿಯಲ್ಲಿ ಸಾಮಗಾನವಂ ಹಾಡುತ್ತಿರುವರು – ಅವರು ಹಾಡಿ ಹಾಡಿ ಹಸಿದು ಬೆಂಡಾಗುತಲು – ಅವರಿಗೆ ಚಂದ್ರಪ್ರಿಯಳಾದ ರೋಹಿಣೀದೇವಿಯ ಗಾಳಿಯ ಬೀಸಿ ಆಪ್ಯಾಯನಗೊಳಿಸುವ ಶಿವನಿಗೆ ಹುವ್ವಿನ ಬೀಸಣಿಗೆಯ ಸೇವೆಗೈಯುತಿರುವಳು ಮಂಗಳಗೀತೆಯಂ – ಶೋಭನದ ಹಾಡನ್ನು ಪಾಡಿ, ಮಣಿವೆಳಗಿನ – ರನ್ನದೀವಿಗೆಯುಳ್ಳ, ಆರತಿಯಂ ನೀರಾಜನವನ್ನು, ಬೆಳಗುವ – ಎತ್ತುವ, ಭಾನುಭಾಮೆಯಿಂ – ಭಾನುವೆಂಬ ದೇವತೆಯಿಂದಲೂ – ನಿಜಕರತಲ – ತನ್ನ ಅಂಗೈಯಿಂದ, ಉದ್ಧೃತ, ಎತ್ತಲ್ಪಟ್ಟ, ಸಹಸ್ರದಳ – ಸಾವಿರದೆಸಳ್ಗಳುಳ್ಳ, ಪುಂಡರೀಕಮೆನಿಸುವ – ಬಿಳುನೈದಿಲೆಯೋ ಎಂಬಂತೆಸೆವ ಮೌಕ್ತಿಕಛತ್ರಮಂ – ಮುತ್ತಿನ ಸತ್ತಿಗೆಯಂ – ತಳೆದು ಹಿಡಿದು, ಓಲಗಿಪ – ಸೇವಿಸುವ, ರಮಾದೇವಿಯಿಂ – ಶ್ರೀದೇವತೆಯಿಂದಲೂ, ಸಲ್ಲಲಿತ ಚನ್ನಾಗೆಯೂ ಕೋಮಲವಾಗಿಯೂ ಇರುವ – ಪಲ್ಲಕಿಯ ವೀಣೆಯ – ಮೆಲ್ಲುಲಿಯೋ ಎನೆ ಮೃದುನಾದದೊಂದಿಗೆ, ಪಂಚಮಕೋಕಿಲಸ್ವರಾನುಕರಣದ ಪಂಚಮವೆಂಬ ತಂತ್ರಿಯ, ಇಂಚರಂಪವೆಂಬ ಇನಿದಾದಸ್ವರವು, ಮಿಗೆಅತಿಶಯಿಸಲು – ಸವಿ ಶ್ರವಣಾನಂದವು – ಸವೆಯದ – ಕೊರತೆಯುಳ್ಳದ – ಸಾರಬಲವಾದ – ಸಂಗೀತಮಂ ಗಾನವನ್ನು, ಕೇಳಿಪ – ಶ್ರವಣಮಾಡಿಸುವ, ಕೇಳಿಕೆವಿಡಿದ ಆಟವನ್ನು ಹಿಡಿದ ಭಾರತಿಯಿಂ – ಸರಸ್ವತೀದೇವಿಯಿಂದಲೂ ಮಧುರ ಸಿಹಿಯಾಗಿಯೂ – ಶೀತಳ – ತಣುವಾಗಿಯೂ, ಸುರಭಿ ಪರಿಮಳಿಸುವದಾಗಿಯೂ, ಇರುವ, ಸಲಿಲ – ಉದಕದಿಂದ, ಸಂಭೃತ ತುಂಬಲ್ಪಟ್ಟ, ಕನಕ ಚಿನ್ನದ ಕಲಶಮಂ – ಕೊಡವನ್ನು – ಶೃಂಗಾರಬೆತ್ತು – ಶಿಂಗರವಂ ಪಡೆದ– ಪಿಡಿದು ಹಿಡಿದು ನಿಂದ ನಿಂತ ವರುಣಾಂಗನೆಯಿಂ – ವರುಣನ ರಾಣಿಯಾದ ಕಮಲೆಯೆಂಬ ಜಲದೇವತೆಯಿಂದಲೂ, ಕೆಂಬಲರ – ಕೆಂಪುಕಲ್ಲಗಳ ಪದ್ಮರಾಗನಿರ್ಮಿತವಾದ – ಕೊಳಂಡವಿಡಿದು – ಕಳಂಜಿಕೆಯಂ ಪಿಡಿದು ಹೂಜಿ ಮಿಸುಪ ಬೆಳಂಗುವ – ಪುಲೋನಮಜಿ – ಇಂದ್ರನಾರಾಯಣಿಯಾದ – ಶಚೀದೇವಿಯ, ಆದಿ – ಮೊದಲಾಗಿವುಳ್ಳ, ರಮಣಿಯರಿಂ – ಸಂತಸಕಾತಿಯರಾದ ದೇವಸ್ತ್ರೀಯರಿಂದಲು, ಸರಸದ್ರವದಿಂಕೂಡಿದ – ಪರಿಮಳಕ್ಕೆ – ಸುಗಂಧಕ್ಕೆ ಪರಿಮರಿಗೊಂಡು – ತಹತಹಪಟ್ಟು, ಮೆರೆದು ಝೇಂಕರಿಸಿ

– ಎರಗುವ ಬಂದು ಬೀಳುವ – ಪರಮೆ ಭ್ರಮರಿಯು, ವರಿದ ಹರಿದ – ಕೆದರಿದ ಉರುಗುಲಿಂಗೊಂಚಲಿನಿಂದ ತನಿ ತುಂಬ – ಗಳ್ತ – ಕಳಿತ ಪಕ್ವವಾದ – ನರುಗಂಪಂ – ಸುವಾಸನೆಯಂ, ಉಗುಳ್ವ – ಹೊರಹೊಮ್ಮಿಸುವ, ಅರೆಬಿರಿದ – ಅರ್ಧ ಬಿರಿದ, ದರವಿಕಸಿತವಾದ – ಅರಲಮಾಲೆಯಿಂ ಪುವ್ವಿನ ಸರದಿಂ – ಪದತಳಮಂ – ಪಾದಸ್ತಳವನ್ನು – ಪದೆದೆಉ ಪ್ರೀತಿಸುವ – ಅಲಂಕರಿಸು – ಸಿಂಗರಿಸುವ – ಉಪರತಿಯುವತಿಯಿಂ, ಉಪಶಾಂತಿಯೆಂಬ ದೇವತೆಯಿಂದಲೂ – ಶೂಲ ಪ್ರಣವಾಕಾರವಾದ – ಮುಮ್ಮೊನೆಯ ಕವಲುಗೋಲಿನಾಯುಧ ಕಪಾಲಬ್ರಹ್ಮನ ತಲೆಯೋಡು, ಖಡ್ಗ ಕತ್ತಿ ಪರಶ್ವಧ, ಕಂಡಗೊಡಲಿ ಆದಿ – ಮೊದಲಾದ, ಆಯುಧಂಗಳಂ – ಶಸ್ತ್ರಗಳನ್ನು ಪಿಡಿದು, ಬಳಿನೆಲಸಿನಿಂದ – ಹತ್ತಿರದೊಳು ಸ್ಥಿರವಾಗಿ ನಿಂತ, ಮಾತೃಕಾದೇವಿಯರಿಂ – ಬ್ರಾಹ್ಮೀ ಮಹೇಶ್ವರಿ ಕೌಮಾರಿ ವೈಷ್ಣವೀ ವಾರಾಹಿ ಇಂದ್ರಾಣಿ ಚಾಮುಂಡಿಯರೆಂಬ ಸಪ್ತಮಾತೃಕಾದೇವತೆಯರಿಂದಲೂ, ಕರಾಂಬುಜಂಗಳಂ – ಹಸ್ತಕಮಲಗಳನ್ನು ನೊಸಲೋಳ್ – ಪಣೆಯಲ್ಲಿ ಇರಿಸಿ, ಅಂಜಲಿಯಾಗಿ ಜೋಡಿಸಿಕೊಂಡು, ಬೆಸನಂ ಸಾರ್ದು ನಿಂದ ವ್ಯಸನವಂ ಸೇರಿನಿಂತ ಧ್ಯಾನಚಿಂತೆಯೊಳಿರ್ಪ – ಯೋಗಿನಿಯರಿಂ – ಭೈರವಾದಿಚತುಷಷ್ಟಿಕೋಟಿ ಯೋಗಿನಿಗಣದೇವತಿಗಳಿಂದಲೂ – ಕರೆಕರದು – ಸಮ್ಮುಖಂಗೈವ – ಅಭೀಮುಕರಿಸುವ – ಮಂತ್ರಶಕ್ತಿಯರಿಂ ಆಹ್ವಾನ ಮಂತ್ರದೇವತೆಯರಿಂದಲೂ ಪರಸಿ ಹರಸಿ ಆಶೀರ್ವದಿಸಿ, (ಪಾಡುವ – ಹಾಡುವ – ಅನಸೂಯೆ – ಅಸೂಯಾದಿ ದುರ್ಗುಣಗಳಿಲ್ಲದವಳು (ಪತಿವ್ರತೆಯಾದ ಅತ್ರಿ ಪತ್ನಿ) ಮೊದಲಾದ – ಮುಂತಾದ ಮುನಿಸತಿಯರಿಂ – ಮನನಶೀಲರಾದ ರುಷಿಪತ್ನಿಯಿಂದಲು – ಅದಿತಿ ಅರುಂಧತಿ – ಅಹಲ್ಯೆ ರೇಣುಕೆ – ಲೋಪಾಮುದ್ರೆ) – ಮೊದಲಾದವರು ಸಹಜಸಂದಣಿಯು – ಸ್ವಭಾವಿಕ ಸಂಮರ್ದವುಳ್ಳ – ಗಣಮಂ ಪ್ರಥಮಗಣವನ್ನು – ಸರಸವದಿಂ ಸಾನುರಾಗಸ್ವರದೊನೆ – ಸಾರ್ದು – ಹತ್ತಿರ ಸೇರಿ, ಸಂಕೀರ್ತನಂ ಗೈವ ಹೆಸರೆತ್ತಿ ಕೊಂಡಾಡುವ, ಶ್ರುತಿಸತಿಯರಿಂ – ಉಪನಿಷದ್ದೇವಿಯರಿಂದಲು, ಶೃಂಗಾರಲಕ್ಷ್ಮಿ – ಶಿಂಗರದ ಸೊಬಗು, ಅಂಗಂಬಡೆದು – ಮೂರ್ತಿಭವಿಸಿ – ಅನೇಕ ರೂಪದಿಂ – ಬಹ್ವಾಕಾರದಿಂದ – ನಿಂದಂತೆ – ನಿಂತಿರುವ ಹಾಂಗೆ – ಪೊಂದರೆ – ಹೊನ್ನಿತರ – ಕಲಾಪತ್ತು ಪರದೆ ನಾಟಕಾಂಗವಾದ – ಸೌವರ್ಣ ತಿರಸ್ಕರಣೀಪಟವು – ತೆರಬಟ್ಟೆ ಸರಿಯೆ – ಓರೆಗೊಳಿಸಲ್ಪಡಲು – ಅಥವಾ ಪ್ರಸುತವಾಗಿ ಹರಡಿಯಿದ್ದದ್ದು ಒಂದುಕಡೆಗೆ ಅಣಗಿರುವಂತೆ ಸರಿಯಲ್ಪಡಲು – ಪುಷ್ಪಪುಟದಸ್ತದಿಂ – ಹೂವಿನೆಸಳಿನಂತಿರುವ ಅಂಗೈಯಿಂದ – ಪುಷ್ಪಾಂಜಲಿಯ್ಯೆ – ಹೂವಿನ ಬಗೆಸೆಗಳಂ – ಕೆದರ್ದು ಸಭೆಯ ಮೇಲೆ ಚಲ್ಲಿ – ರಂಗಪ್ರಸಾದನಂಗೈದು – ಮೋಹಿಸಿ – ಮೋಹಗೊಳಿಸಿ – ನಿಂತು – ಕಟ್ಟದಿರೋಳ್ – ಸರಿಯಾದಸಮ್ಮುಖದೊಳು – ಸಭಾಸದರೆಲ್ಲರ್ –

(ಮುಂದುವರಿಯುವುದು)

# ವಚನ ಸಾಹಿತ್ಯದಲ್ಲಿ ನೈತಿಕತೆ – ಒಂದು ಅವಲೋಕನ

ಎಚ್.ಎಸ್. ಸಿದ್ಧಗಂಗಪ್ಪ

ವಚನಕಾರರು ನೈತಿಕತೆಯನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಅಭಿವ್ಯಕ್ತಿಪಡಿಸಿದ್ದಾರೆ. ಅಕ್ಕಮ್ಮ ಎಂಬ ಶರಣೆ ವಚನಭ್ರಷ್ಟರನ್ನು, ಆಚಾರಹೀನರನ್ನು ಕಂಡರೆ ಬರಸಿಡಿಲಿನಂತೆ ಎರಗಿದ್ದಾಳೆ. ಯಾವುದೇ ರೀತಿಯ ಆಷಾಢಭೂತಿತನವಿಲ್ಲದೆ, ಡಂಭಾಚಾರರಹಿತವಾದ ಸರಳ ಸಹಜ ಸಮಾಜನಿರ್ಮಾಣ ಆಕೆಯ ಆಶಯವಾಗಿತ್ತು. ಅಂತಹ ಸಮಾಜನಿರ್ಮಾಣಕ್ಕೆ ಅಡ್ಡಿಬರುವ ದುರಾಚಾರಿಗಳನ್ನು ಕಂಡಾಗ ಅಕ್ಕಮ್ಮ ಅಬ್ಬರಿಸುತ್ತಾಳೆ.

ಬತ್ತಲೆಯಿದ್ದವರಲ್ಲ ಕತ್ತೆಯ ಮರಿಗಳು
ತಲೆ ಬೋಳಾದವರೆಲ್ಲ ಮುಂಡೆಯ ಮಕ್ಕಳು
ತಲೆ ಜಡೆಗಟ್ಟಿದವರೆಲ್ಲ ಹೊಲೆಯರ ಸಂತಾನ
ಆವ ಪ್ರಕಾರವಾದಡೇನು ಅರಿವೇ ಮುಖ್ಯವಯ್ಯ

ಈ ವೇಷಧಾರಿ ಜಂಗಮರ ಬಗ್ಗೆ ಶರಣೆ ಅಕ್ಕಮ್ಮ ಇಷ್ಟೆಲ್ಲ ಕಟುವಾಗಿ ಹೇಳುವುದಕ್ಕೆ ಕಾರಣ ಈ ಗುರುಜಂಗಮರು, ಅಂದಿನ ಚಳುವಳಿಯ ಕೇಂದ್ರಬಿಂದುವಾಗಿದ್ದವರು, ಸಂಚಾರ ಮಾಡುತ್ತಾ ಸಮಾನತೆಯ ತತ್ವಗಳನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕಾದ ಇವರೇ ಆಚಾರಗೆಟ್ಟು ದಾರಿ ತಪ್ಪಿದಾಗ ಸಹಜವಾಗಿಯೇ ಅಂಥವರ ಮೇಲೆ ಕೋಪ ಬರುತ್ತದೆ; ಅಂತಹ ವೇಷಧಾರಿಗಳನ್ನು ನೇರವಾಗಿ ಟೀಕಿಸುತ್ತಾಳೆ.

ಅಕ್ಕಮ್ಮನಂತೆಯೇ ಮತ್ತೊಬ್ಬ ಶರಣೆ ಸತ್ಯಕ್ಕ ತಾನು ನಂಬಿದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಇತರರಿಗೆ ಆದರ್ಶಪ್ರಾಯಳಾಗಿದ್ದಾಳೆ. ಧರ್ಮದ ಹೆಸರಿನಲ್ಲಿ ನಡೆಯುವ ಆಡಂಬರಗಳನ್ನು ಆಕೆ ತನ್ನದೇ ಆದ ರೀತಿಯಲ್ಲಿ ಟೀಕಿಸಿದ್ದಾಳೆ.

ಅರ್ಚನೆ ಪೂಜನೆ ನೇಮವಲ್ಲ
ಮಂತ್ರ ತಂತ್ರ ನೇಮವಲ್ಲ
ಧೂಪ ದೀಪಾರತಿ ನೇಮವಲ್ಲ
ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೇ ನೇಮ
ಶಂಭು ಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯನೇಮ

ಶರಣ ಚಿಂತನೆಯ ಹಿನ್ನೆಲೆಯಲ್ಲಿ ನೋಡಿದಾಗ ಈಕೆಯ ವಚನ ಅರ್ಥಪೂರ್ಣವೆನಿಸುತ್ತದೆ. ಪರಧನ, ಪರಸ್ತ್ರೀಯನ್ನು ಮನಸ್ಸಿನಲ್ಲಿ ಬಯಸುವುದೂ ನೈತಿಕತೆಗೆ ವಿರೋಧ ಎಂಬುದನ್ನು ಆಕೆ ಸಶಕ್ತವಾಗಿ ಅಭಿವ್ಯಕ್ತಿಗೊಳಿಸಿದ್ದಾಳೆ.

ಸತ್ಯಕ್ಕ ಕಸ ಗುಡಿಸುವ ಕಾಯಕದವಳು. ಒಮ್ಮೆ ಬೀದಿಯಲ್ಲಿ ಕಸ ಗುಡಿಸುವಾಗ ಅವಳ ಕಣ್ಣಿಗೆ ಬೆಲೆ ಬಾಳುವ ವಸ್ತುವೊಂದು ಕಂಡಿತು. ಬೇರೆ ಯಾರಾದರೂ ಆಗಿದ್ದರೆ ತಾನಾಗಿಯೇ ದೊರೆತ ಆ ವಸ್ತುವನ್ನು ಸದ್ದುಗದ್ದಲವಿಲ್ಲದೆ ತಮ್ಮದಾಗಿಸಿಕೊಂಡು ಬಿಡುತ್ತಿದ್ದರೇನೋ! ಆದರೆ, ಸತ್ಯಕ್ಕ ಹಾಗೆ ಮಾಡಲಿಲ್ಲ. ತನ್ನದಲ್ಲದ ವಸ್ತುವನ್ನು ಎತ್ತಿಕೊಳ್ಳಲು ಅವಳ ಮನಸ್ಸು ಒಪ್ಪಲಿಲ್ಲ. ಅದು ತನ್ನ ನಿಲುವಿಗೆ ಸಲ್ಲದು ಎಂದು ಯೋಚಿಸುತ್ತಾಳೆ. ಆಕೆ ಸ್ಪಷ್ಟವಾದ ನುಡಿಗಳಲ್ಲಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾಳೆ.

ಲಂಚ ವಂಚನಕ್ಕೆ ಕೈಯಾನದ ಭಾಷೆ
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದಡೆ
ಕೈಮುಟ್ಟಿ ಎತ್ತಿದೆನಾದಡೆ ಅಯ್ಯಾ ನಿಮ್ಮಾಣೆ
ನೀವಿಕ್ಕಿದ ಭಿಕ್ಷೆಯೊಳಗಿಪ್ಪೆನಯ್ಯಾ
ಶಂಭು ಜಕ್ಕೇಶ್ವರದೇವಯ್ಯಾ ನಿಮ್ಮಾಣೆ.

ಆಕೆಯ ಇದೊಂದು ವಚನವನ್ನು ಅರ್ಥ ಮಾಡಿಕೊಂಡು ಜೀವನದಲ್ಲಿ ಅಳವಡಿಸಿಕೊಂಡರೆ ಭ್ರಷ್ಟಾಚಾರಕ್ಕೆ ಮಂಗಳ ಹಾಡಬಹುದು. ತನಗೆ ಒಲ್ಲದ್ದನ್ನು ಬಯಸುವುದು ನೈತಿಕ ಅಪರಾಧ ಎಂಬ ಆಕೆಯ ಮಾತು ಸಾರ್ವಕಾಲಿಕ.

ಜೀವನವನ್ನು ಕುರಿತು ಗಂಭೀರವಾಗಿ ವಿಚಾರಿಸಿ, ಅದನ್ನು ಸರ್ವಾಂಗ ಸುಂದರವನ್ನಾಗಿ ಮಾಡಲು ಹೊಸ ಹೊಸ ಮೌಲ್ಯಗಳನ್ನು ಆವಿಷ್ಕಾರಗೊಳಿಸಿ, ಅವುಗಳನ್ನು ನಡೆನುಡಿಯಲ್ಲಿ ಇಳಿಸಿದವರು ಶರಣರು. ಅವರು ಯಾವುದೇ ವಿಷಯವಿರಲಿ ಅದು ಸಣ್ಣದಿರಲಿ, ದೊಡ್ಡದಿರಲಿ ಅದನ್ನು ಗಂಭೀರವಾಗಿಯೇ ಪರಿಗಣಿಸಿ ವಿವೇಚಿಸಿದ್ದಾರೆ. ಒಳ್ಳೆಯದನ್ನು ಒಪ್ಪಿಕೊಂಡರೆ, ಕೆಟ್ಟದನ್ನು ನಿರ್ದಾಕ್ಷಿಣ್ಯವಾಗಿ ಕಟುವಾಗಿ ಟೀಕಿಸಿದ್ದಾರೆ. ಅಗತ್ಯವೆಂದೆನಿಸಿದಾಗ ಅವಶ್ಯವೆನಿಸುವ ಹೊಸ ಮೌಲ್ಯಗಳನ್ನು ತಾವೂ ಜೀವನದಲ್ಲಿ ಅಳವಡಿಸಿಕೊಂಡು, ಇತರರೂ ಅನುಕರಿಸುವಂತೆ ಮಾಡಿದ್ದಾರೆ. ಸವೆದುಹೋದ ಸಂಪ್ರದಾಯಗಳನ್ನು, ಮೌಲ್ಯಗಳನ್ನು ದೂರ ಸರಿಸಿ, ಅವುಗಳಿಂದಾಗುವ ಹಾನಿಯನ್ನು ಜನರಿಗೆ ಮನದಟ್ಟು ಮಾಡಿಕೊಟ್ಟಿದ್ದಾರೆ.

ಶಿವಶರಣರು ಒಂದು ಸುಭದ್ರವೂ ಸುವ್ಯವಸ್ಥಿತವೂ ಸರ್ವಾಂಗಪರಿಪೂರ್ಣವೂ ಆದ ಸ್ವಾವಲಂಬಿ ಸಮಾಜವನ್ನು ಕಟ್ಟಿದರು. ಇದರ ತಳಪಾಯ ದುಡಿಮೆ ಮತ್ತು ಶೀಲ. ಹನ್ನೆರಡನೆಯ ಶತಮಾನದಲ್ಲಿ ದುಡಿಮೆ ಮತ್ತು ಶೀಲ ಇವೆರಡೂ ತಮ್ಮ ನಿಜಾರ್ಥವನ್ನು ಕಳೆದುಕೊಂಡಿದ್ದವು. ಜನರು ಸೋಮಾರಿಗಳಾಗಿ ಡಂಭಾಚಾರದ ಮತ್ತು ವಾಮಮಾರ್ಗದ ಆಚರಣೆಗಳಲ್ಲಿ ತೊಡಗಿದ್ದರು. ಅಂತಹ ಪರಿಸ್ಥಿತಿಯಲ್ಲಿ ಶರಣರು ಕಾಯಕತತ್ವದಿಂದ

ಆರ್ಥಿಕ ಸುಭದ್ರತೆಯನ್ನು ತಂದಂತೆ, ಶೀಲದಿಂದ ಸಮಾಜದ ನೈತಿಕ ಸುಭದ್ರತೆಯನ್ನು ಸಾಧಿಸಿದರು. ಅವರು ಸತ್ಯಶುದ್ಧ ದುಡಿಮೆಯನ್ನೇ ಶೀಲವೆಂದು ಕರೆದರು.

ಆರ್ಥಿಕ ಅವನತಿಗಿಂತಲೂ ನೈತಿಕ ಅವನತಿ ತುಂಬಾ ಅಪಾಯಕಾರಿ. ನೈತಿಕ ಅವನತಿಯಿಂದ ನೂರಾರು ಸಮಸ್ಯೆಗಳು ಉದ್ಭವಿಸುತ್ತವೆ. ಹಣವಿದ್ದು ನೀತಿ ಇರದಿದ್ದರೆ ವ್ಯಕ್ತಿಗಾಗಲಿ, ಸಮಾಜಕ್ಕಾಗಲಿ ಬೆಲೆ ಬರುವುದಿಲ್ಲ ಎಂಬುದನ್ನು ಶರಣರು ಅರಿತಿದ್ದರು. ಸಾಮಾನ್ಯ ನೀತಿ ಎಂಬುದು ವ್ಯಕ್ತಿಗೂ, ಸಮಾಜಕ್ಕೂ ಬಹು ಮುಖ್ಯ. ಇವು ಲೋಪವಾದರೆ ಸಮಾಜದಲ್ಲಿ ಅಶಾಂತಿಯ ವಾತಾವರಣ ನಿರ್ಮಾಣವಾಗುತ್ತದೆ. ವಚನಕಾರರು ಈ ಸಾಮಾನ್ಯ ನೀತಿಗೆ ಮಹತ್ವ ನೀಡಿದರು. ಈ ನೀತಿಗೆ ಮಾರಕವಾದ ಶೀಲ, ವ್ರತ, ನೇಮಗಳನ್ನು ಧಿಕ್ಕರಿಸಿ ಅವುಗಳ ಜಾಗದಲ್ಲಿ ಹೊಸ ಚಿಂತನೆಗಳನ್ನು ತಂದುಕೊಟ್ಟರು. ಅಷ್ಟೇ ಅಲ್ಲ, 'ಶೀಲ ಅಂದರೆ ಪರಬೊಮ್ಮ' ಎಂದರು.

ಶರಣರು ಸಾಮಾನ್ಯವಾಗಿ, ವ್ಯಾವಹಾರಿಕವಾಗಿ ಮತ್ತು ಸಾಮಾಜಿಕ ದೃಷ್ಟಿಯಿಂದಲೂ ದೀರ್ಘವಾಗಿ ವಿವೇಚನೆ ಮಾಡಿದ್ದಾರೆ. ಸಾಮಾನ್ಯ ವ್ಯವಹಾರಗಳಲ್ಲಿ, ನಿತ್ಯಬಳಕೆಯ ಕೊಡುಕೊಳ್ಳುವಿಕೆಯಲ್ಲಿ, ಉಂಬಲ್ಲಿ, ಉಡುವಲ್ಲಿ ಸಾಮಾನ್ಯ ನೀತಿ ಇರಬೇಕಾದುದು ಅವಶ್ಯಕ ಎಂಬುದನ್ನು ಮನಗೊಂಡಿದ್ದರು. ಇಲ್ಲೆಲ್ಲ ನೀತಿ ನೆಲೆಗೊಂಡರೆ ಅದು ಗಟ್ಟಿಗೊಂಡು ಮುಂದೆ ಪರಬ್ರಹ್ಮದ ಸ್ಥಾನಕ್ಕೆ ಏರುತ್ತದೆ. ಅಂತೆಯೇ ವಚನಕಾರರು ಎಲ್ಲ ಶೀಲ, ವ್ರತ, ನೇಮಗಳಿಗೂ ನೀತಿಯ ಜೀವ ರಸಾಯನವನ್ನು ಲೇಪಿದರು. ಸುಶೀಲವೇ ಶೀಲ ಎಂದರು. ಸಮಾಜದ ಎಲ್ಲ ಸ್ತರಗಳಲ್ಲಿಯೂ ನೈತಿಕತೆಯನ್ನು ತುಂಬಿದರು. ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ಭದ್ರ ಬುನಾದಿ ಹಾಕಿದರು.

ಚೆನ್ನಬಸವಣ್ಣ ಕಾಮ, ಕ್ರೋಧ ಮುಂತಾದವುಗಳನ್ನು ಬಿಡುವುದೇ ಶೀಲವೆಂದಿದ್ದಾನೆ.

> ಕಾಲವೆಂಬುದೊಂದು ಪಾಪಿ
> ಮರಹೆಂಬುದೊಂದು ದ್ರೋಹಿ
> ಮತ್ಸರವೆಂಬುದೊಂದು ಹೊಲೆಯ
> ಕ್ರೋಧವೆಂಬುದೊಂದು ಕೈಸೂನೆಗಾರ
> ಇಂತಿವನರಿದು ಮರೆದು ಹರವ ಸಂಬೋಗಿ
> ಹೊಯಿಹೊಡೆದಂತಿರ್ದಡೆ
> ಕೂಡಲಚನ್ನಸಂಗಯ್ಯ ಅವರ ಶೀಲವಂತರೆಂಬೆ

ಚೆನ್ನಬಸವಣ್ಣನ ಪ್ರಕಾರ ಕಾಮ, ಕ್ರೋಧ, ಮತ್ಸರ, ಇವೆಲ್ಲವೂ ಅನೈತಿಕತೆ. ಇವೆಲ್ಲವೂ ವ್ಯಕ್ತಿಯ ಆರೋಗ್ಯಕರ ಬೆಳವಣಿಗೆಗೆ ಮಾರಕ. ಇವುಗಳಿಂದ ಬಿಡುಗಡೆಗೊಂಡಾಗ ಮಾತ್ರ ಜನರು ಆದರ್ಶ ವ್ಯಕ್ತಿಗಳಾಗುತ್ತಾರೆ.

> ಹರಿವ ಹಾವಿಂಗಂಜೆ ಉರಿಯ ನಾಲಗೆಗಂಜೆ
> ಸುರಗಿಯ ಮೊನೆಗಂಜೆ;

ಒಂದಕ್ಕಂಜುವೆ ಒಂದಕ್ಕಳುಕವೆ
ಪರಸ್ತ್ರೀ ಪರಧನವೆಂಬೀ ಜೂಬಿಂಗಂಜುವೆ!
ಮುನ್ನಂಜದ ರಾವಳನೇವಿಧಿಯಾದ!
ಅಂಜುವೆನಯ್ಯಾ ಕೂಡಲಸಂಗಮದೇವಾ

ಶರಣನಾದವನು ಯಾರಿಗೂ, ಯಾವುದಕ್ಕೂ ಅಂಜುವನಲ್ಲ. ಬಸವಣ್ಣನವರೇ ಹೇಳುವಂತೆ ಅವನು ಉರಿಯ ಕೆನ್ನಾಲಿಗೆಗಾಗಲಿ, ಬೆಚ್ಚಿ ಬೀಳಿಸುವ ಹೆಡೆಗಾಗಲಿ ಹೆದರುವುದಿಲ್ಲ. ಅವನು ಹೆದರುವುದು, ಪರಸ್ತ್ರೀಗೆ, ಪರಧನಕ್ಕೆ. ಅವೆರಡನ್ನೂ ಕಂಡರೆ ಸಾಕು, ಅವನು ಗಾವುದ ದೂರ ಓಡಿಹೋಗುತ್ತಾನೆ. ಅವನಲ್ಲಿ ನೈತಿಕ ಪ್ರಜ್ಞೆ ಸದಾ ಜಾಗೃತವಾಗಿರುವುದರಿಂದ ಅವನು ತನ್ನದಲ್ಲದ ವಸ್ತುವಿಗೆ ತನುಮನಗಳಲ್ಲಿಯೂ ಆಸೆ ಪಡುವುದಿಲ್ಲ. ಹಾಗೆ ಆಸೆಪಡುವುದು ಅನೈತಿಕತೆ, ಮಾನಸಿಕ ವ್ಯಭಿಚಾರ ಎಂಬುದನ್ನು ಅರ್ಥ ಮಾಡಿಕೊಂಡು ಆತ ಅಂತರಂಗ, ಬಹಿರಂಗಗಳೆರಡರ ಮೇಲೂ ಸ್ವಾಮ್ಯವನ್ನು ಸಾಧಿಸಿದ್ದಾನೆ. ಬಸವಣ್ಣನವರು ಪರಸ್ತ್ರೀ, ಪರಧನವನ್ನು ಪಿಶಾಚಿಗೆ ಹೋಲಿಸಿ, ಅವುಗಳಿಂದ ತಾವು ಸದಾ ದೂರವಿರುವುದಾಗಿ ತನ್ನ ಆರಾಧ್ಯದೈವ ಕೂಡಲಸಂಗಮನ ಮೇಲೆ ಆಣೆಯಿಟ್ಟು ಹೇಳುತ್ತಾರೆ. ಇದು ಅವರು ಪರೋಕ್ಷವಾಗಿ ಶರಣಸಮಾಜಕ್ಕೆ ನೀಡಿದ ಸಂದೇಶವೂ ಆಗಿದೆ. ಇದರಿಂದ ಅಂತರಂಗದ ಪರಿಶುದ್ಧತೆ ದೊರೆಯುತ್ತದೆ, ಸಾಮಾಜಿಕ ಗೌರವವೂ ದೊರೆಯುತ್ತದೆ. ಅಷ್ಟೇ ಅಲ್ಲ, ಮೋಕ್ಷಕ್ಕೆ ಸಾಧನವೂ ಆಗುತ್ತದೆ.

ಬಸವಣ್ಣನವರು ತಮ್ಮ ಮತ್ತೊಂದು ವಚನದಲ್ಲಿ ಶರಣನೆಂದರೆ ಹೇಗಿರಬೇಕು ಎಂಬುದನ್ನು ಸರಳವಾಗಿ, ಅಷ್ಟೇ ಅರ್ಥಪೂರ್ಣವಾಗಿ ಹೇಳಿದ್ದಾರೆ.

ಛಲ ಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲ ಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲ ಬೇಕು ಶರಣಂಗೆ ಪರದೈವವನೊಲ್ಲೆನೆಂಬ
ಛಲ ಬೇಕು ಶರಣಂಗೆ ಲಿಂಗಜಂಗಮ ಒಂದೇ ಎಂಬ
ಛಲ ಬೇಕು ಶರಣಂಗೆ ಪ್ರಸಾದ ದಿಟವೆಂಬ
ಛಲವಿಲ್ಲದವರ ಮೆಚ್ಚ ಕೂಡಲಸಂಗಮದೇವ

ನೈತಿಕ ಬದುಕಿಗೆ ಧನಾತ್ಮಕವಾದ ಛಲ ಇರಬೇಕು ಎಂಬ ಅಂಶವನ್ನು ಗುರುತಿಸಿದ ಬಸವಣ್ಣನವರು ಈ ವಚನದ ಮೂಲಕ ಶರಣಸಮುದಾಯಕ್ಕೆ ಎಚ್ಚರಿಕೆಯ ಸಂದೇಶ ನೀಡಿದ್ದಾರೆ. ಶರಣನಾದವನು ಹೇಗಿರಬೇಕೆಂಬುದನ್ನು ಮನದಟ್ಟು ಮಾಡಿಕೊಟ್ಟಿದ್ದಾರೆ. ನಡೆನುಡಿಯಲ್ಲಿ ಏಕತೆಯನ್ನು ಸಾಧಿಸಿದ್ದ ಬಸವಣ್ಣನವರು ತಾವು ಸ್ವತಃ ಸಾಧಿಸಿದನ್ನು ನುಡಿಯ ರೂಪದಲ್ಲಿ ಅಭಿವ್ಯಕ್ತಿಪಡಿಸಿದ್ದಾರೆ. ಆಧುನಿಕ ಮನಶ್ಶಾಸ್ತ್ರಜ್ಞರ ಪ್ರಕಾರ ಇದೊಂದು ಮಹತ್ವಪೂರ್ಣವಾದ ಪ್ರಾಯೋಗಿಕ ಸತ್ಯ. ಹೆಣ್ಣು ಹೊನ್ನುಗಳಿಗೆ ಸೋಲದೆ ನೀತಿವಂತನಾಗುವುದು ಸುಲಭದ ಮಾತಲ್ಲ. ನೈತಿಕ ಶ್ರದ್ಧೆಯಂತೆ

ಏಕದೇವೋಪಾಸನೆಯಂತಹ ಧಾರ್ಮಿಕ ಶ್ರದ್ಧೆಯೂ ಪ್ರಬಲ ಇಚ್ಛಾಶಕ್ತಿಯಿಂದ ಮಾತ್ರ ಕೈಗೂಡುತ್ತದೆ ಎಂಬ ಗೂಢಾರ್ಥವನ್ನು ಮೇಲಿನ ವಚನ ಧ್ವನಿಸುತ್ತದೆ.

ಶರಣ ಸಂಸ್ಕೃತಿಯು ಮಾನವೀಯ ಮೌಲ್ಯಗಳ ಹಿನ್ನೆಲೆಯಲ್ಲಿ ರೂಪುಗೊಂಡಿತು. ಆ ಸಂಸ್ಕೃತಿಯ ದಿಟ್ಟ ಅನುಯಾಯಿಗಳು ಹೇಗಿರಬೇಕು, ಸಮಾಜದಲ್ಲಿ ಹೇಗೆ ಬದುಕಬೇಕು ಎಂಬುದನ್ನು ಬಸವಣ್ಣನವರು ಮತ್ತೆ ಮತ್ತೆ ನೆನಪಿಸುತ್ತಾರೆ.

ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ;
ಇದಾವಂಗಳವಡುವುದಯ್ಯಾ ?
ನಿಧಾನ ತಪ್ಪಿ ಬಂದಡೆ ಒಲ್ಲೆನೆಂಬುವರಿಲ್ಲ
ಪ್ರಮಾದವಶ ಬಂದಡೆ ಹುಸಿಯೆನೆಂಬವರಿಲ್ಲ
ನಿರಾಶೆ, ನಿರ್ಭಯ ಕೂಡಲಸಂಗಮದೇವ
ನೀನೊಲಿದ ಶರಣಂಗಲ್ಲದಿಲ್ಲ

ಇಲ್ಲಿ 'ಶುಚಿ' ಎನ್ನುವುದು ಕೇವಲ ಶರೀರದ ಹೊರಗೆ ಮಾತ್ರವಲ್ಲ ಒಳಗೂ, ಅಂದರೆ ಮನಸ್ಸೂ ಶುಚಿಯಾಗಿರಬೇಕು ಎಂದರ್ಥ. ಆಗ ಮಾತ್ರ ಶುಚಿಗೆ ನಿಜವಾದ ಅರ್ಥಬರುತ್ತದೆ. ಪರಧನ, ಸಂಪತ್ತಿನ ಬಗ್ಗೆ ನಾವು ಶುಚಿತ್ವವನ್ನು ಕಾಪಾಡಿಕೊಳ್ಳಬೇಕು. ಸುಳ್ಳು, ಮೋಸ, ವಂಚನೆ, ನಿರಾಶೆ, ಭಯ, ಅಸೂಯೆ, ಮತ್ಸರ ಇವುಗಳನ್ನು ಹತ್ತಿರ ಸುಳಿಯಲು ಬಿಡಬಾರದು. 'ಸತ್ವ, ರಜ, ಕ್ರೋಧ ಬಿಡದನ್ನಕ್ಕ ಅನುಭಾವವೆಲ್ಲಿಯದೋ' ಎಂದು ಎಚ್ಚರಿಕೆಯನ್ನು ನೀಡಿದ್ದಾರೆ. ಶರಣ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿರುವ ಇಂತಹ ತಾತ್ವಿಕ ನೆಲೆಗಳು, ಅಂತರಂಗಶುದ್ಧಿಯಿಂದ ಕೂಡಿದ ಆಚರಣೆಗಳು ಸಮಾಜದ ಎಲ್ಲ ಸ್ತರಗಳಿಗೂ ಗೌರವ ತರುವಂತಹ ಚಿಂತನೆಗಳಾಗಿಸಿವೆ. ಇಲ್ಲಿ ಬೇರೂರಿರುವ ಆದರ್ಶ, ಉನ್ನತ ಚಿಂತನೆಗಳು ಮನೆಯ ಒಳಗೆ ಮತ್ತು ಹೊರಗೆ ನಮ್ಮ ವ್ಯಕ್ತಿತ್ವವನ್ನು, ಆತ್ಮಗೌರವವನ್ನು ಹೆಚ್ಚಿಸುತ್ತವೆ. ಈ ಸಂಸ್ಕೃತಿಯನ್ನು ಅರ್ಥಮಾಡಿಕೊಂಡು, ಅಳವಡಿಸಿಕೊಂಡು ನಡೆದರೆ ನಮ್ಮ ಬದುಕು ನೆಮ್ಮದಿಯ ತಾಣವಾಗುತ್ತದೆ; ಜೊತೆಗೆ ಇತರರಿಗೂ ಇದರಿಂದ ಮಾರ್ಗದರ್ಶನವಾಗುತ್ತದೆ. ಬಸವಣ್ಣನವರು, ಪ್ರಭುದೇವರು, ಚೆನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಸತ್ಯಕ್ಕ, ಮುಕ್ತಾಯಕ್ಕ ಮೊದಲಾದ ನೂರಾರು ಶರಣ ಚಿಂತಕರು ಅರಿತು ಆಚರಿಸಿದ ಸಂಸ್ಕೃತಿ, ರಚಿಸಿದ ವಚನಗಳು ದೇಶ, ಕಾಲ, ಭಾಷೆಗಳ ಪರಿಮಿತಿಗಳನ್ನು ಮೀರಿ ಸಾರ್ವಕಾಲಿಕ ಗೌರವ, ಮೌಲ್ಯವನ್ನು ಪಡೆದುಕೊಂಡಿವೆ.

ಇವತ್ತಿನ ಸಮಾಜವನ್ನು ಪ್ರತಿಯೊಂದು ಸ್ತರದಲ್ಲಿಯೂ ಆಕ್ರಮಿಸಿಕೊಂಡಿರುವ ಭ್ರಷ್ಟಾಚಾರದ ನಿರ್ಮೂಲನೆಗೆ ಇರುವ ಏಕೈಕ ಪರಿಹಾರ ಎಂದರೆ ಶರಣ ಸಾಹಿತ್ಯ ಅಧ್ಯಯನ ಮತ್ತು ಅನುಷ್ಠಾನ. ಭ್ರಷ್ಟಾಚಾರಕ್ಕೆ ಮೂಲ ಪ್ರೇರಣೆ ದುರಾಸೆ, ಅತಿಯಾಗಿ ಸಂಗ್ರಹಿಸಿಡಬೇಕೆಂಬ ಬಯಕೆ. ಸುಖವಾಗಿ ಕೂತುಣ್ಣಬೇಕೆಂಬ ಅತಿಯಾದ ಹಂಬಲ.

ಇದರಿಂದ ಸಮಾಜದಲ್ಲಿ ಮೇಲು–ಕೀಳುಗಳ ಕಂದರ ಹೆಚ್ಚಾಗಿ ಅಶಾಂತಿಯ ಬಿರುಗಾಳಿ ಎದ್ದು ಇಡೀ ಸಮಾಜದ ಸ್ವಾಸ್ಥ್ಯವನ್ನೇ ಹಾಳುಮಾಡುತ್ತದೆ.

ಯಾವುದೇ ಸಮಾಜ ಪ್ರಗತಿಯ ಹೆಜ್ಜೆಗಳನ್ನಿಡಬೇಕಾದರೆ ಮತ್ತು ಸುಖಿ ಜೀವನವನ್ನು ನಡೆಸಬೇಕಾದರೆ ಎಲ್ಲರೂ ತಮ್ಮ ತಮ್ಮ ಕೆಲಸಗಳನ್ನು ಶ್ರದ್ಧೆ, ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಮಾಡುವುದರ ಜೊತೆಗೆ ಶರಣರು ರೂಪಿಸಿದ ಕಾಯಕದ ಭಾವದಲ್ಲಿ ಮಾಡಬೇಕು. ಶರಣರು ಕಾಯಕಕ್ಕೆ ಮಹತ್ವ ಕೊಟ್ಟಂತೆಯೇ ಅಸಂಗ್ರಹವನ್ನೂ ಗೌರವಿಸಿದರು. ಅವರು ತ್ರಿಕರಣಶುದ್ಧಿಯಿಂದ ಕಾಯಕವನ್ನು ಮಾಡುತ್ತ ಅದನ್ನು ಜೀವನದ ಒಂದು ಅವಿಭಾಜ್ಯ ಅಂಗವಾಗಿ ರೂಪಿಸಿಕೊಂಡರು.

ಕಷ್ಟಪಡದೆ ಬೆವರು ಸುರಿಸದೆ ಸುಖವನ್ನು ಬಯಸುವವರ ಸಂಖ್ಯೆ ಇಂದು ಹೆಚ್ಚಾಗುತ್ತಿದೆ. ಸುಖ ಪಡಲು ಹಣ ಬೇಕು ಎಂಬ ಕಾರಣಕ್ಕಾಗಿ ಆ ಹಣವನ್ನು ಯಾವ ಮಾರ್ಗದಲ್ಲಾದರೂ ಗಳಿಸಬೇಕೆಂಬ ಹಂಬಲವುಳ್ಳವರ ಸಂಖ್ಯೆ ದಿನೇದಿನೇ ಹೆಚ್ಚಾಗುತ್ತಿದೆ. ನೀತಿ, ಸತ್ಯ, ಪ್ರಾಮಾಣಿಕತೆ, ಶ್ರದ್ಧೆ ಇವುಗಳ ಸ್ಥಳವನ್ನು ಅನೀತಿ, ಅಸತ್ಯ, ಅನ್ಯಾಯ, ಅಪ್ರಾಮಾಣಿಕತೆ, ದುರಾಶೆಗಳು ಆಕ್ರಮಿಸಿಕೊಂಡಿವೆ. ಇದರಿಂದ ಸಮಾಜದಲ್ಲಿ ಅನಾರೋಗ್ಯಕರ ವಾತಾವರಣ ಉಂಟಾಗುತ್ತಿದೆ. ವ್ಯಕ್ತಿಯಲ್ಲಿ, ಕುಟುಂಬದಲ್ಲಿ, ಸಮಾಜದಲ್ಲಿ ನೆಮ್ಮದಿ, ಶಾಂತಿ ನೆಲೆಗೊಳ್ಳಬೇಕಾದರೆ ಆಯ್ದಕ್ಕಿ ಲಕ್ಕಮ್ಮನಂತಹ ನೇರ, ದಿಟ್ಟ ನಡೆ–ನುಡಿಯ ಆದರ್ಶ ಗೃಹಿಣಿಯರು ಬೇಕಾಗಿದ್ದಾರೆ. ಆಕಾಶದಲ್ಲಿ ಬೆಳ್ಳಿ ನಕ್ಷತ್ರ ಮಿನುಗುವಂತೆ ಇಪ್ಪತ್ತನೇ ಶತಮಾನದಲ್ಲೂ ಲಕ್ಕಮ್ಮನಂತಹ ಮಹಿಳೆಯರು ಇರುವುದನ್ನು ನಾವು ಕಾಣಬಹುದು ಎಂಬುದಕ್ಕೆ ಕೆಲವು ವರ್ಷಗಳ ಹಿಂದೆ 'ಕನ್ನಡಪ್ರಭ'ದ ಮುಖಪುಟದಲ್ಲಿ ಪ್ರಕಟವಾದ ಸುದ್ದಿಯನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ಅಧರ್ಮದಿಂದ, ಅನ್ಯಾಯದಿಂದ ತನ್ನ ಪತಿ ಸಂಪಾದಿಸಿದ ೧೩ ಮಿಲಿಯನ್ ಕರೆನ್ಸಿಯನ್ನು ಇಟಲಿಯ ಮಹಿಳೆಯೊಬ್ಬಳು ಮಹಡಿಯ ಮೇಲಿಂದ ಬೀದಿಗೆಸೆದ ಆ ಪ್ರಸಂಗ ಆಶ್ಚರ್ಯವನ್ನುಂಟುಮಾಡುವಂತಹುದು. ಸುಮಾರು ೧೦ ಸಾವಿರ ಡಾಲರ್‌ಗೆ ಸಮನಾದ ಆ ಹಣವನ್ನು ಬೀದಿಗೆಸೆದು, ವಿಷಯವನ್ನು ಪೊಲೀಸರಿಗೂ ತಿಳಿಸಿ "ನನ್ನ ಪತಿ ಅಕ್ರಮ ಮಾರ್ಗಗಳಿಂದ ಸಂಪಾದಿಸಿದ ಹಣ ಇದು ಎಂದು ನನಗೆ ಖಾತರಿಯಾದ್ದರಿಂದ ಬೀದಿಗೆಸೆದಿದ್ದೇನೆ" ಎಂದು ದೂರವಾಣಿಯ ಮೂಲಕ ಹೇಳುವ ದಿಟ್ಟತನವನ್ನೂ ಆಕೆ ಮೆರೆದಿದ್ದಾಳೆ.

ಇಂತಹುದೇ ಇನ್ನೊಂದು ಪ್ರಸಂಗವನ್ನು ಮಹಾತ್ಮ ಗಾಂಧೀಜಿಯವರ ಜೀವನದಲ್ಲಿ ಕಾಣಬಹುದು. ಅವರು ಒಮ್ಮೆ ದಕ್ಷಿಣ ಆಫ್ರಿಕಾದಲ್ಲಿ ಒಂದು ಕೋರ್ಟ್ ಕೇಸನ್ನು ಗೆದ್ದುಕೊಟ್ಟ ಸಂದರ್ಭದಲ್ಲಿ ಕಕ್ಷಿದಾರರು ತಮಗೆ ಕೊಡಲು ಬಂದ ಹೆಚ್ಚುವರಿ ಹಣವನ್ನು ನಯವಾಗಿಯೇ ನಿರಾಕರಿಸಿದರು. ಇದರಿಂದ ಕಕ್ಷಿದಾರನಿಗೆ ಸಮಾಧಾನವಾಗಲಿಲ್ಲ. ತಮ್ಮ ಪರವಾಗಿ ವಕಾಲತ್ತು ವಹಿಸಿ ಕೇಸನ್ನು ಗೆದ್ದುಕೊಟ್ಟದ್ದಕ್ಕೆ ಅವರಿಗೆ ಪ್ರತಿಫಲವಾಗಿ

ಸಾಕಷ್ಟು ಹಣ ಕೊಡದೆ ಹೋದರೆ ಮೋಸ ಮಾಡಿದಂತೆ ಎಂದು ಭಾವಿಸಿ, ಹೇಗಾದರೂ ಮಾಡಿ ಗಾಂಧೀಜಿಯವರಿಗೆ ಹಣವನ್ನು ಮುಟ್ಟಿಸಬೇಕೆಂದು ಯೋಚಿಸಿ, ಅವರು ಮನೆಯಲ್ಲಿ ಇಲ್ಲದ ವೇಳೆಯಲ್ಲಿ ಅವರ ಪತ್ನಿ ಕಸ್ತೂರಿಬಾಯಿ ಅವರಿಗೆ ಹಣ ಕೊಡಲು ಹೋದಾಗ ವಸ್ತುಸ್ಥಿತಿಯನ್ನರಿಯದ ಕಸ್ತೂರಬಾ ಅದನ್ನು ಸ್ವೀಕರಿಸುತ್ತಾರೆ. ಗಾಂಧೀಜಿ ಮನೆಗೆ ಬಂದಾಗ ವಿಷಯ ತಿಳಿದು ಆಕೆಗೆ ಬುದ್ಧಿ ಹೇಳಿ ಹಣವನ್ನು ಕಕ್ಷಿದಾರರಿಗೆ ಹಿಂತಿರುಗಿಸಿದರು. ಇಂಥ ಪ್ರಸಂಗಗಳನ್ನು ಗಮನಿಸಿದಾಗ ನಮಗೆ ಥಟ್ಟನೆ ಆಯ್ದಕ್ಕಿ ಲಕ್ಕಮ್ಮ ನೆನಪಿಗೆ ಬರುತ್ತಾಳೆ. ಮಹಿಳೆಯರಲ್ಲಿ ನೈತಿಕ ಪ್ರಜ್ಞೆ ಮನೆಮಾಡಿದ್ದರೆ, ಅನ್ಯಾಯವನ್ನು ಕಂಡಾಗ ಪ್ರತಿಭಟಿಸುವ ಶಕ್ತಿ ಸಹಜವಾಗಿಯೇ ಬರುತ್ತದೆ. ಮಹಿಳೆಯರು ಜಾಗೃತರಾದರೆ, ಲಕ್ಕಮ್ಮನ ಜೀವನವನ್ನು ಆದರ್ಶವಾಗಿಟ್ಟುಕೊಂಡರೆ ಸತ್ಯಶುದ್ಧ ಕಾಯಕದ ಬುನಾದಿಯ ಮೇಲೆ ಉತ್ತಮ ಸಮಾಜವನ್ನು ನಿರ್ಮಿಸಲು ಕೊಂಚ ಮಟ್ಟಿಗಾದರೂ ಸಾಧ್ಯವಾದೀತು!

ನಮ್ಮ ಜೀವನ ಬೇರೆಯವರಿಗೆ ಆದರ್ಶವಾಗಿರಬೆಕು. ನಡೆ–ನುಡಿ, ಆಚಾರ–ವಿಚಾರ ಇವುಗಳಲ್ಲಿ ಪಾರದರ್ಶಕತೆಯಿರಬೇಕು. ನಮ್ಮನ್ನು ನಾವೇ ತಿದ್ದಿಕೊಂಡು ನಡೆದರೆ ಬೇರೆಯವರಿಗೆ ಹೇಳುವ ಅವಶ್ಯಕತೆಯೇ ಉದ್ಭವಿಸುವುದಿಲ್ಲ. ಈ ಕಾರಣಕ್ಕಾಗಿಯೇ, ಶರಣರ ಜೀವನವನ್ನು ಅರಿಯಲು ಅವರು ಬಿಟ್ಟುಹೋಗಿರುವ ಸಾಹಿತ್ಯವನ್ನು ಶ್ರದ್ಧೆಯಿಂದ ಅಧ್ಯಯನ ಮಾಡಬೇಕು. ಅವರು ನೀಡಿರುವ ಸಾಮಾಜಿಕ ಮೌಲ್ಯಗಳನ್ನು ಸಾಧ್ಯವಾದ ಮಟ್ಟಿಗಾದರೂ ಜೀವನದಲ್ಲಿ ಅಳವಡಿಸಿಕೊಂಡು 'ಆತ್ಮಸಾಕ್ಷಿ'ಗನುಗುಣವಾಗಿ ನಡೆಯಬೇಕು. 'ಹಾಸಿಗೆ ಇದ್ದಷ್ಟು ಕಾಲು ಚಾಚ'ಬೇಕೆನ್ನುವ ಮನೋಧರ್ಮವನ್ನು ರೂಢಿಸಿಕೊಳ್ಳಬೇಕು. ನಾವು ಸಮಾಜದ ಒಂದು ಅಂಗ ಎಂಬುದನ್ನು ಎಂದೂ ಮರೆಯಬಾರದು. ಅಂತರಂಗದಲ್ಲಿ ಮನೆಮಾಡಿರುವ ಕಲ್ಮಶಗಳನ್ನು ಹೊರಹಾಕದೆ ಬಹಿರಂಗವನ್ನು ಶುದ್ಧಿಮಾಡಿಕೊಂಡು ತೋರಿಕೆಯ ಜೀವನ ನಡೆಸುವುದು ನೈತಿಕತೆಗೆ ಕುಂದುಂಟುಮಾಡಿದಂತೆ. ಇದರಿಂದ ನಮಗೆ ನಾವೇ ವಂಚನೆ ಮಾಡಿಕೊಂಡಂತಾಗುತ್ತದೆ. ಅಂತರಂಗದಲ್ಲಿ ವಿಷವನ್ನು ತುಂಬಿಕೊಂಡು ಬಹಿರಂಗದಲ್ಲಿ ಅಮೃತದ ಧಾರೆ ಎರೆದರೆ, ಬೇವಿನ ಮರಕ್ಕೆ ಬೆಲ್ಲದ ಕಟ್ಟೆಯನ್ನು ಕಟ್ಟಿ ಹಾಲನೆರೆದಂತಾಗುತ್ತದೆ, ಅಷ್ಟೆ.

ಕೆರೆ ಹಳ್ಳ ಬಾವಿಗಳು ಮೈದೆಗೆದರೆ
ಗುಳ್ಳೆ ಗೊರಚೆ ಚಿಪ್ಪುಗಳ ಕಾಣಬಹುದು
ವಾರಿಧಿ ಮೈದೆಗೆದರೆ ರತ್ನಂಗಳ ಕಾಣಬಹುದು
ನಮ್ಮ ಕೂಡಲಸಂಗನ ಶರಣರು
ಮನ ತೆರೆದು ಮಾತನಾಡಿದರೆ ಲಿಂಗವ ಕಾಣಬಹುದು

ಮಾತು, ಭಾಷೆ ನಮ್ಮ ಸಂಸ್ಕೃತಿಯ ಪ್ರತೀಕ. ನಾವಾಡುವ ಮಾತಿನಿಂದಲೇ ನಮ್ಮ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳಬಹುದು. ನಮ್ಮ ಮಾತು ನೈತಿಕತೆಯ ಸೌಧವನ್ನು ಕಟ್ಟುವ ಸುಂದರ ಸೋಪಾನಗಳು. 'ಶರಣರು ಮನ ತೆರೆದು ಮಾತನಾಡಿದರೆ ಲಿಂಗವ

ಕಾಣಬಹುದು' ಎಂಬ ಹೇಳಿಕೆ ಮಾತಿನ ಮಹತ್ವವನ್ನು ತಿಳಿಸುತ್ತದೆ. ಶರಣರು ಆಡುವ ಒಂದೊಂದು ಮಾತೂ ಲಿಂಗಕ್ಕೆ ಅರ್ಪಿಸುವ ಸುಂದರ ಪುಷ್ಪಗಳು. ತಮ್ಮ ನಡೆ-ನುಡಿಯಿಂದ ಸಂಸ್ಕೃತಿಗೆ ಒಂದು ಹೊಸ ಆಯಾಮವನ್ನು ತಂದುಕೊಟ್ಟ ಶರಣರು ನಮಗೆ ಇಂದು ಮಾರ್ಗದರ್ಶಕರಾಗಬೇಕು.

ಶರಣರು ಪರಸತಿಯನ್ನು ಮಹಾದೇವಿಯರಂತೆ ಕಂಡರು, ಅವರಲ್ಲಿ ಮಾತೆಯನ್ನು ಕಂಡರು. ಬಸವಣ್ಣನವರು ನೈತಿಕತೆಗೆ ಪೂರಕವಾದ ಕೆಲವು ವಿಚಾರಗಳನ್ನು ತಮ್ಮ ವಚನವೊಂದರಲ್ಲಿ ಹೀಗೆ ಹೇಳಿದ್ದಾರೆ:

ಕೊಲ್ಲೆನಯ್ಯ ಪ್ರಾಣಿಗಳ ಮೆಲ್ಲೆನಯ್ಯಾ ಬಾಯಿಚ್ಚೆಗೆ
ಒಲ್ಲೆನಯ್ಯಾ ಪರಸತಿಯ ಸಂಗವ
ಬಲ್ಲೆನಯ್ಯಾ ಮುಂದೆ ತೊಡಕುಂಟೆಂಬುದ!
ಬಳ್ಳದ ಬಾಯಂತೆ ಒಂದೇ ಮನವ ಮಾಡಿ
ನಿಲ್ಲೆಂದು ನಿಲಿಸಯ್ಯಾ ಕೂಡಲಸಂಗಮದೇವ

ಅಹಿಂಸೆ, ಬ್ರಹ್ಮಚರ್ಯ, ಅಸ್ವಾದ ಇವೇ ಮೊದಲಾದ ನೈತಿಕ ಮೌಲ್ಯಗಳನ್ನು ಸಾಧಿಸುವುದು ಅದೆಷ್ಟು ಕಷ್ಟ ಎಂಬುದನ್ನು ಬಸವಾದಿ ಶರಣರು ತಮ್ಮ ಅನೇಕ ವಚನಗಳಲ್ಲಿ ಪ್ರಸ್ತಾಪಿಸಿದ್ದಾರೆ. ಅದಕ್ಕೆ ಬೇಕಾದ ಶಕ್ತಿಯನ್ನು ಕರುಣಿಸುವಂತೆ ಭಗವಂತನಲ್ಲಿ ನಿವೇದಿಸಿಕೊಂಡಿದ್ದಾರೆ. 'ಬಳ್ಳದ ಬಾಯಂತೆ ಒಂದೇ ಮನವ ಮಾಡಿ ನಿಲಿಸಯ್ಯಾ' ಎಂದು ದೇವರನ್ನು ಬೇಡುತ್ತಾರೆ. ಬಾಯಿಚಪಲಕ್ಕಾಗಿ ತಿನ್ನುವವನು ನೀತಿಯ ಪಥದಲ್ಲಿ ಬಹು ದೂರ ಸಾಗಲಾರನು ಎಂಬ ಶರಣರಿಗೆ ಗೊತ್ತಿತ್ತು. ಗಾಂಧೀಜಿಯವರು ತಮ್ಮ ಏಕಾದಶ ವ್ರತಗಳಲ್ಲಿ 'ಅಸ್ವಾದ' ಎಂಬುದನ್ನೂ ಒಂದು ವ್ರತವಾಗಿ ಸ್ವೀಕರಿಸಿದ್ದರು.

(ಮುಂದುವರಿಯುವುದು)

ಅಗ್ಘವಣಿ ಸುಯಿದಾನವಾದ ಶರಣಂಗೆ,
ತನು ಸುಯಿದಾನವಾಗಬೇಕು.
ತನು ಸುಯಿದಾನವಾದ ಶರಣಂಗೆ
ಮನ ಸುಯಿದಾನವಾಗಬೇಕು.
ಮನ ಸುಯಿದಾನವಾದ ಶರಣಂಗೆ
ಪ್ರಾಣದ ಮೇಲೆ ಲಿಂಗ ಸಯವಾಗಬೇಕು.
ಪ್ರಾಣದ ಮೇಲೆ ಲಿಂಗ ಸಯವಾಗದಿರ್ದಡೆ
ಇದೆಲ್ಲ ವೃಥಾ ಎಂದಿತ್ತು ಕೂಡಲಚೆನ್ನಸಂಗಯ್ಯನ ವಚನ

**– ಚನ್ನಬಸವಣ್ಣ**

# ವೀರಶೈವ ಸಂಸ್ಕೃತ ಸಾಹಿತ್ಯದ ಸಿಂಹಾವಲೋಕನ

ಡಾ. ಬಿ. ನಂಜುಂಡಸ್ವಾಮಿ

ಪ್ರಪಂಚದ ಜನತೆ ಬೆರಗುಗಣ್ಣಿನಿಂದ ಭಾರತದ ಕಡೆ ನೋಡುವುದು ಇಲ್ಲಿರುವ ವಿವಿಧ ಧರ್ಮಗ್ರಂಥಗಳ ಬೃಹತ್ ಗ್ರಂಥಾಲಯಗಳನ್ನು ಕಂಡು ಸೋಜಿಗವನ್ನು ಮತ್ತು ಆಶ್ಚರ್ಯವನ್ನು ವ್ಯಕ್ತಪಡಿಸುತ್ತಾರೆ. ಈ ನೆಲದಲ್ಲಿ ಪ್ರಾಚೀನ ಶ್ರುತಿ, ಸ್ಮೃತಿಕಾಲದಿಂದ ಪ್ರಾರಂಭ ಮಾಡಿ ವೇದ, ಉಪನಿಷತ್ತುಗಳ ಹಸ್ತಪ್ರತಿಗಳು ಆನಂತರ ಪುರಾಣಕಾಲದ ಹಸ್ತಪ್ರತಿಗಳ ಜೊತೆಗೆ ಶಕ್ತಿವಿಶಿಷ್ಟಾದ್ವೈತ, ಅದ್ವೈತ, ವಿಶಿಷ್ಟಾದ್ವೈತ, ದ್ವೈತ, ಗಾಣಾಪತ್ಯ, ಶಾಕ್ತೇಯ, ಬೌದ್ಧ, ಜೈನಧರ್ಮದ ಅಪಾರ ಹಸ್ತಪ್ರತಿಗಳ ಸಂಗ್ರಹವನ್ನು ನೋಡಬಹುದು. ಆನಂತರ ಭರತಖಂಡಕ್ಕೆ ಅಗಂತಕಧರ್ಮವಾಗಿ ಪ್ರವೇಶ ಮಾಡಿದ, ಇಸ್ಲಾಂ ಮತ್ತು ಕ್ರೈಸ್ತ ಧರ್ಮದ ಹಸ್ತಪ್ರತಿಗಳನ್ನು ಗಮನಿಸಬಹುದು. ಜೊತೆಗೆ ಉಪವೇದವೆಂದು ಪ್ರಸಿದ್ಧವಾದ ಆಯುರ್ವೇದ, ಯೋಗ, ಜ್ಯೋತಿಷ್ಯ, ವಾಸ್ತು, ಸಂಗೀತ, ನೃತ್ಯ ಮುಂತಾದ, ಸದಾ ಮಾನವನ ಶ್ರೇಯಸ್ಸನ್ನು ಬಯಸುವ ಅನೇಕ ವಿಷಯಗಳನ್ನು ಕುರಿತು ರಚನೆಗೊಂಡ ಮೂಲ ಆಕರ ಗ್ರಂಥಗಳ ರಾಶಿಯೇ ನಮ್ಮ ದೇಶದಲ್ಲಿ ಇದೆ. ಇವುಗಳ ಜೊತೆ ವ್ಯಾಕರಣ, ಛಂದಸ್ಸು, ಅಲಂಕಾರದ ಬಗ್ಗೆ ಅನೇಕ ಗ್ರಂಥಗಳು ಲಭ್ಯವಿದೆ. ಈಗ ಭಾರತದೇಶದಿಂದ ರಾಜಕೀಯವಾಗಿ ಬೇರ್ಪಟ್ಟಿರುವ ಸಿಲೋನ್, ಬಂಗ್ಲಾ, ಪಾಕಿಸ್ತಾನ, ನೇಪಾಳ, ಟಿಬೆಟ್ ಮೊದಲಾದ ದೇಶಗಳು ಭೌಗೋಳಿಕವಾಗಿ ಭಾರತದೇಶಕ್ಕೆ ಸಂಬಂಧಪಟ್ಟದ್ದು, ಈ ದೇಶಗಳಲ್ಲಿ ಅಳಿದು ಉಳಿದಿರುವ ಆಯಾ ಪ್ರಾಂತದಲ್ಲಿ ದೇಶಭಾಷೆಯಲ್ಲಿ ಲಿಖಿತಗೊಂಡಿರುವ ಸಂಸ್ಕೃತ ಗ್ರಂಥಗಳನ್ನು ಪರಿಗಣಿಸಿದರೆ ಅವುಗಳ ವಿಸ್ತಾರದ ಅರಿವು ನಮಗೆ ಉಂಟಾಗುತ್ತದೆ. ನಮಗೆ ಇನ್ನೆಲ್ಲಿಯೂ ಲಭ್ಯವಾದ ವಿಶೇಷವಾದ ಅಪರೂಪದ ಗ್ರಂಥ ಉತ್ತರಪ್ರದೇಶದ ಮೈಥಿಲಿ ಭಾಷೆಯಲ್ಲಿ ರಚನೆಗೊಂಡು ಅಡಗಿರಬಹುದು. ಮೈಥಿಲಿ-ಸಂಸ್ಕೃತ ಎರಡೂ ಭಾಷೆಯ ಸಾಹಿತ್ಯ ಗೊತ್ತಿರುವಂತಹ ವಿದ್ವಾಂಸರು ಸಂಶೋಧನೆ ಮಾಡಿ ಸಂಸ್ಕೃತದಲ್ಲಿ ಅಥವಾ ಇಂಗ್ಲಿಷ್ ಭಾಷೆಯಲ್ಲಿ ಅಖಿಲ ಭಾರತ ಮಟ್ಟದ ಪತ್ರಿಕೆಯಲ್ಲಿ ಲೇಖನ ಬರೆದರೆ ಅಥವಾ ಇಂಗ್ಲಿಷ್ ದಿನಪತ್ರಿಕೆಯಲ್ಲಿ ವರದಿ ಬಂದರೆ ಮಾತ್ರ ತಿಳಿಯುವಂತಹದು. ಈ ನಿಟ್ಟಿನಲ್ಲಿ ಆಯಾ ಪ್ರಾಂತದ ಯುವ ವಿದ್ವಾಂಸರು ಎಚ್ಚರಿಕೆಯಿಂದ ತಮ್ಮ ಪಾಲಿನ ಕರ್ತವ್ಯವನ್ನು ಮಾಡಬೇಕು.

ಅಖಿಲ ಭಾರತದ ಮಟ್ಟದ ನಾನಾ ವಿಶ್ವವಿದ್ಯಾಲಯುಗಳು ಹಸ್ತಪ್ರತಿ ಸಂಗ್ರಹಾಲಯದಲ್ಲಿ ವೀರಶೈವ ಧರ್ಮದ ಹಸ್ತಪ್ರತಿಗಳು ಸಂಗ್ರಹಿಸಲ್ಪಟ್ಟಿವೆ. ಅವುಗಳ ಬಗ್ಗೆ ವಿಶೇಷವಾದ ಮಾಹಿತಿಯನ್ನು ಸಂಗ್ರಹಿಸಬೇಕು. ಈ ನಿಟ್ಟಿನಲ್ಲಿ ನಮ್ಮ ಮಠಮಾನ್ಯಗಳು ವಿಶೇಷವಾದ ಗಮನಹರಿಸಬೇಕಾಗಿದೆ. ಈ ನಿಟ್ಟಿನಲ್ಲಿ ಯುವ ಸ್ವಾಮಿಗಳು ಆಸಕ್ತಿಯಿಂದ ಸೇವೆ ಸಲ್ಲಿಸಬೇಕು. ಕಾಶ್ಮೀರದಿಂದ – ಕನ್ಯಾಕುಮಾರಿಯವರೆಗೆ ಭಾರತದೇಶದ ಅಕ್ಕಪಕ್ಕ ದೇಶಗಳಲ್ಲಿ ಅಳಿದು ಉಳಿದಿರುವ ವೀರಶೈವ ಸಂಸ್ಕೃತ ಗ್ರಂಥಗಳ ಒಂದು ಪಟ್ಟಿಯನ್ನು ನಾವು ಸಿದ್ಧಮಾಡಬೇಕು. ಆ ನಿಟ್ಟಿನಲ್ಲಿ ಉತ್ತರ ಭಾರತದಲ್ಲಿರುವ ಕಾಶಿ ಜ್ಞಾನಸಿಂಹಾಸನ ಮಠ, ಕೇದಾರದ ವೈರಾಗ್ಯಸಿಂಹಾಸನ ಮಠ, ಆಂಧ್ರದ ಶ್ರೀಶೈಲದ ಸೂರ್ಯಸಿಂಹಾಸನ ಮಠ, ಕರ್ನಾಟಕದ ಬಾಳೆಹೊನ್ನೂರಿನ ವೀರಸಿಂಹಾಸನ ಮಠ, ಉಜ್ಜಯಿನಿ ಸದ್ಧರ್ಮ ಸಿಂಹಾಸನ ಮಠ ಈ ಬಗ್ಗೆ ವಿಶೇಷವಾದ ಸೇವೆಯನ್ನು ಸಲ್ಲಿಸಬೇಕಾಗಿದೆ. ಆಸಕ್ತ ಯುವ ವಿದ್ವಾಂಸರಿಗೆ ಆರ್ಥಿಕ ನೆರವು ನೀಡಿ ತುರ್ತಾಗಿ ಈ ಕಾರ್ಯವನ್ನು ಕೈಗೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಅಖಿಲ ಭಾರತ ಮಟ್ಟದಲ್ಲಿ ಸೇವೆ ಸಲ್ಲಿಸುತ್ತಾ ಇರುವ ವಿರಕ್ತ ಮಠಗಳೂ ಸಹಕರಿಸಬೇಕು. ಈ ಬಗ್ಗೆ ಬೃಹತ್ ಯೋಜನೆಯನ್ನು ವೀರಶೈವ ಮಹಾಸಭೆ ಹಾಕಿಕೊಂಡು ಸಮಾರೋಪಾದಿಯಲ್ಲಿ ಹಸ್ತಪ್ರತಿ ಮತ್ತು ಮುದ್ರಿತ ಗ್ರಂಥಗಳ ಸಂರಕ್ಷಣೆ ಮಾಡಬೇಕು.

ಮೈಸೂರು ನಾಡಿನ ಧರ್ಮಪ್ರಭು ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿ ಅನೇಕ ಕೃತಿಗಳು ಕಲ್ಲಚ್ಚಿನಲ್ಲಿ ಮುದ್ರಣವಾಗಿವೆ. ಅವುಗಳಲ್ಲಿ 'ಜಂಗಮಾಷ್ಟೋತ್ತರ'ವನ್ನು ನಾನು ಅಷ್ಟೋತ್ತರ ಗ್ರಂಥಸಂಗ್ರಹದಲ್ಲಿ ಗಮನಿಸಿದ್ದೇನೆ (ಈ ಕಲ್ಲಚ್ಚು ಗ್ರಂಥ ಬೆಂಗಳೂರಿನ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿದೆ). ಹೀಗೆ ಹಲವು ವೀರಶೈವ ಗ್ರಂಥಗಳು ೧೮೩೦ ರಿಂದ ಮುದ್ರಣದ ಭಾಗವನ್ನು ಕಾಣುತ್ತಾ ಬಂದಿವೆ. ೨೦೨೪ರ ಕಾಲಮಾನದವರೆಗೆ ಮುದ್ರಣವಾದ ಪುಸ್ತಕಗಳನ್ನೂ ಒಂದು ಕೇಂದ್ರ ಸ್ಥಳದಲ್ಲಿ ಸಂಗ್ರಹಿಸುವ ವ್ಯವಸ್ಥೆ ಮಾಡಬೇಕು. ಹಲವು ಮುದ್ರಿತ ಪುಸ್ತಕಗಳು ಇಂದು ಯಾವ ಗ್ರಂಥಾಲಯದಲ್ಲಿಯೂ ಉಳಿದಿಲ್ಲ. ಅಂತಹ ಅಪರೂಪದ ಗ್ರಂಥಗಳನ್ನು ಆಧುನಿಕ ಕಂಪ್ಯೂಟರ್, ಸ್ಕ್ಯಾನರ್, ಡಿಜಿಟಲ್ ಫೋಟೋ ಹೀಗೆ ನಾನಾ ಆಧುನಿಕ ಉಪಕರಣಗಳ ಸಹಾಯದಿಂದ ಸಂರಕ್ಷಿಸಬೇಕು. ವಿವರ ಕೇಳಿ ಬಂದವರಿಗೆ ತುದಿಬೆರಳಿನಲ್ಲಿ ಸಿಕ್ಕುವಂತೆ ಯುವ ವಿಜ್ಞಾನಿಗಳು ಮಾಡಬೇಕು. ಕಳೆದ ಶತಮಾನದಲ್ಲಿ ಮುದ್ರಣವಾದ ವೀರಶೈವಾಚಾರ ಕೌಸ್ತುಭ, ಏಕೋತ್ತರ ಶತಸ್ಥಲೀ ಮುಂತಾದ ಗ್ರಂಥಗಳು ಆಧುನಿಕ ವಿದ್ವಾಂಸರಿಗೆ ನೋಡಲೂ ಸಹ ಲಭ್ಯವಾಗಿಲ್ಲ. ಇನ್ನು ಹೊರದೇಶದಲ್ಲಿ ವಿಶೇಷವಾಗಿ ಇಂಗ್ಲೆಂಡ್ ದೇಶದ ಅನೇಕ ವಿಶ್ವವಿದ್ಯಾಲಯಗಳಲ್ಲಿ, ವಿಶೇಷವಾಗಿ ಲಂಡನ್ ನಗರದ 'Indian House' ನಲ್ಲಿ ಅಪಾರವಾದ ಮುದ್ರಿತ ಗ್ರಂಥಗಳ ಸಂಗ್ರಹವಿದೆ. ಅಲ್ಲಿಗೆ ನಮ್ಮ ಸಂಸ್ಕೃತ ವಿದ್ವಾಂಸರನ್ನು ಕಳುಹಿಸಿ ಅಲ್ಲಿರುವ

ವೀರಶೈವ ಸಂಸ್ಕೃತ ಹಸ್ತಪ್ರತಿಗಳು ಮತ್ತು ಮುದ್ರಿತ ಪುಸ್ತಕಗಳ ಪಟ್ಟಿಯನ್ನು ತರಿಸಬೇಕು. ಇಲ್ಲಿ ಲಭ್ಯವಿಲ್ಲದ ಕೃತಿಗಳನ್ನು ಅಲ್ಲಿಂದ ಪ್ರತಿ ಮಾಡಿಸಿ ತರಿಸಿ, ಗ್ರಂಥ ಸಂಪಾದನಾ ಶಾಸ್ತ್ರದಂತೆ ಸಂಪಾದಿಸಿ ಪ್ರಕಟಿಸಬೇಕು.

ವೀರಶೈವ ಸಂಸ್ಕೃತ ಗ್ರಂಥದಲ್ಲಿ ಮೊದಲು ಪ್ರಸ್ತಾಪಿಸಲ್ಪಡುವ ಗ್ರಂಥ "ಸಿದ್ಧಾಂತ ಶಿಖಾಮಣಿ". ಈ ಗ್ರಂಥ ಸುಮಾರು ಹತ್ತನೆಯ ಶತಮಾನದ್ದು ಎಂದು ಕೆಲವರು, ಬಸವೋತ್ತರ ಕಾಲಮಾನದ್ದು ಎಂದು ಟೀಕೆಯಲ್ಲಿ ಪ್ರಸ್ತಾಪವಾಗಿರುವ ಹಲವು ವಿಷಯವನ್ನು ವಿದ್ವಾಂಸರು ಚರ್ಚಿಸಿ ಹಲವು ಲೇಖನವನ್ನು ಬರೆದಿದ್ದಾರೆ. ಅಖಿಲ ಭಾರತ ಮಟ್ಟದಲ್ಲಿ ಲಭ್ಯವಿರುವ ಓಲೆಗರಿ ಹಸ್ತಪ್ರತಿಗಳು, ಕಾಗದದ ಹಸ್ತಪ್ರತಿಗಳು ಮತ್ತು ಮುದ್ರಿತ ಗ್ರಂಥಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಬೇಕು. ಮರಿತೋಂಟದಾರ್ಯ, ಸೋಸಲೆ ರೇವಣಾರಾಧ್ಯ, ಉಜ್ಜನೀಶ ಮತ್ತು ಅಜ್ಞಾತರ ಎರಡು ಟೀಕೆಗಳು ಅಚ್ಚಾಗಿವೆ. ಶಿವತತ್ತ್ವರತ್ನಾಕರದ ಕರ್ತೃ ಕೆಳದಿ ಬಸವಪ್ಪನಾಯಕ ಬರೆದ 'ಸಿದ್ಧಾಂತ ಶಿಖಾಮಣಿ' ಗ್ರಂಥದ ಟೀಕೆ ಇದುವರೆಗೂ ಎಲ್ಲಿಯೂ ಲಭ್ಯವಾಗಿಲ್ಲ. ಕಾಲಗರ್ಭದಲ್ಲಿ ಅಡಗಿರುವ ಈ ಕೃತಿಯನ್ನು ಸಂಶೋಧಿಸಬೇಕಾಗಿದೆ. ಈ ಹಿಂದೆ 'ಶಿವಾನುಭವ' ಪತ್ರಿಕೆಯಲ್ಲಿ (ಸಂಪುಟ ೧೩ ಸಂಚಿಕೆ ೩, ಡಿಸೆಂಬರ್ ೧೯೩೮) 'ವೀರಶೈವ ಗ್ರಂಥಕಾರರು' ಲೇಖನದಲ್ಲಿ ಮೈಸೂರಿನ ಪಂಡಿತ ಕೆ.ಸಿ. ನಂಜುಂಡಾರಾಧ್ಯರು 'ಕೆರೆಗೋಡು ನಂಜಣಾಚಾರ್ಯರು' ಸಿದ್ಧಾಂತ ಶಿಖಾಮಣಿಗೆ ವ್ಯಾಖ್ಯಾನವನ್ನು ಬರೆದಿರುವ ವಿಷಯವನ್ನು ಪ್ರಸ್ತಾಪಿಸಿದ್ದಾರೆ.

ಕನಕಪುರದ 'ದೇಗುಲ ಜ್ಯೋತಿ' ಸ್ಮರಣ ಸಂಪುಟ ೧೯೭೬ ಹೊರಬಂದಿದ್ದು ಈ ಸಂಪುಟದ ಸಂಪಾದಕರು ಶ್ರೀ ಎನ್. ಮಹಾದೇವಪ್ಪ ಮತ್ತು ಕನಕಪುರದ ಬಿ. ನಂಜುಂಡಪ್ಪ. ಈ ಸಂಪುಟದಲ್ಲಿ ವಿದ್ವಾನ್ ಎಂ.ಎಸ್. ಬಸವರಾಜಯ್ಯನವರು ವೀರಶೈವ ಸಂಸ್ಕೃತ ಸಾಹಿತ್ಯದ ಸ್ಥೂಲ ಸಮೀಕ್ಷೆ ಲೇಖನದಲ್ಲಿ

೧) ಈಶಾನ ಶಿವಗುರು : ಕ್ರಿ.ಶ. ೧೦ನೇ ಶತಮಾನ – ರೇಣುಕಚರಿತಮ್

೨) ಸೋಮಶಂಭು : ಸು. ೧೦೭೩ – ಸೋಮಶಂಭು ಪದ್ಧತಿಃ

೩) ಶ್ರೀಪತಿ ಪಂಡಿತ : ಸು. ೧೦೭೦ – ಶ್ರೀಕರಭಾಷ್ಯಮ್

೪) ಮಲ್ಲಿಕಾರ್ಜುನ ಪಂಡಿತ : ಸು ೧೧೬೦ ಈತನ

i) ಶ್ರೀಮುಖ ದರ್ಶನಮ್ ಅಮರೇಶ್ವರಾಷ್ಟಕಂ

ii) ರುದ್ರಮಹಿಮಾ ಸ್ತುತಿಶ್ಲೋಕ ಪಂಚಕಂ

iii) ಲಿಂಗೋದ್ಭವಗದ್ಯಂ ಪರ್ವತವರ್ಣನಂ

iv) ಸಂಸಾರಮಾಯಾಸ್ತವಃ

೫) ಆನಂದಗೀತಾ

೬) ಶಂಕರಗೀತಾ

೫) ಮಲ್ಲಮಾರ್ಯ ಗುರು : ಸು. ೧೧೬೫ ಶಿವಜ್ಞಾನ ಪ್ರದೀಪಿಕಾ

೬) ಲಕ್ಷ್ಮೀದೇವಗುರು : ಸು. ೧೧೬೫ ಸಾರೋದ್ಧಾರ:

೭) ತಟಾಕ ಪದ್ಮರಾಜ : ಅಥವಾ ಕೆರೆಯ ಪದ್ಮರಸ ಸು. ೧೧೬೫ ಸಾನಂದಚರಿತಂ

೮) ಜ್ಯೋತಿರ್ನಾಥ ಸು. ೧೧೬೫ ಶೈವರತ್ನಾಕರ (ಒಂದು ಭಾಗ ಮೈಸೂರಿನ O.R.I ನಿಂದ ಮುದ್ರಣವಾಗಿದೆ.)

೯) ಜಗದಾರಾಧ್ಯ ವಾಗೀಶಗುರು ಶಿವಜ್ಞಾನ ಸಮುಚ್ಚಯ

೧೦) ನೀಲಕಂಠ ನಾಗನಾಥಾಚಾರ್ಯ: ವೀರಮಾಹೇಶ್ವರಾಚಾರ ಸಂಗ್ರಹಃ (ಕನ್ನಡ ಟೀಕೆ ಸಮೇತ ಒಂದು ಭಾಗ ಮಾತ್ರ O.R.I ನಿಂದ ಮುದ್ರಣವಾಗಿದೆ, ಲಿಂ. ವಾರದ ಮಲ್ಲಪ್ಪನವರಿಂದ ಮರಾಠಿ ಟೀಕೆ ಸಮೇತ ಎರಡು ಅಥವಾ ಮೂರು ಭಾಗಗಳಲ್ಲಿ ಮುದ್ರಣವಾಗಿದೆ. ಪುಸ್ತಕ ಅವಲೋಕನೆಗೆ ಲಭ್ಯವಾಗಿಲ್ಲ).

೧೧) ಪಾಲ್ಕುರಿಕೆ ಸೋಮನಾಥ ಸು. ೧೩೦೫

೧. ಬಸವರಾಜೀಯಂ ಅಥವಾ ಸೋಮನಾಥ ಭಾಷ್ಯ (ಲಿಂ॥ ಪಂಡಿತ ಡಿ. ಸಿದ್ಧಗಂಗಯ್ಯನವರಿಂದ ಸಂಪಾದನೆಗೊಂಡಿದೆ. ಕರ್ನಾಟಕ ಸರ್ಕಾರದ ಪತ್ರಾಗಾರ ಇಲಾಖೆಯಿಂದ ಮುದ್ರಣವಾಗಿದೆ.)

೨. ಪಂಚಪ್ರಕಾರ ಗದ್ಯಂ ೩. ಬಸವೋದಾರಣಂ ೪ ಬಸವಾಕ್ಷರಮಾಲಾಗದ್ಯಂ ೫. ವೃಷಭಾಷ್ಟಕಂ ೬. ವೃಷಭಾವತರಣಂ ೭. ಬಸವಪಂಚರತ್ನಂ ೮. ಬಸವಮುಕ್ತ ಪದಗ್ರಸ್ತ ಸ್ತೋತ್ರಂ ಇವೆಲ್ಲಾ ಸ್ತೋತ್ರ ರೂಪದಲ್ಲಿ ಇರುವಂತಹದು. ಕೆಲವು ಟೀಕಾ ಸಮೇತ ಕೆಲವು ಟೀಕಾರಹಿತ ಮುದ್ರಣವಾಗಿವೆ. ೯. ವೀರಶೈವ ಶಿಖಾಮಣಿಕೆ ಈ ಗ್ರಂಥದ ಬಗ್ಗೆ ವಿವರ ತಿಳಿದಿಲ್ಲ. ೧೩. ಗುರುದೇವಃ ಸು ೧೩೫೦ ವೀರಶೈವಾಚಾರ ಪ್ರದೀಪಿಕಾ ೧೪) ನೀಲಕಂಠ ಶಿವಾಚಾರ್ಯಃ ಸು ೧೪೦೦ 'ಕ್ರಿಯಾಸಾರಕ' ಈ ಬೃಹತ್ ಗ್ರಂಥ ಹಿಂದೆ ಆಸ್ಥಾನ ಮಹಾವಿದ್ವಾನ್ ಕರ್ಣಾಟಕ ಭಾಷಾರತ್ನಂ ಪಿ.ಆರ್. ಕರಿಬಸವಶಾಸ್ತ್ರಿಗಳಿಂದ ಸಂಪಾದನೆಗೊಂಡು ಮೈಸೂರು ಸ್ಟಾರ್ ಯಜಮಾನ್ ವೀರಸಂಗಪ್ಪನವರಿಂದ ಪ್ರಕಟಣೆಯಾಗಿತ್ತು. ದೇವನಾಗರಿ ಲಿಪಿಯಲ್ಲಿ O.R.I ಎರಡು ಸಂಪುಟದಲ್ಲಿ ಮುದ್ರಣಗೊಂಡಿದೆ.

೧೫. ಮೊಗ್ಗೆ ಮಾಯಿದೇವ:

೧) ಅನುಭವ ಮಾತ್ರ

೨) ವಿಶೇಷಾರ್ಥ ಪ್ರಕಾಶಿಕೆ ಈ ಎರಡು ಗ್ರಂಥಕ್ಕೆ ಗೊರಗೋಡು ಪರಂಪರೆಯ ಉಜ್ಜನೇಶ ಟೀಕೆ ಬರೆದಿದ್ದಾನೆ ಅವು ಸಂಪಾದನೆಗೊಂಡು ಪ್ರಕಟವಾಗಿಲ್ಲ. ಪ್ರಾಚೀನ ಎರಡು ಟೀಕೆಗಳು ಅನುಭವಸೂತ್ರಕ್ಕೆ ಲಭ್ಯವಿದ್ದು ಡಾ. ಎಲ್. ಬಸವರಾಜುರವರಿಂದ ಸಂಪಾದನೆಗೊಂಡು ತುಮಕೂರಿನ ವೀರಶೈವ ಸಾಹಿತ್ಯ ಪ್ರಸಾರ ಪ್ರತಿಷ್ಠಾನದಿಂದ ಪ್ರಕಟಗೊಂಡಿದೆ. ಇದಕ್ಕೊಂದು ಸುಲಭವಾದ ಟೀಕೆಯನ್ನು ವೈ. ನಾಗೇಶಶಾಸ್ತ್ರಿಗಳು ಬರೆದಿದ್ದು ಮೊದಲು ಅದನ್ನು ವಚನಸಾಹಿತ್ಯ ಪಿತಾಮಹ ಫ.ಗು. ಹಳಕಟ್ಟಿಯವರು ಪ್ರಕಟಿಸಿದ್ದರು. ತದನಂತರ ಧಾರವಾಡದ ಮುರುಘಾಮಠದಿಂದ ಪ್ರಕಟವಾಗಿದೆ. 'ಅನುಭವ ಸೂತ್ರ' ಬೆಂಗಳೂರಿನ ಡಾ. ಶಿವಕುಮಾರಸ್ವಾಮಿಯವರಿಂದ ಸಂಪಾದನೆಗೊಂಡು ಟೀಕಾಸಮೇತ ಪ್ರಕಟವಾಗಿದೆ. 'ಮೈಸೂರು ಸ್ಟಾರ್' ಯಜಮಾನ್ ವೀರಸಂಗಪ್ಪನವರು 'ಅನುಭವಸೂತ್ರ' ಮೂಲಗ್ರಂಥವನ್ನು ಮೊಟ್ಟಮೊದಲು ಪ್ರಕಟಿಸಿದವರು. ಈ ಕೃತಿಯ ಸಂಪಾದಕರು ಪಿ.ಆರ್. ಕರಿಬಸವಶಾಸ್ತ್ರಿಗಳು.

೩) ಪ್ರಭುಗೀತೆ ಅಲ್ಲಿರುವ ಕನ್ನಡ ವಚನದ ಸಂಸ್ಕೃತ ಮೂಲದ ಈ ಕೃತಿಯನ್ನು ಸಂಪಾದಿಸಿ ದೇವನಾಗರಿ ಮತ್ತು ಕನ್ನಡದಲ್ಲಿ ಪ್ರಕಟಿಸಿದ ಕೀರ್ತಿ ಪ್ರೊ. ಸಿ. ಮಹಾದೇವಪ್ಪನವರದು.

೪) ಶಿವಾಧವಶತಕಂ ೫) ಶಿವಾವಲ್ಲಭಶತಕಂ ೬) ಐಪುರೀಶ್ವರ ಶತಕಂ ಈ ಮೂರು ಶತಕಗಳಲ್ಲಿ ದೇವನಾಗರಿ ಲಿಪಿಯಲ್ಲಿ ಮುದ್ರಣ ಮಾಡಿದ ಕೀರ್ತಿ ಸದ್ಧರ್ಮದೀಪಿಕೆ ಚೆನ್ನಮಲ್ಲಿಕಾರ್ಜುನರದು. ಕನ್ನಡದ ಶತಕಗಳ ಹೆಸರನ್ನು ಸಂಸ್ಕೃತದಲ್ಲಿ ಕೊಟ್ಟಿದೆಯೆ ಹೇಗೆ ತಿಳಿಯುತ್ತಿಲ್ಲ.

೭) ಷಟ್ಸ್ಥಲಗದ್ಯಂ ಈ ಕೃತಿಯನ್ನು ಲಿಂ. ಎನ್.ಆರ್. ಕರಿಬಸವಶಾಸ್ತ್ರಿಗಳು ಮೊದಲು ಸಂಪಾದಿಸಿ ಪ್ರಕಟಿಸಿದರು.

೧೬) ಜಕ್ಕಣಾರ್ಯ: ಸು. ೧೪೩೦ "ಏಕೋತ್ತರ ಶತಸ್ಥಲೀ" ಯಂಥ ಮಹತ್ತ್ವದ ಗ್ರಂಥ ಈ ಮೊದಲು ಮೈಸೂರಿನ ಲಿಂ. ಎನ್.ಆರ್. ಕರಿಬಸವಶಾಸ್ತ್ರಿಗಳಿಂದ ಸಂಪಾದನೆಗೊಂಡು ಪ್ರಕಟವಾಗಿತ್ತು. ಮುದ್ರಿತ ಕೃತಿ ಅವಲೋಕನಕ್ಕೆ ಲಭ್ಯವಾಗಿಲ್ಲ. ಇತ್ತೀಚೆಗೆ ಲಿಂ. ನಿ. ಪ್ರ. ಸ್ವ. ಡಾ. ಇಮ್ಮಡಿ ಶಿವಬಸವಸ್ವಾಮಿಗಳು ಕರ್ನಾಟಕ ಸರ್ಕಾರದ ಪತ್ರಾಗಾರ ಇಲಾಖೆಯಿಂದ ಇದನ್ನು ಪ್ರಕಟಿಸಿದ್ದಾರೆ.

೧೭) ಗುರುರಾಜ ಸು. ೧೪೩೦ ಪಂಡಿತಾರಾಧ್ಯ ಚರಿತಂ ಐದು ಪ್ರಕರಣಗಳನ್ನು ಟೀಕಾ ಸಮೇತ ಮುದ್ರಿಸಿದ ಕೀರ್ತಿ ಲಿಂ. ಎನ್.ಆರ್. ಕರಿಬಸವಶಾಸ್ತ್ರಿಗಳದು.

೧೮) ಕಂಚೀ ಶಂಕರಾರಾಧ್ಯ ಬಸವಪುರಾಣಂ ಎಂಬ ಕೃತಿ ಮೂಲ ಮತ್ತು ಟೀಕಾಸಮೇತ ಆಸ್ಥಾನ ಮಹಾವಿದ್ವಾನ್ ಪಿ.ಆರ್. ಕರಿಬಸವಶಾಸ್ತ್ರಿಗಳಿಂದ

ಸಂಪಾದನೆಗೊಂಡು ಪ್ರಕಟವಾಗಿತ್ತು. ಕೆಲವು ವರ್ಷಗಳ ಹಿಂದೆ ಕರ್ನಾಟಕ ವಿಶ್ವವಿದ್ಯಾಲಯ ಬಸವೇಶ್ವರ ಅಧ್ಯಯನ ಪೀಠದಿಂದ ದೇವನಾಗರಿ ಲಿಪಿಯಲ್ಲಿ ಮೂಲ ಪಠ್ಯ, ಕನ್ನಡ ಗದ್ಯಾನುವಾದ ಸಮೇತ ಮುದ್ರಣವಾಗಿದೆ. ಈ ಕೃತಿಗೆ ಕನ್ನಡ ಭಾಷೆಯಲ್ಲಿ ಮೂರು ಟೀಕೆಗಳಿವೆ. ಯಾವ ಟೀಕೆಯು ಮುದ್ರಣವಾಗಿಲ್ಲ. ಈ ಬಗ್ಗೆ ಬಸವ ಪಥದಲ್ಲಿ ವಿಶೇಷವಾದ ಲೇಖನವನ್ನು ಬರೆದಿದ್ದೇನೆ.

೧೯) ಸ್ವಪ್ರಭಾನಂದನಾಥಃ ಶಿವಾದ್ವೈತಮಂಜರಿ ಎಂಬ ಕೃತಿ ಹಿಂದೆ 'ಮೈಸೂರು ಸ್ಟಾರ್' ಸಂಸ್ಥೆಯಿಂದ ಪ್ರಕಟವಾಗಿದೆ. ಅನಂತರ ಕಾಶೀನಾಥ ಶಾಸ್ತ್ರಿಗಳು ಕನ್ನಡ ಟೀಕಾಸಮೇತ ಪ್ರಕಟಿಸಿದ್ದಾರೆ.

೨೦) ಚೆನ್ನಸದಾಶಿವಯೋಗಿ ಸು. ೧೫೦೦ ಶಿವಯೋಗ ಪ್ರದೀಪಿಕಾ. ಮೊದಲು ಈ ಕೃತಿ ಲಿಂ. ಆಸ್ಥಾನವಿದ್ವಾನ್ ಎನ್.ಆರ್. ಕರಿಬಸವಶಾಸ್ತ್ರಿಗಳಿಂದ ಸಂಪಾದನೆಗೊಂಡು ಪ್ರಕಟವಾಗಿತ್ತು. ಅನಂತರ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಡಾ. ವೀರಣ್ಣ ರಾಜೂರರವರಿಂದ ಸಂಪಾದನೆಗೊಂಡು ಪ್ರಕಟವಾಗಿದೆ. ಈ ಕೃತಿ ದೇವನಾಗರಿ ಲಿಪಿಯಲ್ಲಿ ಮುದ್ರಣವಾಗಿದೆ ವಿವರ ಲಭ್ಯವಿಲ್ಲ.

೨೧) ಅಮರ ಬಸವಲಿಂಗಯತಿ: ೧೫೦೦ ಮಾಚಿದೇವ ಮನೋವಿಲಾಸಃ ಮೈಸೂರಿನ ಮೈಸೂರು ಸ್ಟಾರ್ ಯಜಮಾನ್ ವೀರಸಂಗಪ್ಪನವರಿಂದ ಪ್ರಕಟವಾಗಿದೆ. ಈ ಕೃತಿಗೆ ವಿಸ್ತೃತ ಟೀಕೆಯನ್ನು ಲಿಂಗೈಕ್ಯ ಡಿ. ಸಿದ್ಧಗಂಗಯ್ಯನವರು ಸಂಗ್ರಹಿಸಿದ್ದಾರೆ. ಪುಸ್ತಕ ಪ್ರಕಟಣೆ ವಿವರಗಳು ಲಭ್ಯವಿಲ್ಲ.

೨೨) ಸಂಪಾದನಾ ಸಿದ್ಧವೀರಣಾರ್ಯ ಸು. ೧೬೦೦ 'ಅನಾದಿ ವೀರಶೈವಾಚಾರ ಸಂಗ್ರಹಃ' ಈ ಮೊದಲು ಎರಡು ಸಂಪುಟದಲ್ಲಿ ವಾರದ ಮಲ್ಲಪ್ಪನವರಿಂದ ಮರಾಠಿ ಟೀಕೆಸಮೇತ ಪ್ರಕಟವಾಗಿತ್ತು. ಶಾಸ್ತ್ರಶುದ್ಧವಾಗಿ ಮೈಸೂರಿನ ಶ್ರೀ ಜಿ.ಎ. ಶಿವಲಿಂಗಯ್ಯನವರಿಂದ ಸಂಪಾದನೆಗೊಂಡು ಬಸವಸಮಿತಿಯಿಂದ ಪೂರ್ವಾರ್ಧ ಪ್ರಕಟವಾಗಿತ್ತು. ಉತ್ತರಾರ್ಧವು ಬೆಂಗಳೂರಿನ ವಿಭೂತಿಪುರದ ಶ್ರೀಗಳಿಂದ ಪ್ರಕಟವಾಯಿತು. ಉತ್ತರಾರ್ಧ ಪುಸ್ತಕದ ಪ್ರಧಾನ ಸಂಪಾದಕರಾಗಿ ಡಾ. ಸಿ. ಶಿವಕುಮಾರಸ್ವಾಮಿಯವರು ಸೇವೆ ಸಲ್ಲಿಸಿದ್ದಾರೆ.

೨೩) ಷಡಕ್ಷರದೇವ: ೧೬೫೫ 'ಕವಿಕರ್ಣರಸಾಯನಂ' ವೆಂಗನಸುಧಿ ಟೀಕೆ ಸಮೇತ ಅಸಮಗ್ರವಾಗಿ ಮೊದಲು ಎರಡು ಕಾಂಡವನ್ನು ಶ್ರೀ ಕಾಡದೇವರಮಠ ಅವರು ಪ್ರಕಟಿಸಿದ್ದರು. ಕವಿಕರ್ಣರಸಾಯನದ ಸ್ವಲ್ಪ ಭಾಗವನ್ನು ಕೆಲವು ಮಾಸಿಕ ಸಂಚಿಕೆಗಳಲ್ಲಿ ಮಾಗಡಿ ವೀರಪ್ಪಶಾಸ್ತ್ರಿಗಳು ಪ್ರಕಟಿಸಿದ್ದರು. ಅಸಮಗ್ರವಾಗಿ ಲಭ್ಯವಾದಷ್ಟು O.R.I ನಿಂದ ವಿದ್ವಾನ್ ಎಂ.ಎಸ್. ಬಸವರಾಜಯ್ಯನವರು ಸಂಪಾದಿಸಿ ಪ್ರಕಟಿಸಿದ್ದಾರೆ.

ಸಂಪೂರ್ಣ ಕೃತಿ ಲಭ್ಯವಾಗಿಲ್ಲ. ಕೇದಾರಪೀಠದ ಅರ್ಚಕರ ಬಳಿ ಈ ಕೃತಿಯ ಹಸ್ತಪ್ರತಿ ಇದೆ. ಸಂಪೂರ್ಣ ವಿವರ ಲಭ್ಯವಿಲ್ಲ.

ಷಡಕ್ಷರದೇವನ ಹಲವು ಲಘುಕೃತಿಗಳನ್ನು ನಿಶಾನಿಮಠದ ಶಾಂತವೀರಯ್ಯನವರು ಸಂಪಾದಿಸಿ ಷಡಕ್ಷರಿದೇವ ಸಂಗ್ರಹಿಸಿ ಸಂಪಾದಿಸಿದ ಅಥವಾ ರಚಿಸಿದ ಶಿವಪೂಜಾವಿಧಿ ಹಸ್ತಪ್ರತಿ ರೂಪದಲ್ಲಿ ಲಭ್ಯವಿದೆ. ಆ ಕಿರುಕೃತಿ ಇನ್ನೂ ಮುದ್ರಣಯೋಗ ಕಂಡಿಲ್ಲ (ಈ ಹಸ್ತಪ್ರತಿ ಲಿಂ. ಪಿ.ಎಂ. ಗಿರಿರಾಜುರವರ ಸಂಗ್ರಹದಲ್ಲಿದ್ದು ಈಗ ಚಿತ್ರದುರ್ಗದ ಬೃಹನ್ಮಠದಲ್ಲಿದೆ).

೨೪) ನಂದಿಕೇಶ್ವರ: ೧೭೦೦ ಲಿಂಗಧಾರಣ ಚಂದ್ರಿಕಾ. ಮೊದಲು ಕೇವಲ ಮೂಲ ಪಠ್ಯವನ್ನು ಲಿಂ. ಪಿ.ಆರ್. ಕರಿಬಸವಶಾಸ್ತ್ರಿಗಳು ಸಂಪಾದಿಸಿ ಯಜಮಾನ್ \ ವೀರಸಂಗಪ್ಪನವರು ಪ್ರಕಟಿಸಿದ್ದರು. ದೇವನಾಗರಿ ಲಿಪಿಯಲ್ಲಿ ಟೀಕಾಸಮೇತ ಕಾಶೀ ಜಂಗಮವಾಡಿ ಮಠದಿಂದ ಆನಂತರ ಪ್ರಕಟವಾಯಿತು.

೨೫) ವಿಸ್ತೃತವಾದ ಕನ್ನಡ ಟೀಕೆಯನ್ನು ಶಿರಸಿ ಗುರುಶಾಂತಶಾಸ್ತ್ರಿಗಳು ರಚಿಸಿ ಪ್ರಕಟಿಸಿದ್ದಾರೆ. ಕೆಳದಿ ಬಸವಭೂಪಾಲಂ : ೧ ಶಿವತತ್ತ್ವರತ್ನಾಕರ ಈ ಹಿಂದೆ ದಕ್ಷಿಣ ಕನ್ನಡದ ಮೂಲದ ಬೆನಗಲ್ ರಾಮರಾಯರು ಮತ್ತು ಮತ್ತೊಬ್ಬ ವಿದ್ವಾಂಸರಿಂದ ಸಂಪಾದನೆಗೊಂಡು ಪ್ರಕಟಗೊಂಡಿತ್ತು. ಅನಂತರ ಚಿತ್ರದುರ್ಗದ ಬೃಹನ್ಮಠದಿಂದ ಒಂದು ಭಾಗ ಕನ್ನಡ ಟೀಕೆ ಸಮೇತ ಪ್ರಕಟವಾಗಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಎರಡು ಭಾಗಗಳಲ್ಲಿ ಪ್ರಕಟಗೊಂಡಿದ್ದು, ಈ ಪುಸ್ತಕದ ಪ್ರಧಾನ ಸಂಪಾದಕರು ಮಲ್ಲೇಪುರಂ ವೆಂಕಟೇಶ್‌ರವರು, ೨) ಸುಭಾಷಿತ ಸುರದ್ರುಮ ಹಸ್ತಪ್ರತಿ ಲಭ್ಯವಿದ್ದು ಪ್ರಕಟವಾಗಬೇಕಾಗಿದೆ. ೩) ಸೂಕ್ತಿ ಸುಧಾಕರ: ಹಸ್ತಪ್ರತಿ ಬಗ್ಗೆ ವಿವರಣೆ ಇಲ್ಲ.

೨೬) ಸಂಗಮೇಶ್ವರ ಯತಿಯ ೧೭೧೦ ಸಂಗಮೇಶ್ವರ ವಿಲಾಸಭಾಷ್ಯಂ ಕೃತಿ ಮುದ್ರಣವಾಗಿಲ್ಲ. ಶ್ರೀ ಸಿದ್ಧಗಂಗಾ ಮಠದಲ್ಲಿ ಈ ಹಸ್ತಪ್ರತಿ ಇದೆ.

೨೭) ಸಂಗನಬಸವ ೧೭೫೦ ವೀರಶೈವಾಚಾರ ಸುಧಾನಿಧಿಃ ಟೀಕಾಕಾರ ಗುರುಬಸವ ಹಸ್ತಪ್ರತಿ ಬಗ್ಗೆ ವಿವರ ಲಭ್ಯವಿಲ್ಲ.

೨೮) ಮರಿತೋಂಟದಾರ್ಯ ವೀರಶೈವಾನಂದ ಚಂದ್ರಿಕಾ ವಾದಕಾಂಡ ಮಾತ್ರ ಹುಬ್ಬಳ್ಳಿ ಮೂರುಸಾವಿರ ಮಠದಿಂದ ೧೯೩೬ರಲ್ಲಿ ಬೆಳಗಾವಿಯ ಚಂದ್ರಶೇಖರಮಠದ ನ್ಯಾಯಾಚಾರ್ಯ ದರ್ಶನವಿಶಾರದ ಶ್ರೀಗುರುಲಿಂಗದೇವರಿಂದ ಸಂಪಾದನೆಗೊಂಡಿದೆ. ಇದೇ ವಾದಕಾಂಡ ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳಿಂದ ಸಂಪಾದನೆಗೊಂಡು ಕನ್ನಡ ಟೀಕೆ ಸಮೇತ ೧೯೬೦ ರಲ್ಲಿ ಬೇಲಿಮಠದ ಚರಮೂರ್ತಿ ನಿ॥ ಪ್ರ॥ ಸಿದ್ಧಲಿಂಗಸ್ವಾಮಿಗಳಿಂದ ಪ್ರಕಟವಾಗಿದೆ. ಕ್ರಿಯಾಕಾಂಡ, ಕಥಾಕಾಂಡ ಇನ್ನೂ

ಮುದ್ರಣವಾಗಿಲ್ಲ. ಈ ಹಿಂದೆ ಕ್ರಿಯಾಕಾಂಡವು ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳಿಂದ ಸಂಪಾದನೆಗೊಂಡು ಪ್ರಕಟಣೆಗೆ ಸಿದ್ಧವಾಗಿತ್ತು, ಮುದ್ರಣವಾಗಲಿಲ್ಲ. ಪಂಡಿತ್ ಡಿ. ಸಿದ್ಧಗಂಗಯ್ಯನವರು ಕ್ರಿಯಾಕಾಂಡ ಮತ್ತು ಕಥಾಕಾಂಡಗಳನ್ನು ಸಂಪಾದಿಸಿ ಸಿದ್ಧಪಡಿಸಿದ್ದಾರೆ ಮುದ್ರಣವಾಗಿಲ್ಲ.

೩೦) ಮೌನಪ್ಪ ಪಂಡಿತಃ – 'ವೀರಶೈವಾಚಾರ ಕೌಸ್ತುಭ" ಕೃತಿ ಮುದ್ರಣವಾಗಿದೆ. ವಿವರ ಲಭ್ಯವಿಲ್ಲ ಮತ್ತು ಅವಲೋಕನೆಗೂ ಸಿಕ್ಕಿಲ್ಲ. ಹಲವು ಭಾಗಗಳು ಉದಾ :' 'ಲಿಂಗಪೂಜಾವಿಧಿ'ಯನ್ನು ಗುಬ್ಬಿ ವೀರಶೈವಶಾಸ್ತ್ರಿಗಳು ಸಂಪಾದಿಸಿ ಪ್ರಕಟಿಸಿದ್ದಾರೆ. ಈ ಬಗ್ಗೆ ಮೈಸೂರಿನ ಸುತ್ತೂರು ಮಠದ 'ಪ್ರಸಾದ'ದಲ್ಲಿ ಲೇಖನ ಬಂದಿದೆ. ಗೃಹಪ್ರವೇಶವಿಧಿ ಮುಂತಾದ ಭಾಗಗಳು ಪ್ರಕಟವಾಗಿದೆ.

೩೦) ಸಪ್ಪೇಶ್ವರ ಯತಿಃ ೧೭೦೦–ಅಮೃತ ಸಪ್ಪೇಶ್ವರ ಭಾಷ್ಯಂ ಮೈಸೂರಿನ O.R.I ನಲ್ಲಿ ಮತ್ತು ಶ್ರೀ ಸಿದ್ಧಗಂಗಾ ಮಠದಲ್ಲಿ ಹಸ್ತಪ್ರತಿ ಇದೆ. ಕೃತಿ ಸಂಪಾದನೆಗೊಂಡು ಪ್ರಕಟವಾಗಬೇಕು.

೩೧) ನಿರ್ವಾಣಮಂತ್ರಿ ೧೭೨೫ – ಕ್ರಿಯಾಸಾರವ್ಯಾಖ್ಯಾ ಹಸ್ತಪ್ರತಿ ಬಗ್ಗೆ ಮಾಹಿತಿ ಇಲ್ಲ.

೩೨) ನಿಟ್ಟೂರು ನಂಜಣಾರ್ಯ: – ವೇದಾಂತಸಾರ ವೀರಶೈವ ಚಿಂತಾಮಣಿಃ ಉತ್ತರಭಾಗ ವಾರದ ಮಲ್ಲಪ್ಪನವರಿಂದ ಪ್ರಕಟವಾಗಿದೆ. ಸಂಪೂರ್ಣ ಹಸ್ತಪ್ರತಿ ತಿಪಟೂರು ತಾಲ್ಲೂಕು ಹೊನ್ನವಳ್ಳಿ ಮಠದಲ್ಲಿ ಇತ್ತು. ಅಲ್ಲಿಂದ ಹಂಪಿ ವಿಶ್ವವಿದ್ಯಾಲಯಕ್ಕೆ ಹೋಯಿತು. ಹಸ್ತಪ್ರತಿ ಅಲ್ಲಿ misplace ಆಗಿದೆ.

೩೩) ಬಸವ ಭೂಪಃ ಅಥವಾ ಬೂದಿ ಬಸವಪ್ಪನಾಯಕ. ಪಂಚಶ್ಲೋಕೀ ವ್ಯಾಖ್ಯಾ (ವೀರಶೈವ ಸಂಜೀವಿನೀ) ಕೃತಿ ಮೈಸೂರಿನ ಎನ್.ಆರ್. ಕರಿಬಸವಶಾಸ್ತ್ರಿಗಳಿಂದ ಸಂಪಾದನೆಗೊಂಡು ಪ್ರಕಟಗೊಂಡಿದೆ.

೩೪) ಇಮ್ಮಡಿ ಮುರಿಗಾ ಗುರುಸಿದ್ಧ: ಅಥವಾ ದ್ವಿತೀಯ ಮುರಿಗಾ ಗುರುಸಿದ್ಧ: – 'ಪ್ರಭುಲೀಲಾ' ಮೈಸೂರಿನ O.R.I ನಿಂದ ಪ್ರೊ. ಮರುಳಸಿದ್ಧಯ್ಯನವರಿಂದ ಸಂಪಾದನೆಗೊಂಡು ಪ್ರಕಟವಾಗಿದೆ. 'ಲಿಂಗಾಚಾರ ರಚನಾಗಮಃ' ಹಸ್ತಪ್ರತಿ ಉಪಲಬ್ಧವಿದೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಂಪಾದನೆಗೊಂಡು ಪ್ರಕಟವಾಗಿಲ್ಲ.

೩೫) ಕಳಲೆ ನಂಜರಾಜ: ೧೭೪೦

೧. ವೈದ್ಯಸಾರ ಸಂಗ್ರಹಃ ಕಳೆದ ಶತಮಾನದಲ್ಲಿ ಅಚ್ಚಾಗಿದೆ. ೨. ಸಂಗೀತಗಂಗಾಧರಃ ಬೆಳಗಾವಿ ಸಮಿತಿಯವರಿಂದ ಸಂಪಾದನೆಗೊಂಡು ಉತ್ತರಭಾರತದ ಸಂಸ್ಥೆಯಿಂದ ಪ್ರಕಟವಾಗಿದೆ.

೩೬) ಷಡಕ್ಷರ ಮಂತ್ರಿ ೧೭೪೫ – 'ವೀರಶೈವ ಧರ್ಮ ಶಿರೋಮಣಿ' ಮೈಸೂರು ಎನ್.ಆರ್. ಕರಿಬಸವಶಾಸ್ತ್ರಿಗಳಿಂದ ಸಂಪಾದನೆಗೊಂಡು ಪ್ರಕಟವಾಗಿದೆ.

೩೭) ಬಸವರಾಜ: ಬಸವರಾಜೀಯಂ (ವೈದ್ಯಂ) ಸುಮಾರು ೩೫ ಸಾರಿ ಈ ಕೃತಿ ಆಂಧ್ರಪ್ರದೇಶದಲ್ಲಿ ಪ್ರಕಟವಾಗಿದೆ. ಈ ಬಗ್ಗೆ ಬಸವಪಥದಲ್ಲಿ ವಿಸ್ತೃತವಾದ ಲೇಖನ ಬರೆಯಲಾಗಿದೆ.

೩೮) ಸೋಸಲೆ ರೇವಣಾರಾಧ್ಯ ೧೬೨೩

೧) ಶಿವಾಧಿಕ್ಯ ಶಿಖಾಮಣಿಃ ಮೈಸೂರು ನಮಃಶಿವಾಯ ಮಠದ ಸ್ವಾಮಿಗಳಿಂದ ಸಂಪಾದನೆಗೊಂಡು ಪ್ರಕಟಗೊಂಡಿದೆ.

೨) ವೀರಶೈವ ಸಿದ್ಧಾಂತ ಪ್ರಥಮ ಗಣಪದ್ಧತಿಃ

೩) ಶಿವಾಧಿಕ್ಯ ಪ್ರದೀಪಿಕಾ

೪) ಕವಿಸಮಯ ವಿಲಾಸಃ

೫) ಕರ್ಮಪಾಕ ಪ್ರದೀಪಿಕಾ

ಈ ಮೇಲಿನ ನಾಲ್ಕು ಕೃತಿಗಳ ಹಸ್ತಪ್ರತಿ ಬಗ್ಗೆ ಮಾಹಿತಿ ಇಲ್ಲ.

೩೯) ಗುಬ್ಬಿ ವೀರೇಶ್ವರ ಶಾಸ್ತ್ರಿ ೧೯೨೭ 'ವೀರಶೈವಾನ್ವಯ ಚಂದ್ರಿಕಾ'

ಈ ಕೃತಿಗೆ ಹಲವು ಮೂಲ ಗ್ರಂಥಗಳಿಂದ ಶ್ಲೋಕಗಳನ್ನು ಸಂಗ್ರಹಿಸಿ ತಾವೇ ಟಿಪ್ಪಣಿ ಬರೆದಿದ್ದಾರೆ. ಈ ಬಗ್ಗೆ ಸತ್ಯಶುದ್ಧಕಾಯಕ ಚಿತ್ರದುರ್ಗ ಪೀಠದ ಮಾಸಪತ್ರಿಕೆಯಲ್ಲಿ ಲೇಖನ ಬರೆಯಲಾಗಿದೆ.

ವೀರಶೈವ ಸಂಸ್ಕೃತ ಸಾಹಿತ್ಯದ ಬಗ್ಗೆ ವಿವರವನ್ನು ಸಂಗ್ರಹಿಸುತ್ತಾ ಇದ್ದೇನೆ. ಹತ್ತಾರು ಹಸ್ತಪ್ರತಿ ಸೂಚಿಗಳು ಮತ್ತು ಮುದ್ರಣ ಗ್ರಂಥದಿಂದ ಇನ್ನು ಸಾಕಷ್ಟು ಮಾಹಿತಿ ಇದೆ. ಮೊಗೆದಷ್ಟೂ ದೊರಕುವ ಈ ತವನಿಧಿಯ ಬಗ್ಗೆ ವಿವರವಾದ ಗ್ರಂಥವನ್ನು ಯುವ ವಿದ್ವಾಂಸರು ರಚಿಸಬೇಕು. ಸಂಸ್ಕೃತ ಪಾಠಶಾಲೆಗಳಲ್ಲಿ ಮತ್ತು ಮಠದ ಕಿರಿಯ ಶ್ರೀಗಳು ಈ ಬಗ್ಗೆ ತಲಸ್ಪರ್ಶಿಯಾಗಿ ಅಧ್ಯಯನ ಮಾಡಬೇಕು. ಸಂಸ್ಕೃತ ಗ್ರಂಥಗಳನ್ನು ಉದಾಸೀನ ಮಾಡಬಾರದು. ದೇಶವಿದೇಶದಲ್ಲಿ ಈ ಬಗ್ಗೆ ಅಧ್ಯಯನ ನಡೆಯುತ್ತಾ ಇದೆ. ನಾವೂ ಈ ನಿಟ್ಟಿನಲ್ಲಿ ಪ್ರಪಂಚದ ಜನತೆಯೊಡನೆ ಸಹಕರಿಸಬೇಕು.

❑

# ವಚನ ಸಾಹಿತ್ಯದಲ್ಲಿ ಶಾಂತಿ ಮತ್ತು ಸಾಮರಸ್ಯ

**ಹುಸ್ಕೂರು ಅಂಬಿಕಾ ಶಿವನಂಜಪ್ಪ**

ಪ್ರಾಚೀನಕಾಲದಿಂದಲೂ ನಮ್ಮ ದೇಶ ನಾಡು, ನುಡಿ ಸಂಸ್ಕೃತಿ, ಭಾವೈಕ್ಯತೆ, ರಾಷ್ಟ್ರೀಯತೆ, ಶಾಂತಿ, ಸಾಮರಸ್ಯದ ನೆಲೆವೀಡು. ಆಯಾ ಕಾಲದಲ್ಲಿ ಉಂಟಾಗುವ ಸಮಾಜವನ್ನು ಹಳಿ ತಪ್ಪಿಸುವ, ಮನುಷ್ಯನ ನೆಮ್ಮದಿಯನ್ನು ಕಸಿದುಕೊಳ್ಳುವ ಕೆಲವೊಂದು ಚಟುವಟಿಕೆಗಳು ಅಥವಾ ಬೆಳವಣಿಗೆಗಳನ್ನು ಬುಡಸಮೇತ ಕಿತ್ತು ಶಾಂತಿ, ಸಾಮರಸ್ಯವನ್ನು ಉಸಿರಾಗಿಸಿಕೊಂಡು ಗಟ್ಟಿಯಾಗಿ ನಿಂತ ಭವ್ಯ ಬೀಡು.

ಜಗತ್ತಿನಲ್ಲಿ ಉತ್ತಮ ಆಚಾರ–ವಿಚಾರಗಳು ಹಾಗೂ ಶಾಂತಿಯುತ, ಸುಸಂಸ್ಕೃತ ಬದುಕಿನ ನಡುವೆಯೇ ಅಸಮಾನತೆ, ಅಂಧಶ್ರದ್ಧೆ, ಮೌಢ್ಯಗಳು ತುಂಬಿದ ಪರಿಸ್ಥಿತಿ ಇರುವುದು ಎಲ್ಲಾ ಕಾಲಕ್ಕೂ ಸರ್ವೇಸಾಮಾನ್ಯ. ನಾಡಿನ ಸಾಮರಸ್ಯ ಹಾಗೂ ಶಾಂತಿಯನ್ನು ಕದಡುವ ಇಂತಹ ನಡಾವಳಿಗಳನ್ನು ತಿದ್ದಿ ತೀಡಲು ಆಯಾ ಕಾಲದಲ್ಲಿ ವಚನಕಾರರು, ಪ್ರವಾದಿಗಳು, ಕೀರ್ತನಕಾರರು, ಸಮಾಜಸುಧಾರಕರು ಹುಟ್ಟಿ ಜಗತ್ತಿಗೆ ಜ್ಞಾನದ ಬೆಳಕನ್ನು ನೀಡುತ್ತಲೇ ಬಂದಿದ್ದಾರೆ. ಕಾರಣ ಭಾರತ ಸಂಸ್ಕೃತಿ ಶಾಂತಿ, ಸಾಮರಸ್ಯದ ಮಂತ್ರವನ್ನು ಸಾರುತ್ತದೆ. ನಮ್ಮ ಪ್ರಾಚೀನ ಗ್ರಂಥಗಳಾಗಲೀ ಪೂರ್ವಿಕರಾಗಲೀ ಶಾಂತಿಯ ಮಂತ್ರ, ಅಹಿಂಸಾ ತತ್ತ್ವವನ್ನು ಸಾರಿದವರೆ. ಸೆಪ್ಟೆಂಬರ್ ೧೧, ೧೮೯೩ ರಂದು ಅಮೆರಿಕಾದ ಶಿಕಾಗೋ ನಗರದಲ್ಲಿ ನಡೆದ ಧರ್ಮಗಳ ಪಾರ್ಲಿಮೆಂಟಿನಲ್ಲಿ ೭,೦೦೦ ಪ್ರತಿನಿಧಿಗಳ ಮುಂದೆ ತಾವು ಮಾಡಿದ ಭಾಷಣದ ಪ್ರಾರಂಭದಲ್ಲಿ "ಸಿಸ್ಟರ್ಸ್ ಅಂಡ್ ಬ್ರದರ್ಸ್ ಆಫ್ ಅಮೆರಿಕಾ" ಎಂದು ಸಂಬೋಧಿಸಿ, ಅವರ ಆ ವಾತ್ಸಲ್ಯಭರಿತ ಮಾತುಗಳಿಗೆ ಮೂಕವಿಸ್ಮಿತರಾದ ಜನಸಮೂಹ ಎದ್ದುನಿಂತು ಗೌರವಿಸಿತ್ತು. ಅಂತಹ ಗೌರವಕ್ಕೆ ಪಾತ್ರರಾದ ಸ್ವಾಮಿ ವಿವೇಕಾನಂದರು ಹಾಗೂ ಪರರಿಗಾಗಿ ತಮ್ಮ ಬದುಕನ್ನು ಮುಡುಪಾಗಿಟ್ಟು, ಶಾಂತಿ ಸಾಮರಸ್ಯಕ್ಕೆ ಕಾರಣಕರ್ತರಾದ ಮಹಾತ್ಮ ಗಾಂಧೀಜಿ, ಮದರ್ ತೆರೆಸಾ, ಸಿದ್ಧಗಂಗಾ ಶ್ರೀಗಳು, ಸುತ್ತೂರು ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳಂತಹ ಮಹಾನ್ ಚೇತನಗಳು ನಾಡಿಗೆ ಸ್ಫೂರ್ತಿದಾಯಕ ಸಂದೇಶಗಳನ್ನು ನೀಡಿವೆ. ಇಂತಹವರು ನೀಡಿದ ಸಂದೇಶಗಳು, ಸಾಧನೆಗಳು ಹನ್ನೆರಡನೇ ಶತಮಾನದ ಫಲಶ್ರುತಿ ಎಂದರೆ ತಪ್ಪಾಗಲಾರದು. ಹಾಗಾಗಿ ವಚನಕಾರರು ಭ್ರಾತೃತ್ವದ ಮನೋಭಾವವನ್ನು ಬೆಳೆಸುವಲ್ಲಿ, ಪರರ ಕಷ್ಟನಷ್ಟಗಳಿಗೆ ಸ್ಪಂದಿಸಿ, ಮಾನವಸಂಬಂಧಗಳನ್ನು ಬೆಸೆಯುವಲ್ಲಿ, ವಿವಿಧತೆಯಲ್ಲಿ

ಏಕತೆಯನ್ನು ಸಾಧಿಸುವ ನಿಟ್ಟಿನಲ್ಲಿ ಸಮಾಜದಲ್ಲಿ ಶಾಂತಿ, ಸಾಮರಸ್ಯದ ಬೀಜವನ್ನು ಬಿತ್ತಿದವರು.

ನೂರಾರು ವರ್ಷಗಳ ಇತಿಹಾಸದಲ್ಲಿ ಜಿಡ್ಡುಗಟ್ಟಿ ಹೋಗಿದ್ದ ಜಾತಿ, ಧರ್ಮ, ಅಂಧಶ್ರದ್ಧೆ, ಮೂಢನಂಬಿಕೆಗಳು, ಹೆಣ್ಣಿನ ಶೋಷಣೆ ಮುಂತಾದ ಅನಿಷ್ಠ ಪದ್ಧತಿಗಳ ಅಥವಾ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುವ ಮಹಾನ್ ಕ್ರಾಂತಿಯ ಯುಗವೇ ಹನ್ನೆರಡನೇ ಶತಮಾನ. ವಚನಗಳ ಮೂಲಕ ಒಂದು ಹೊಸ ಮನ್ವಂತರವನ್ನೇ ಸೃಷ್ಟಿಸಿದ ವಚನ ಸಾಹಿತ್ಯದ ಕಾಲಘಟ್ಟ ಕರ್ನಾಟಕವಷ್ಟೇ ಏಕೆ, ಇಡೀ ಭಾರತದ ಇತಿಹಾಸದಲ್ಲಿ ಒಂದು ಮೈಲಿಗಲ್ಲು.

ನಮ್ಮ ದೇಶದಲ್ಲಿ ಶಾಂತಿ–ಸಾಮರಸ್ಯವನ್ನು ಕಾಪಾಡಲೆಂದೇ ಹಲವಾರು ಸಂಘ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಸಂಘಸಂಸ್ಥೆಗಳ ಉದ್ದೇಶ ಜನರ ಒಗ್ಗೂಡುವಿಕೆ. ಶಾಂತಿ–ಸಾಮರಸ್ಯಗಳು ಅಂಥ ಒಗ್ಗೂಡುವಿಕೆಯ ಪ್ರತಿಫಲ. ನಮ್ಮ ನಾಡಿನ ಎಲ್ಲಾ ಧರ್ಮಗಳು, ಧರ್ಮಗ್ರಂಥಗಳು ಸಾರುವ ಸಂದೇಶ ಒಂದೇ, ಅದುವೇ ಶಾಂತಿ ಮತ್ತು ಸಾಮರಸ್ಯದ ಬದುಕು; ನೆಮ್ಮದಿಯ ಜೀವನ.

ಅಂತೆಯೇ ಬಸವಾದಿ ಪ್ರಮಥರು ತಮ್ಮ ವಚನಗಳಲ್ಲಿ ಸಾರಿದ್ದೂ ಈ ತತ್ತ್ವಗಳನ್ನೇ. ಇದನ್ನೇ ಬಸವಣ್ಣನವರು "ದಯೆಯೇ ಧರ್ಮದ ಮೂಲವಯ್ಯಾ: ದಯವಿಲ್ಲದ ಧರ್ಮ ಅದೇವುದಯ್ಯಾ?..." ಎಂದು ಹೇಳಿದ್ದಾರೆ. ಕವಿಗಳು, ಸಂತರು, ಶರಣರು, ವಿಜ್ಞಾನಿಗಳು, ಸಮಾಜಸುಧಾರಕರು ಬದುಕುತ್ತಿರುವ ನಾಡಿದು. 'ಮನುಜ ಮತ ವಿಶ್ವಪಥ' ಎಂಬ ಕುವೆಂಪು ಅವರ ಆಶಯವೂ ಇದೇ. ಇಂತಹ ನಾಡಿನಲ್ಲಿ ಅಶಾಂತಿ, ಅಸಾಮರಸ್ಯ ವಾತಾವರಣಕ್ಕೆ ಜಾಗವೇ ಇರಬಾರದು. ಈ ಎಲ್ಲಾ ಆಶಯಗಳೊಂದಿಗೆ ವಚನಗಳು ಮಾಡಿದ ಕ್ರಾಂತಿ ಹೊಸ ಅಲೆಯನ್ನೇ ಇಂದಿಗೂ ಎಬ್ಬಿಸುತ್ತಿವೆ.

ಆತ್ಮಶೋಧನೆಯ ಮೂಲಕ ಸಮಾಜಶೋಧನೆಯನ್ನು ಮಾಡಿ ಶಾಂತಿ ಸಾಮರಸ್ಯದ ವಾತಾವರಣವನ್ನು ಕಲ್ಪಿಸಿಕೊಡುವಲ್ಲಿ ಮಹತ್ತರ ಪಾತ್ರ ವಹಿಸಿದ್ದು ವಚನಯುಗ. ನಮ್ಮೊಳಗಿನ ಬದಲಾವಣೆಯೊಂದಿಗೆ ಹೊರಗಿನ ಬದಲಾವಣೆಯನ್ನು ತಂದು, ಅಂತರಂಗ ಬಹಿರಂಗಗಳನ್ನು ಏಕವಾಗಿಸಿ ಕೇವಲ ಮನುಷ್ಯರಿಗಷ್ಟೇ ಅಲ್ಲ ಸಕಲ ಜೀವಾತ್ಮರಿಗೆ ಲೇಸನ್ನು ಬಯಸಿದವರು. ಮನುಷ್ಯಕೇಂದ್ರಿತ ಬದುಕನ್ನು ಪ್ರತಿಪಾದಿಸಿದವರು ವಚನಕಾರರು.

ಹಾಗಾಗಿ ಶಾಂತಿ, ಸಾಮರಸ್ಯ ಎಂಬ ವಿಚಾರಗಳಲ್ಲಿ ಶಬ್ದಗಳನ್ನು ಗಮನದಲ್ಲಿಟ್ಟುಕೊಳ್ಳುವುದಕ್ಕಿಂತ ಅವುಗಳ ಆಶಯಗಳನ್ನು ಗಮನದಲ್ಲಿಟ್ಟುಕೊಂಡು ವಚನಕಾರರು ಹೇಳಿರುವ ಅಂಶಗಳ ಕಡೆ ಗಮನ ಹರಿಸಬೇಕು. ಹೆಣ್ಣುಗಂಡಿನ ಸಮಾನತೆ ಅಥವಾ ಜಾತಿ, ಮತ, ಪಂಥಗಳನ್ನು ಮೀರಿ ಎಲ್ಲರೂ ಒಗ್ಗೂಡಬೇಕು ಎಂಬುದು ವಚನಕಾರರ ಮೂಲ ಧ್ಯೇಯವಾಗಿತ್ತು. ಅದರ ಫಲವಾಗಿ ಹುಟ್ಟಿಕೊಂಡಿದ್ದೇ ಅನುಭವ ಮಂಟಪ.

ವಚನ ಚಳುವಳಿ ಎಂದರೆ ಪ್ರಜಾಪ್ರಭುತ್ವ. ಪ್ರಜಾಪ್ರಭುತ್ವ ಎಂದರೆ ವಚನ ಚಳುವಳಿ ಎನ್ನಬಹುದು. ಅನುಭವ ಮಂಟಪ ಇಂತಹ ಪ್ರಜಾಪ್ರಭುತ್ವ ಪರಿಕಲ್ಪನೆಗೆ ವೇದಿಕೆಯಾಯಿತು. ವಚನ ಚಳುವಳಿ ಎಂಬುದು ನೊಂದವರ ಧ್ವನಿಯಾಯಿತು. ಹೆಣ್ಣು-ಗಂಡು, ಜಾತಿಮತ ಪಂಥಗಳನ್ನು ಮೀರಿ ಒಂದೇ ವೇದಿಕೆಯಲ್ಲಿ ಶಾಂತಿ-ಸಾಮರಸ್ಯದಿಂದ ತಮ್ಮ ತಮ್ಮ ಮನಸ್ಸಿನ ಭಾವನೆಗಳನ್ನು, ನೋವು-ನಲಿವುಗಳನ್ನು, ಸಮಾಜದಲ್ಲಿ ಆಗುತ್ತಿರುವ ಅನ್ಯಾಯ ಮತ್ತು ಶೋಷಣೆಯನ್ನು, ತಮ್ಮ ತಮ್ಮ ಆಲೋಚನೆಗಳನ್ನು, ಚಿಂತನೆಗಳನ್ನು ವಚನಗಳ ಮೂಲಕ ಬಿಂಬಿಸುವುದರ ಜೊತೆಗೆ ಒಬ್ಬರಿಗೊಬ್ಬರು ಬದುಕಿನ ಅನುಭವಗಳನ್ನು ಹಂಚಿಕೊಳ್ಳಲು ಪ್ರಾರಂಭಿಸಿದರು. ಹಾಗಾಗಿ ವಚನ ಸಾಹಿತ್ಯ ಶಾಂತಿ, ಸಾಮರಸ್ಯಕ್ಕೆ ಅತ್ಯುತ್ತಮ ಮಾದರಿ. ಅದು ಎಲ್ಲಾ ಗಡಿಗಳನ್ನು ದಾಟಿ ಜಾತಿ, ಮತ, ಧರ್ಮ, ಲಿಂಗಭೇದಗಳನ್ನು ದಾಟಿ ಎಲ್ಲರಿಗೂ ಮಾನವೀಯ ಮೌಲ್ಯಗಳನ್ನು ತಲುಪಿಸಿ ಶಾಂತಿ, ಸಾಮರಸ್ಯವನ್ನು ಕಾಪಾಡುವ ಧ್ಯೇಯೋದ್ದೇಶವನ್ನು ಹೊಂದಿರುವ ಮೂಲಕ ಪ್ರಜಾಸತ್ತಾತ್ಮಕ ಸಾಧನೆಯನ್ನು ಮಾಡಿದೆ.

ಬಸವಣ್ಣನವರು ಅನುಭವಮಂಟಪವನ್ನು ಸ್ವತಃ ಸ್ಥಾಪನೆ ಮಾಡಿದ್ದಲ್ಲದೆ ಅದರ ಅಧ್ಯಕ್ಷತೆಯನ್ನು ಅಲ್ಲಮಪ್ರಭುಗಳಿಗೆ ವಹಿಸಿಕೊಟ್ಟರು. ಬಸವಣ್ಣನವರು ತಾನು ನಾಯಕ ಎಂದು ಬಿಂಬಿಸದೆ ಎಲ್ಲಾ ಜನರನ್ನು ಸಾಮರಸ್ಯ ಮತ್ತು ಶಾಂತಿಯುತವಾಗಿ ಒಗ್ಗೂಡಿಸಿದ ಪರಿ ನಿಬ್ಬೆರಗಾಗುವಂಥದ್ದು. ಎಲ್ಲಾ ಜನಾಂಗದ ಸಮಾಗಮವೇ ಶಾಂತಿ-ಸಾಮರಸ್ಯಕ್ಕೆ ಬುನಾದಿ. ಇದನ್ನೇ ಅವರು ತಮ್ಮ ವಚನಗಳಲ್ಲಿ ಬಿಂಬಿಸಿದ್ದು. "ಎನಗಿಂತ ಕಿರಿಯರಿಲ್ಲ..." ಎಂದೇ ತಮ್ಮ ಹಿರಿತನವ ಮೆರೆದವರು.

ಸಮೂಹಪ್ರಜ್ಞೆ ವಚನಸಾಹಿತ್ಯದ ಮತ್ತೊಂದು ಪ್ರಮುಖ ಮಾನದಂಡ. ಬಸವಪ್ರಜ್ಞೆ ತುಂಬಾ ಜಾಗೃತವಾದದ್ದು. ೯೦೦ ವರ್ಷಗಳ ಹಿಂದೆ ಮಾಡಿದ ಸಿದ್ಧಾಂತಗಳನ್ನು ತತ್ತ್ವಗಳನ್ನು ಎತ್ತಿ ಹಿಡಿದರು. ಯಾವುದೇ ವ್ಯವಸ್ಥೆ ಒಂದು ಜನಾಂಗ, ಒಂದು ಜಾತಿ ಅಥವಾ ಒಂದು ಪಂಗಡ, ಒಬ್ಬ ವ್ಯಕ್ತಿಯ ಕೈಯಲ್ಲಿ ಒಂದು ವ್ಯವಸ್ಥೆ ಇರಬಾರದು ಎಂಬುದನ್ನು ಸಾರಿದರು. ಪ್ರತಿಯೊಬ್ಬ ಮನುಷ್ಯ ಸ್ವತಂತ್ರನಾಗಿರಬೇಕು. ಸ್ವತಂತ್ರವಾಗಿ ಆಲೋಚಿಸಬೇಕು. ಚರ್ಚೆಗಳ, ಸಂವಾದಗಳ ಮೂಲಕ ಎಲ್ಲಾ ಜನರನ್ನೂ ಒಗ್ಗೂಡಿಸಿ ಅಭಿಪ್ರಾಯಗಳನ್ನು ಹಂಚಿಕೊಳ್ಳಬೇಕು ಈ ಹಿನ್ನೆಲೆಯಲ್ಲಿ ಅನುಭವಮಂಟಪ ಕಾರ್ಯ ನಿರ್ವಹಿಸಿತು. ಅನುಭವ ಮಂಟಪದ ಮೂಲಕ ಸಕಲಜೀವಾತ್ಮರಿಗೆ ಲೇಸನ್ನು ಬಯಸಿದವರು ವಚನಕಾರರು. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಸಾಮಾಜಿಕ ನ್ಯಾಯ ಇವು ಆ ಸಂಸ್ಥೆಯ ನಾಲ್ಕು ಪ್ರಮುಖ ಸ್ತಂಭಗಳು. ಇವೇ ಅನುಭವಮಂಟಪದ ಮೂಲಧ್ಯೇಯಗಳು. ಈ ನಿಟ್ಟಿನಲ್ಲಿ ವರ್ಣವ್ಯವಸ್ಥೆಯನ್ನು ಧಿಕ್ಕರಿಸಿದರು.

ಸಮಾಜದಲ್ಲಿ ಸಮಾನತೆ ತರಲು ಸೂಕ್ತ ಪರಿಹಾರವೆಂದರೆ ಎಲ್ಲರೂ ಕಾಯಕ ಮಾಡಬೇಕು. ಕಾಯಕದಲ್ಲಿ ಮೇಲುಕೀಳಿಲ್ಲ. ಕಾಯಕದಿಂದ ಮನುಷ್ಯ ತನ್ನ ಬದುಕನ್ನು

ಅಚ್ಚುಕಟ್ಟಾಗಿ ನಡೆಸಬಲ್ಲ. ಮೇಲು–ಕೀಳು ಎಂಬ ತಾರತಮ್ಯವನ್ನು ಈ ಮೂಲಕ ನಾಶ ಮಾಡಬಹುದು ಎಂಬ ನಿಲುವನ್ನು ಶರಣರು ತಾಳಿದವರು. ಅದರ ಜೊತೆಗೆ ದಾಸೋಹ ತತ್ತ್ವವನ್ನೂ ಜಾರಿಗೆ ತಂದರು. ಕಾಯಕ ಮತ್ತು ದಾಸೋಹಗಳ ವಿಶಿಷ್ಟ ಪರಿಕಲ್ಪನೆ ವಚನ ಸಾಹಿತ್ಯದ ಹೆಗ್ಗಳಿಕೆ.

ಹೀಗೆ ತಮ್ಮ ಪ್ರತಿಯೊಂದು ಕೆಲಸದ ಹಿಂದೆಯೂ ಒಂದು ಸ್ವಸ್ಥಸಮಾಜ, ಶಾಂತಿ ನೆಮ್ಮದಿಯಿಂದ ಕೂಡಿರುವ ಸಮಾಜದ ನಿರ್ಮಾಣದ ಕನಸು ವಚನಕಾರರದಾಗಿತ್ತು. ಬದುಕಿನಲ್ಲಿ ಶಾಂತಿ ಯಾವಾಗ ಬರುತ್ತದೆಂದರೆ ನಾವೆಲ್ಲರೂ ಸಮಾನರು ಎಂಬ ಭಾವನೆ ಬಂದಾಗ ಮಾತ್ರ. ನಾವೆಲ್ಲರೂ ನೆಮ್ಮದಿಯಿಂದ ಊಟ ಮಾಡಲು ಸಾಧ್ಯವಾದಾಗ ಮಾತ್ರ ಪರಸ್ಪರ ಅನ್ಯೋನ್ಯತೆಯಿಂದಿರಲು ಸಾಧ್ಯ. ಅದನ್ನೇ ಬೇಂದ್ರೆಯವರು ತುತ್ತಿನ ಚೀಲ ಎನ್ನುತ್ತಾರೆ. ಇಂತಹ ಹೋರಾಟಗಳಿಂದಲೇ ವಚನಕಾರರ ನಿಲುವು ಮನುಷ್ಯಪರವಾದುದು ಎಂಬುದನ್ನು ತಿಳಿದುಕೊಳ್ಳಬಹುದು. ಮಾನವಲೋಕದ ಸರ್ವಾಂಗೀಣ ಪ್ರಗತಿಗೆ, ಉತ್ತಮ ವ್ಯಕ್ತಿತ್ವನಿರ್ಮಾಣಕ್ಕೆ ಆ ಮೂಲಕ ಸಾಮರಸ್ಯದ ಬದುಕಿಗೆ ಬೇಕಾದ ವಿಚಾರಧಾರೆಗಳನ್ನು ಕಟ್ಟಿಕೊಟ್ಟವರು ವಚನಕಾರರು. ವಚನಕಾರರು ಸಾರಿದ ಉದಾತ್ತ ಸಂದೇಶಗಳು, ನೀತಿನಿಯಮಗಳು ಸಾರ್ವಕಾಲಿಕವಾದವು, ಸಾರ್ವಜನಿಕವಾದವು. ಸಾರ್ವತ್ರಿಕವಾದವು. ಮಾನವಜನ್ಮ ಸಾರ್ಥಕವಾಗಬೇಕಾದರೆ ಹತ್ತಾರು ಜನಕ್ಕೆ ಉಪಕಾರಿಯಾಗಿ ಬದುಕು ನಡೆಸಬೇಕು. ಸತ್ತ ನಂತರವೂ ಬದುಕಬೇಕು. ಇದೇ ಜೀವನಸಾರ್ಥಕ್ಯ ಎಂದು ತಿಳಿಸಿಕೊಟ್ಟರು.

"ನುಡಿಯೊಳಗಾಗಿ ನಡೆಯದಿದ್ದರೆ ಕೂಡಲಸಂಗಮದೇವನೆಂತೊಲಿವನಯ್ಯಾ" ಎನ್ನುತ್ತಾರೆ ಬಸವಣ್ಣನವರು. ಅಂದರೆ, ಪ್ರತಿಯೊಬ್ಬ ಮನುಷ್ಯನೂ ಮೊದಲು ತನ್ನಲ್ಲಿರುವ ಕೀಳರಿಮೆಯನ್ನು, ಸಣ್ಣತನವನ್ನು, ಸ್ವಾರ್ಥ ಮನೋಭಾವವನ್ನು ಹೋಗಲಾಡಿಸಿಕೊಂಡು, ಪರಿಶುದ್ಧ ಮನಸ್ಕನಾಗಿ ಬಾಳಬೇಕು. ನಾವು ಆಡುವ ಮಾತಿಗೂ ಮಾಡುವ ಕೆಲಸಗಳಿಗೂ ಸಾಮ್ಯತೆ ಇರಬೇಕು. ಒಳಗೊಂದು ಭಾವ ಹೊರಗೊಂದು ಭಾವವಿದ್ದರೆ ಜಗತ್ತಿನ ಸಕಲ ಜೀವಿಗಳ ಜೀವನಕ್ಕೂ ಅದು ಅಪಾಯದ ಮಾರ್ಗವೇ. "ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪದೆ ಬದುಕುವ ಬದುಕು ನಿಜವಾದ ಸಾಮರಸ್ಯದ ಬದುಕು" ಎನ್ನುತ್ತಾರೆ ಬಸವಣ್ಣನವರು.

"ನುಡಿದರೆ ಮುತ್ತಿನ ಹಾರದಂತಿರಬೇಕು, ..." ನುಡಿದಂತೆ ನಡೆಯಬೇಕು. ಆ ಮೂಲಕ ಮುಂದಿನ ತಲೆಮಾರುಗಳಿಗೆ ನಾವು ನಮ್ಮ ಉನ್ನತ ಬದುಕಿನ ಹೆಜ್ಜೆ ಗುರುತುಗಳನ್ನು ಬಿಟ್ಟುಹೋಗಬಹುದು. ಅನಗತ್ಯ ಕೆಲಸಗಳಿಗೆ, ಅನಗತ್ಯ ಮಾತುಗಳಿಗೆ ಸಮಯವನ್ನು ವ್ಯರ್ಥ ಮಾಡುವ ಬದಲು ಸತ್ಕಾರ್ಯಗಳಿಗೆ ಅದನ್ನು ವಿನಿಯೋಗಿಸಿದರೆ ಒಳಿತು. ಮನುಷ್ಯ ಸದಾ ನಗುನಗುತ್ತಿರುವ ಬದುಕಿಗಾಗಿ ಹಾತೊರೆಯಬೇಕು. ಹಣ, ಅಧಿಕಾರದಂತಹ ವ್ಯಾಮೋಹಗಳಿಗೆ ಅತಿಯಾದ ಪ್ರಾಮುಖ್ಯತೆಯನ್ನು ಕೊಡಬಾರದು. ನಾನು, ನನ್ನದು ಎಂಬ ಅಹಂಕಾರವನ್ನು ಬಿಟ್ಟು, ನಾವು ನಮ್ಮದು ಎಂಬ ವಿಶಾಲ

ಭಾವಕ್ಕೆ ನಮ್ಮನ್ನು ನಾವು ತೆರೆದುಕೊಳ್ಳಬೇಕು. ಅಂದರೆ ನಾವು ಯಾವಾಗ ನಿಷ್ಕಲ್ಮಷ ಭಾವನೆಗಳನ್ನು ಹೆಚ್ಚಿಸಿಕೊಳ್ಳುತ್ತೇವೆಯೋ ಆಗ ಮಾತ್ರ ನಾವು ಎಲ್ಲವನ್ನೂ ನಿರ್ವಂಚನೆಯಿಂದ ಸ್ವೀಕರಿಸಬಲ್ಲೆವು. "ಇವನಾರವ ಇವನಾರವ" ಎಂಬುದನ್ನು ಮರೆತು "ಇವ ನಮ್ಮವ ಇವ ನಮ್ಮವ" ಎಂದು ಒಬ್ಬರಿಗೊಬ್ಬರು ಅರ್ಥ ಮಾಡಿಕೊಂಡು ಶಾಂತಿ, ಸಾಮರಸ್ಯದಿಂದ ಬಾಳಬಹುದು ಎಂದು ಎಚ್ಚರಿಸಿದವರು ವಚನಕಾರರು.

ಎಲ್ಲಾ ಕಾಲಗಳಲ್ಲಿಯೂ ಪ್ರತಿನಿತ್ಯ ಲಕ್ಷಾಂತರ ಕೂಲಿ ಕಾರ್ಮಿಕರು, ರೈತಾಪಿ ವರ್ಗದವರು, ಗಡಿ ಕಾಯುವ ಯೋಧರು – ಹೀಗೆ ಈ ನಾಡಿನ ಜನ ನೆಮ್ಮದಿಯಿಂದ ಉಂಡು, ನಿದ್ರಿಸಲು ಜನಸಾಮಾನ್ಯ ವರ್ಗದವರು ಕಾರಣಕರ್ತರಾಗಿದ್ದಾರೆ. ಭಾರತ ಸಂಪದ್ಭರಿತವಾದ ದೇಶ. ಇತ್ತೀಚೆಗಂತೂ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕವಾಗಿ ಸಮಾನ ಹಂಚಿಕೆಯಿಲ್ಲದ ವ್ಯವಸ್ಥೆಯಿಂದ ನಾಡಿನಲ್ಲಿ ಬಡವರು ಬಡವರಾಗಿಯೇ, ಶ್ರೀಮಂತರು ಶ್ರೀಮಂತರಾಗಿಯೇ ಉಳಿಯುತ್ತಿದ್ದಾರೆ. ಒಂದೆಡೆ ನಾಡಿನ ಸಂಪತ್ತೆಲ್ಲವನ್ನು ಲೂಟಿ ಮಾಡಿ, ತಿಂದು, ತೇಗಿ, ವಾಂತಿ ಮಾಡಿಕೊಳ್ಳುತ್ತಿರುವ ಕೆಲವು ಜನ. ಅಂತಹವರ ಅಟ್ಟಹಾಸವಂತೂ ಎಲ್ಲೆ ಮೀರಿದ್ದು. "ಕಣ್ಣಿನಲ್ಲಿ ನೋಡಿ, ಮಣ್ಣಿನಲ್ಲಿ ನೆರಹಿ, ಉಣ್ಣದೆ ಹೋಗದಿರಾ. . ." ಎನ್ನುತ್ತಾರೆ ಬಸವಣ್ಣನವರು ಅಂದರೆ ನಾವು ಸಂಪಾದಿಸಿದ ಹಣ, ಅಧಿಕಾರ, ಸಂಪತ್ತನ್ನು ನ್ಯಾಯವಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಳ್ಳಬೇಕು. ಕಷ್ಟದಲ್ಲಿರುವವರಿಗೂ ನೆರವಾಗಬೇಕು. ಸತ್ತ ನಂತರ ಸಂಪತ್ತು ಪರರ ಪಾಲಾಗುವ ಬದಲು ಇದ್ದಾಗಲೇ ಹಂಚಿ ತಿನ್ನಬೇಕು ಎನ್ನುತ್ತಾರೆ.

ಅದನ್ನೇ ಅಕ್ಕಮಹಾದೇವಿಯವರು "ಆಹಾರವ ಕಿರಿದು ಮಾಡಿರಯ್ಯಾ, ಆಹಾರವ ಕಿರಿದು ಮಾಡಿರಯ್ಯ". . . ಎನ್ನುತ್ತಾರೆ. ಅಂದರೆ ಪ್ರತಿಯೊಂದು ಅಗುಳಿಗೂ ಕೂಡ ಜೀವ ನೀಡುವ ಶಕ್ತಿಯಿರುತ್ತದೆ. ಹಾಗಾಗಿ ಅಗತ್ಯಕ್ಕಿಂತ ಹೆಚ್ಚು ಬಳಸಬಾರದು, ಬಳಸಿದರೆ ಈ ಮಣ್ಣಿಗೆ, ಅನ್ನ ನೀಡುವ ರೈತರಿಗೆ ಮೋಸ ಮಾಡಿದಂತೆ. ಸಂಪತ್ತಿನ ಸಮಾನ ಹಂಚಿಕೆಯಿಲ್ಲದೆ, ಹಸಿವಿನ ಭೀಕರತೆ ತಾಂಡವವಾಡುತ್ತಿದೆ. ಹಾಗಾಗಿ ವಚನಕಾರರು ಆಹಾರವನ್ನು ಪ್ರಸಾದವೆಂದು ಸ್ವೀಕರಿಸಿದರು. ಹಸಿವು ನೀಗಿದರೆ, ಕಾಯಕದ ತಾರತಮ್ಯ ಮರೆಯಾದರೆ ಮಾನವಸಂಕುಲ ಶಾಂತಿ, ಸಾಮರಸ್ಯದ ಬದುಕನ್ನು ಕಟ್ಟಿಕೊಳ್ಳಬಹುದೆಂಬ ಮಹದಾಸೆಯನ್ನು ಹೊತ್ತವರು ವಚನಕಾರರು.

ಮುಂದಾದರೂ ಇಂತಹ ಸಮಾಜಸುಧಾರಕರು ತೋರಿಸಿದ ನೀತಿಮಾರ್ಗದಲ್ಲಿ ನಡೆದರೆ ನಾಡು ಸುಭಿಕ್ಷವಾಗಬಹುದು. ಸ್ವಾರ್ಥಪರ ಚಿಂತನೆಗಳನ್ನು ನಮ್ಮೊಳಗಿನ ಅಹಮ್ಮನ್ನು ತೊರೆದು, ಸಮಾಜದಲ್ಲಿ ವಿಶೇಷವಾಗಿ ಗುರುತಿಸಿಕೊಂಡ ಯಾವುದೇ ವ್ಯಕ್ತಿ ಮತ್ತೊಬ್ಬರಿಗೆ ಮಾದರಿಯಾಗುವಂತೆ ಬದುಕಬೇಕು. ಯಾಕೆಂದರೆ ಎಲ್ಲವನ್ನು ಅರಿತವನೂ ಎಂದೂ ಬೀಗುವುದಿಲ್ಲ, ಬಾಗುತ್ತಾನೆ, ನಾಗರಿಕರು ಎಂದೂ, ಅತಿಯಾಗಿ ಮಾತನಾಡಬಾರದು, ಬದಲಿಗೆ ಅವರ ಕೆಲಸಗಳೇ ಮಾತನಾಡಬೇಕು. ಇಲ್ಲದಿದ್ದರೆ

ಸಮಾಜದಲ್ಲಿ ಪ್ರತಿದಿನ ನಡೆಯುತ್ತಿರುವ ವಿದ್ಯಾಮಾನಗಳು ಯುವಪೀಳಿಗೆಯನ್ನು ದಾರಿ ತಪ್ಪಿಸಬಹುದು.

ಉತ್ತಮ ಚಿಂತನೆಗಳಿಂದ ಮಾತ್ರ ನಾವು ಉತ್ತಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಸಾಧ್ಯ, ನಾವು ಉತ್ತಮರಾದಲ್ಲಿ ಜಾತಿ, ಧರ್ಮದ ಹೆಸರಿನಲ್ಲಿ ನಡೆಯುವ ಅನ್ಯಾಯ, ಅಕ್ರಮ, ಭ್ರಷ್ಟಾಚಾರ, ಹತ್ಯಾಚಾರಗಳಂತಹ ಹೀನ ಕೃತ್ಯಗಳಿಗೆ ಆಸ್ಪದವಿರುವುದಿಲ್ಲ. ವ್ಯಕ್ತಿಯ ನೆಲೆಯಿಂದಲೇ ಸಭ್ಯ ಸಮಾಜ, ಸುಂದರ, ಬಲಿಷ್ಠ, ಭವ್ಯ, ಸ್ವಸ್ಥ ರಾಷ್ಟ್ರೀಯತೆಯ ನಿರ್ಮಾಣ ಮಾಡಲು ಸಾಧ್ಯ. ನಾವೇ ರೂಪಿಸಿದ ನಮ್ಮಿಂದಲೇ ಚಲಾವಣೆಗೆ ಬಂದ ಕಾನೂನಾಗಲೀ ನಾಣ್ಯವಾಗಲೀ ಅಧಿಕಾರವಾಗಲೀ ಸುಭದ್ರ ರಾಷ್ಟ್ರ ಕಟ್ಟಲು ಮಾನದಂಡವಾಗುವುದಿಲ್ಲ. ನಮ್ಮೆಲ್ಲರ ಅಂತರಂಗ ಬಹಿರಂಗ ನಿರ್ಮಲವಾದಲ್ಲಿ ಮಾತ್ರ ಒಂದು ಮಾದರಿ ರಾಷ್ಟ್ರ ನಿರ್ಮಾಣ ಮಾಡಲು ಸಾಧ್ಯ. ನಮ್ಮ ಎಲ್ಲ ಕನಸುಗಳು, ಆಸೆಗಳು ಸಾಮಾಜಿಕ ಹಾಗೂ ಕಾನೂನಿನ ಚೌಕಟ್ಟಿನೊಳಗಿರಬೇಕು. ಹಾಗಿದ್ದಲ್ಲಿ ಮಾತ್ರ ಶಾಂತಿ, ಸಾಮರಸ್ಯದ ಒಗ್ಗೂಡುವಿಕೆಯಿಂದ ರಾಷ್ಟ್ರೀಯ ಭಾವೈಕ್ಯತೆಯನ್ನು ಸಾಧಿಸಬಹುದು.

ರಸ್ತೆಯ ಇಕ್ಕೆಲಗಳಲ್ಲಿ ಮರಗಳನ್ನು ತನ್ನ ಕರುಳ ಕುಡಿಗಳಂತೆ ಬೆಳೆಸಿ ನೆರಳು ನೀಡುತ್ತಿರುವ ಸಾಲುಮರದ ತಿಮ್ಮಕ್ಕ ಸಾವಿರ ಸಾಧಕರ ಸಾಲಿನಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುವಷ್ಟು ನಾಗರಿಕಳು. ಅಂಬಿಗರ ಚೌಡಯ್ಯ ತನ್ನ ವಚನದಲ್ಲಿ "ಗಾಳಿ ಬೀಸಿದಾಗ ತೂರಿಕೊಳ್ಳಿರಯ್ಯಾ, ಗಾಳಿ ನಿನ್ನ ಅಧೀನವಲ್ಲ ಕಂಡಯ್ಯ...?" ಎನ್ನುತ್ತಾರೆ. ಅಂದರೆ, ವಚನಕಾರರು ಹಳ್ಳಿಗಾಡಿನ ರೈತರ ಸಮಸ್ಯೆ, ರೈತರ ಅಗತ್ಯ ಹಾಗೂ ಕೃಷಿ ಪದ್ಧತಿಯ ವಿವರಗಳನ್ನು ಅರಿತವರು. ಕಾಯಕವೇ ಕೈಲಾಸವೆಂಬಂತೆ ಶ್ರಮಸಂಸ್ಕೃತಿಯನ್ನ ಬಿಂಬಿಸುವ ಮೂಲಕ ವ್ಯವಸಾಯದ ಹಲವಾರು ಆಯಾಮಗಳನ್ನು ತಿಳಿಸಿದವರು ವಚನಕಾರರು. ಒಂದು ಹೊತ್ತಿನ ತುತ್ತಿಗೆ ಜಗತ್ತಿನಲ್ಲಿ ಕೋಟ್ಯಂತರ ಜನ ಪರದಾಡುತ್ತಿರುವುದು ನಾಗರಿಕ ಸಮಾಜಕ್ಕೆ ಅಸಹ್ಯ ಹುಟ್ಟಿಸುವಂಥದ್ದು. ಸಮಾಜದಲ್ಲಿ ಯಾವುದೇ ದುರ್ಭರ ಸ್ಥಿತಿ ಅಥವಾ ಅವಘಡ ಸಂಭವಿಸಿದರೂ ಎಲ್ಲಾ ಮೂಲಗಳಿಂದಲೂ ನಿರಪರಾಧಿಗಳಾಗಿ ಹಸಿವಿನಿಂದ ಬಳಲುವವರು, ಬಡತನದ ರೇಖೆಯ ಕೆಳಗಿರುವ ಕೂಲಿ ಕಾರ್ಮಿಕರು, ರೈತಾಪಿ ವರ್ಗದವರು, ಮಧ್ಯಮ ವರ್ಗದವರು, ಪ್ರಾಮಾಣಿಕರು, ಪರಿಶ್ರಮಿಗಳು. ಎಲ್ಲಾ ಕಾಲದಲ್ಲಿಯೂ ಶೇಕಡಾವಾರು ವ್ಯತ್ಯಾಸವಿದ್ದರೂ ಒಂದೆಡೆ ಸಂಪತ್ತನ್ನು ಅರಗಿಸಿಕೊಳ್ಳಲಾಗದಿದ್ದರೂ ಮತ್ತಷ್ಟು ಮಗದಷ್ಟು ಸಂಪಾದನೆಯನ್ನು ಕ್ರೋಡೀಕರಿಸುವಲ್ಲಿ ನಗುವುದನ್ನೇ ಮರೆತು ಬದುಕುತ್ತಿರುವವರು, ತಮ್ಮಲ್ಲಿರುವ ಅಪಾರ ಸಂಪತ್ತನ್ನು ಜನಸಾಮಾನ್ಯರ ತುತ್ತು ಅನ್ನಕ್ಕೆ ಬಳಸುವಷ್ಟು ದಯಾಳುಗಳಾಗಿ ಉಳಿದಿಲ್ಲ.

(ಮುಂದುವರಿಯುವುದು)

ಧಾರ್ಮಿಕ ಕ್ಷೇತ್ರಗಳ ದರ್ಶನಮಾಲಿಕೆ

# ರಾಮದುರ್ಗದ ಗುಹಾಂತರ ದೇವಾಲಯ

ಡಾ. ಎಸ್.ಜಿ. ರಾಮದಾಸ ರೆಡ್ಡಿ

ಸ್ಮಾರಕ ಸಂರಕ್ಷಣೆ ಹಾಗೂ ಪ್ರವಾಸೋದ್ಯಮ ದಿನಗಳನ್ನು ಆಚರಿಸುತ್ತಿರುವ ಹಿನ್ನೆಲೆಯಲ್ಲಿ ಎಲ್ಲ ದೇಶಗಳೂ ತಮ್ಮ ಅಮೂಲ್ಯ ಪಾರಂಪರಿಕ ಪ್ರವಾಸಿ ತಾಣಗಳನ್ನು ಪ್ರವಾಸಿಗರಿಗೆ ಆಕರ್ಷಿಸುವಂತೆ ಮಾಡಲು, ವಿವಿಧ ರೀತಿಯ ಕಾರ್ಯತಂತ್ರಗಳಲ್ಲಿ ತೊಡಗಿವೆ. ಪಾರಂಪರಿಕ ಕಟ್ಟಡಗಳು, ವಾಸ್ತುಶಿಲ್ಪ, ಐತಿಹಾಸಿಕತೆಯ ಬಗ್ಗೆ ಭಾವನಾತ್ಮಕವಾದ ಹಿರಿಮೆಯನ್ನು ಬಿಂಬಿಸುವಲ್ಲಿ ನಿರತವಾಗಿವೆ. 'ಐತಿಹಾಸಿಕ ಪರಂಪರೆ ಉಳಿಸಿ' ಎಂಬ ಘೋಷಣೆ ಇಂದು ಭಾರತದಲ್ಲಿ ವ್ಯಾಪಕವಾಗಿ ಕೇಳಿಬರುತ್ತಿದೆ. ಈ ನೆಲೆಯಲ್ಲಿ ವಿನಾಶದ ಅಂಚಿಗೆ ಸರಿಯುತ್ತಿರುವ ಅನೇಕ ಶಿಲ್ಪ, ದೇಗುಲ, ಬಸದಿ ಮುಂತಾದ ಚಾರಿತ್ರಿಕ ಸ್ಮಾರಕಗಳನ್ನು ಉಳಿಸಿಕೊಳ್ಳುವ ಹೊಣೆ ಇಂದಿನ ತಲೆಮಾರಿನ ಮೇಲಿದೆ, ಹೀಗೆ ನಾಶ ಹೊಂದುತ್ತಿರುವ ಅನೇಕ ಸ್ಮಾರಕಗಳಲ್ಲಿ ರಾಮದುರ್ಗದ ಗುಹಾಂತರ ದೇವಾಲಯವೂ ಒಂದು.

ರಾಮದುರ್ಗದ ಗುಹಾಂತರ ದೇವಾಲಯವು ಚಿತ್ರದುರ್ಗ ಜಿಲ್ಲೆಯಲ್ಲಿರುವ ಚಳ್ಳಕೆರೆ ವಾಯುವ್ಯಕ್ಕೆ ಸುಮಾರು 25 ಕಿ.ಮೀ ದೂರದಲ್ಲಿರುವ ನಾಯಕನಹಟ್ಟಿ (ನಾಯಕನಹಟ್ಟಿ ಗ್ರಾಮವು ಪವಾಡ ಮಾಡಿ, ಜನರಿಗೆ  ಸಮಾಜ ಸೇವೆ ಸಲ್ಲಿಸಿ, ಸ್ಥಳೀಯರ ಮನಸ್ಸಿನಲ್ಲಿ ಜೀವಂತವಾಗಿ ಉಳಿದ ಪವಾಡಪುರುಷ ತಿಪ್ಪೇಸ್ವಾಮಿ ಜೀವಸಮಾಧಿಯಾಗಿರುವ ಸ್ಥಳ) ತಿಪ್ಪೇರುದ್ರಸ್ವಾಮಿ ದೇವಾಲಯ ಧಾರ್ಮಿಕವಾಗಿ ಪ್ರಸಿದ್ಧಿ ಪಡೆದ ದೇವಾಲಯವಾಗಿದೆ. ಇದು ಗ್ರಾಮದಿಂದ 6 ಕಿ.ಮೀ. ದೂರದಲ್ಲಿದೆ.

ನಾಯಕನಹಟ್ಟಿಗೆ ಹೋಗುವ ರಸ್ತೆಯಿಂದ ಬೋಸೆದೇವರಹಟ್ಟಿ ರಸ್ತೆಗೆ ತಿರುಗಿ ಕಚ್ಚಾ ರಸ್ತೆಯ ಮುಖಾಂತರ 2 ಕಿ.ಮೀ. ಸಾಗಿದರೆ ಎದುರಿಗೆ ಸುಮಾರು 500 ಅಡಿ ಎತ್ತರದ ಗುಡ್ಡ ಕಾಣಿಸುತ್ತದೆ. ಈ ಗುಡ್ಡವನ್ನು ಹೊಸಗುಡ್ಡವೆಂದು, ರಾಮದುರ್ಗದ ಗುಡ್ಡವೆಂದು, ರಾಮಲಿಂಗೇಶ್ವರ ಗುಹಾಂತರ ದೇವಾಲಯವೆಂದು ಸ್ಥಳೀಯರು ಕರೆಯುತ್ತಾರೆ.

ಪುರಾತತ್ವ ಮತ್ತು ಐತಿಹಾಸಿಕ ದೃಷ್ಟಿಯಿಂದ ಪ್ರಸಿದ್ಧಿ ಪಡೆದ ಏಳು ಸುತ್ತಿನ ಕೋಟೆ ಇರುವ ಚಿತ್ರದುರ್ಗ ಜಿಲ್ಲೆ ಪ್ರಮುಖ ಸ್ಥಳವಾಗಿದೆ. ಜೊತೆಗೆ ಪುರಾತತ್ವ ವಿಭಾಗದ ವತಿಯಿಂದ ಕೋಟೆಯ ಒಳಭಾಗದಲ್ಲಿ ಚಂದ್ರವಳ್ಳಿ, ಬ್ರಹ್ಮಗಿರಿ ನೆಲೆಗಳನ್ನು ಸಂಶೋಧನೆ

ಮಾಡಿ ರಾಜ್ಯದ ಹಾಗೂ ಭಾರತದ ಪುರಾತತ್ವ ವಿಭಾಗದ ಪುಟಗಳಲ್ಲಿ ಈ ಜಿಲ್ಲೆ ಪ್ರಮುಖ ಸ್ಥಳವಾಗಿ ಖ್ಯಾತಿ ಪಡೆದಿದೆ. ಅಶೋಕನ ಶಾಸನಗಳು ಜಿಲ್ಲೆಯನ್ನು ಪ್ರಸಿದ್ಧಿಗೆ ತಂದಿವೆ. ಪ್ರಾಗೈತಿಹಾಸಿಕ ಕಾಲದಿಂದ ಹಿಡಿದು ಪಾಳೇಗಾರರ ಕಾಲದವರೆಗೆ ಹಲವಾರು ಆಧಾರಗಳು ಲಭ್ಯವಾಗಿವೆ. ಹಳೆ ಶಿಲಾಯುಗ, ಸೂಕ್ಷ್ಮ ಶಿಲಾಯುಗ, ನವ ಶಿಲಾಯುಗ, ಬೃಹತ್ ಶಿಲಾಯುಗ ಸಂಸ್ಕೃತಿಗಳು ಹಾಗೂ ಮೌರ್ಯರು, ಶಾತವಾಹನರು, ಕದಂಬರು, ಹೊಯ್ಸಳರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ನೊಳಂಬರು, ಪಾಳೆಗಾರರ ಮನೆತನಗಳು, ಮತ್ತಿತರ ಆಳರಸರ ಮನೆತನಗಳ ಇತಿಹಾಸವನ್ನು ಇಲ್ಲಿನ ಅವಶೇಷಗಳು, ಶಾಸನಗಳು, ನಾಣ್ಯಗಳು, ದೇವಾಲಯಗಳು ಇತರ ಅಂಶಗಳಿಂದ ತಿಳಿಯಬಹುದಾಗಿದೆ.

ಭಾರತೀಯ ಕಲೆ ಮತ್ತು ವಾಸ್ತುಶಿಲ್ಪಗಳಲ್ಲಿ ಗುಹಾಂತರ ದೇವಾಲಯಗಳ ನಿರ್ಮಾಣದ ವಾಸ್ತುಶಿಲ್ಪ ಮುಖ್ಯ ಘಟ್ಟವಾಗಿದೆ. ಮೌರ್ಯರಿಗಿಂತ ಹಿಂದಿನಿಂದಲೂ ಕಲೆ ಮತ್ತು ವಾಸ್ತುಶಿಲ್ಪ ಕಟ್ಟಿಗೆಯಿಂದ ನಿರ್ಮಾಣವಾಗುತ್ತಿತ್ತು. ಕಟ್ಟಿಗೆ ಬಹು ಬೇಗ ನಾಶವಾಗುವ ಗುಣ ಹೊಂದಿದ್ದು ಇಂದು ಯಾವುದೇ ಆಧಾರಗಳು ದೊರಕುತ್ತಿಲ್ಲ. ಆರಂಭದ ಗುಹಾಂತರ ದೇವಾಲಯಗಳು ಕಟ್ಟಿಗೆಯಲ್ಲಿ ಮಾಡುವ ಶೈಲಿಯನ್ನು ಬಳಸಿಕೊಂಡು ನಿರ್ಮಾಣವಾದುವು. ಅಶೋಕನ ಕಾಲದ ಗುಹಾಂತರ ದೇವಾಲಯಗಳು ಬಿಹಾರ ರಾಜ್ಯದ ಸುಧಾಮ ಗುಹೆ, ಲೋಮಸ್ ರಿಷಿ ಗುಹೆ ಇವು ಬಾರಾಬರ್ ಬೆಟ್ಟದಲ್ಲಿವೆ. ಇವುಗಳ ಕಾಲವನ್ನು ಕ್ರಿ.ಪೂ. ಮೂರನೇ ಶತಮಾನ ಎಂದು ಊಹಿಸಲಾಗಿದೆ. ಆನಂತರ ಉತ್ತಮ ಮಟ್ಟದ ಗುಹಾಂತರ ದೇವಾಲಯಗಳು ಭಾರತದಲ್ಲಿ ಬೌದ್ಧರ ಕಾಲದಲ್ಲಿ ಹೀನಯಾನ ಪಂಥದ ಕಾಲದಲ್ಲಿ ನಿರ್ಮಾಣವಾದವು. ಅಂದರೆ ಕ್ರಿ.ಪೂ. ಎರಡನೇ ಶತಮಾನದಿಂದ ಕ್ರಿ.ಶ. ಎರಡನೇ ಶತಮಾನದವರೆಗೆ, ಅನಂತರ ಕ್ರಿ.ಶ. 8 ನೇ ಶತಮಾನದವರೆಗೂ ದಕ್ಷಿಣ ಭಾರತದಲ್ಲಿ ಇಂಥ ನಿರ್ಮಿತಿಗಳು ಮುಂದುವರೆದುವು.

ಬಹುಪಾಲು ಗುಹಾಂತರ ದೇವಾಲಯಗಳು ಮಹಾರಾಷ್ಟ್ರದ ನಾಸಿಕ್‌ನ ಸುತ್ತಮುತ್ತ 200 ಕಿ.ಮೀ. ಒಳಗೆ ಹರಡಿಕೊಂಡಿವೆ. ಅಂದರೆ ನಾಸಿಕ್, ಕಾರ್ಲ್ಲ, ಭಾಜಾ, ಕೊಂಡಾನೆ ಪಾಂಡುರೆನಾ, ಅಜಂತಾ, ಎಲ್ಲೋರಾ, ಎಲಿಫೆಂಟಾ ಇನ್ನಿತರ ಗುಹೆಗಳಲ್ಲಿ ಇವುಗಳನ್ನು ಕಾಣಬಹುದು. ಕರ್ನಾಟಕದ ಉತ್ತಮ ಉದಾಹರಣೆ ಎಂದರೆ ಗುಹಾಂತರ ದೇವಾಲಯಗಳಲ್ಲಿ ಪ್ರಸ್ತುತ ಬಾದಾಮಿ ಚಾಲುಕ್ಯರ ಬಾದಾಮಿಯ ಗುಹಾಂತರ ದೇವಾಲಯಗಳು ಪ್ರಮುಖವಾಗಿವೆ. ಇವರ ನಂತರ ಗುಹಾಂತರ ದೇವಾಲಯಗಳನ್ನು ಯಾವ ಸಾಮ್ರಾಜ್ಯಗಳು ಮುಂದುವರಿಸಲಿಲ್ಲ, ಹೊಯ್ಸಳರ ಕಲೆ ಮತ್ತು ವಾಸ್ತುಶಿಲ್ಪದ ನಂತರ ಗುಹಾಂತರ ದೇವಾಲಯಗಳು ಕರ್ನಾಟಕದಲ್ಲಿ ಅಪರೂಪವಾಗಿ ಒಂದು ಅಥವಾ ಎರಡು ಉತ್ತಮ ಉದಾಹರಣೆಗಳು ದೊರೆಯುತ್ತವೆ.

ಪ್ರಾಚೀನ ಕಾಲದಿಂದಲೂ ರಾಜರುಗಳು ಸಾಮ್ರಾಜ್ಯದ ರಕ್ಷಣೆಗೋಸ್ಕರ ಭದ್ರವಾದ ನೀರಿನ ಕೋಟೆ, ಅರಣ್ಯ ಕೋಟೆ, ಭೂಮಿ ಕೋಟೆ, ಬೆಟ್ಟದ ಕೋಟೆ ಇವುಗಳನ್ನು

ನಿರ್ಮಿಸುತ್ತಿದ್ದರು. ಇಂತಹ ಕೋಟೆಗಳಲ್ಲಿ, ರಾಮದುರ್ಗದ ಬೆಟ್ಟದ ಮೇಲಿನ ಎರಡು ಸುತ್ತಿನ ಕೋಟೆ ಸುಮಾರು 500 ಅಡಿ ಎತ್ತರದಲ್ಲಿದೆ. ಮೊದಲನೇ ಸುತ್ತಿನಲ್ಲಿ 11 ಬತೇರಿಗಳು ಇವೆ; ನಾಲ್ಕು ವೃತ್ತಾಕಾರದ, ಏಳು ಚಚ್ಚೌಕಾರದ ಬತೇರಿಗಳಿವೆ, ಎರಡನೇ ಸುತ್ತಿನ ಕೋಟೆಯಲ್ಲಿ ಐದು ಬತೇರಿಗಳಿದ್ದು, ಅರಮನೆಯಂತಿರುವ ದೊಡ್ಡ ಮನೆಯ ತಳಪಾಯವಿದೆ.

**ಪುಷ್ಕರಣಿಗಳು**

ರಾಜರು ತಮ್ಮ ಸಾಮ್ರಾಜ್ಯದ ಹಿತಕ್ಕಾಗಿ ಕೆರೆ, ಕಟ್ಟೆ, ಕೊಳ, ಕುಂಟೆ, ದೊಣೆ, ಒಕ್ಕರಣೆ (ಪುಷ್ಕರಿಣಿ) ಗಳನ್ನು ನೀರಾವರಿಗಾಗಿ ಮತ್ತು ಕುಡಿಯುವ ನೀರಿಗಾಗಿ ನಿರ್ಮಿಸುತ್ತಿದ್ದರು ಎಂಬುದರ ಕುರಿತು ಹಲವಾರು ಶಾಸನಗಳು, ಸಾಹಿತ್ಯಕೃತಿಗಳು ಮಾಹಿತಿ ನೀಡುತ್ತವೆ.

ರಾಮದುರ್ಗದ ಗುಡ್ಡ ಇಂದು ನಿರ್ಜನವಾದ ಪ್ರದೇಶದಲ್ಲಿ ಇದ್ದು ಆಕರ್ಷಕವಾದ ಪುಷ್ಕರಿಣಿಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡು ಕಲಾರಸಿಕರನ್ನು ಕೈಬೀಸಿ ಕರೆಯುತ್ತಿದೆ. ಎರಡು ಸುತ್ತಿನ ಅಂಡಾಕಾರದ ಕೋಟೆ, ಬತೇರಿಗಳು, ಗುಹಾಂತರ ದೇವಾಲಯ ಇನ್ನಿತರ ಅಂಶಗಳು ವಿಶೇಷವಾಗಿ ಕಂಡುಬರುತ್ತವೆ. ಗುಡ್ಡವನ್ನು ಹತ್ತಲು ಹೊರಟರೆ ಗುಡ್ಡದ ಪಕ್ಕದ ಇಳಿಜಾರು ಪ್ರದೇಶದಲ್ಲಿ ಬಲಭಾಗದಲ್ಲಿ ಎರಡು ಪುಷ್ಕರಿಣಿಗಳನ್ನು, ವಿವಿಧ ಅಳತೆಯ ಕಲ್ಲು, ವಿವಿಧ ನಮೂನೆಯ ಶಿಲ್ಪಗಳನ್ನು ಬಳಸಿ, ನಿರ್ಮಿಸಿರುವುದು ಕಂಡುಬರುತ್ತದೆ.

ಒಂದನೇ ಪುಷ್ಕರಿಣಿಯು ಗುಡ್ಡಕ್ಕೆ ಪೂರ್ವಪಶ್ಚಿಮವಾಗಿದ್ದು ಬಿಳಿ ಗ್ರಾನೈಟ್ ಕಲ್ಲುಗಳನ್ನು ನಯಗೊಳಿಸಿಕೊಂಡು 2 ಅಡಿ, ಒಂದು ಅಡಿ, ಒಂದೂವರೆ ಅಡಿ ಚಚ್ಚೌಕಾರದ, 6 ಇಂಚು ದಪ್ಪದ ಕಲ್ಲುಗಳನ್ನು ಬಳಸಿಕೊಂಡು, 14 ಅಡಿ ಚಚ್ಚೌಕಾರದ 7 ಅಡಿ ಆಳದ ಪುಷ್ಕರಿಣಿಯನ್ನು ನಿರ್ಮಿಸಲಾಗಿದೆ. ಈ ಪುಷ್ಕರಿಣಿಗೆ ಗುಡ್ಡದ ಬುಡದಿಂದ 12 ಅಡಿ ಉದ್ದ, ನಾಲ್ಕೂವರೆ ಅಡಿ ಅಗಲದ ಇಳಿಜಾರಾದ ಮೆಟ್ಟಿಲುಗಳನ್ನು ನಿರ್ಮಿಸಿ ಇಳಿಯಲು ಅವಕಾಶವಿದೆ.

ಎರಡನೇ ಪುಷ್ಕರಿಣಿಯೂ ವಿಶಿಷ್ಟವಾಗಿದ್ದು ಇದು ಪೂರ್ವ ಪಶ್ಚಿಮವಾಗಿ 16 ಅಡಿ ಉದ್ದ, 7 ಅಡಿ ಆಳದಲ್ಲಿ ಚಚ್ಚೌಕಾರದಲ್ಲಿ ನಿರ್ಮಿತವಾಗಿದೆ. ಈ ಪುಷ್ಕರಿಣಿಯನ್ನು ನಯಗೊಳಿಸಿ ಇಂದಿನ ಸಿಮೆಂಟ್ ಇಟ್ಟಿಗೆಯ ಹಾಗೆ ಎರಡು ಅಡಿ, ಒಂದು ಅಡಿ, ಅರ್ಧ ಅಡಿ, ಕಾಲು ಅಡಿ, ಚಚ್ಚೌಕಾಕಾರದಲ್ಲಿ ಕಲ್ಲುಗಳನ್ನು ಸಿದ್ಧಪಡಿಸಿಕೊಂಡು ನಿರ್ಮಿಸಿದ್ದಾರೆ. ಈ ಪುಷ್ಕರಿಣಿಗೆ ಗುಡ್ಡದ ಬುಡದ ಕಡೆಯಿಂದ 14 ಅಡಿ ಉದ್ದ, ಐದೂವರೆ ಅಡಿ ಅಗಲದ ಇಳಿಜಾರಾದ ಮೆಟ್ಟಿಲುಗಳನ್ನು ಬಹಳ ಅಕರ್ಷಕವಾಗಿ ನಿರ್ಮಿಸಲಾಗಿದೆ.

ಈ ಪುಷ್ಕರಿಣಿಯಲ್ಲಿ ಐದು ಮೂರ್ತಿಶಿಲ್ಪಗಳಿವೆ, ಒಂದಕ್ಕಿಂತ ಒಂದು ವಿಭಿನ್ನವಾಗಿವೆ. ಒಂದನೇ ಶಿಲ್ಪವು ವೀರಭದ್ರನ ಮೂರ್ತಿಶಿಲ್ಪವಾಗಿದ್ದು ಪಶ್ಚಿಮಕ್ಕೆ ಮುಖ ಮಾಡಿ ವಿವಿಧ ಆಯುಧಗಳನ್ನು ಹಿಡಿದು ನಿಂತಿದೆ. ಪಕ್ಕದಲ್ಲಿ ಟಗರಿನ ಶಿಲ್ಪವಿದೆ. ಇದು ಬಹಳ ಆಲಂಕಾರಿಕವಾಗಿದ್ದು ಸುತ್ತಲೂ ಹೂಬಳ್ಳಿಗಳಿಂದ ಆವೃತಗೊಂಡಿದೆ. ಎರಡನೇ ಶಿಲ್ಪವು ಭೈರವನ ಶಿಲ್ಪವಾಗಿದ್ದು ಪಶ್ಚಿಮಕ್ಕೆ ಮುಖ ಮಾಡಿಕೊಂಡು ಕೈಗಳಲ್ಲಿ ಆಯುಧಗಳನ್ನು ಹಿಡಿದು ನಿಂತಿದೆ. ಪಕ್ಕದಲ್ಲಿ ಇನ್ನಿತರ ಶಿಲ್ಪಗಳು ಇದ್ದು 'ಎಸ್' ಆಕಾರದ ಅಲಂಕಾರದಿಂದ ಆವೃತವಾಗಿದೆ. ಮೂರನೇ ಶಿಲ್ಪವು ಷಣ್ಮುಖನ ಮೂರ್ತಿಶಿಲ್ಪವಾಗಿದ್ದು ವಿವಿಧ ಆಯುಧಗಳನ್ನು ಹಿಡಿದು ನವಿಲಿನ ಮೇಲೆ ಕುಳಿತಿರುವ ದೃಶ್ಯ ಆಕರ್ಷಕವಾಗಿದೆ. ಈ ಶಿಲ್ಪವು ದಕ್ಷಿಣಕ್ಕೆ ಮುಖ ಮಾಡಿಕೊಂಡಿರುವ ಅಲಂಕಾರದ ಶಿಲ್ಪವಾಗಿದೆ. ನಾಲ್ಕನೇ ಶಿಲ್ಪವು ಉತ್ತರಕ್ಕೆ ಮುಖ ಮಾಡಿ ವಿವಿಧ ಆಯುಧಗಳನ್ನು ಹಿಡಿದು ಕುಳಿತಿರುವ ಗಣೇಶನ ಮೂರ್ತಿಶಿಲ್ಪ ಬಹಳ ಸರಳವಾಗಿ, ಆಕರ್ಷಕವಾಗಿ ಇದೆ. ಈ ನಾಲ್ಕು ಶಿಲ್ಪಗಳು ಒಂದು ಅಡಿ ಉದ್ದ, ಒಂದು ಅಡಿ ಅಗಲದ ಮೂರ್ತಿಶಿಲ್ಪಗಳಾಗಿವೆ.

5ನೇ ಶಿಲ್ಪವು ಪೂರ್ವಕ್ಕೆ ಮುಖ ಮಾಡಿ ಇಡೀ ಪುಷ್ಕರಿಣಿಗೆ 7 ಹೆಡೆಯ ಹಾವು, ಕೆಳಗಡೆ ಲಿಂಗ ನವೂರಾದ ಬೋದಿಗೆ ಇರುವ ಶಿಲ್ಪವಿದೆ. ಲಿಂಗದ ಮುಂದೆಯೇ ಆಕರ್ಷಕವಾದ ನಂದಿ ವಿಗ್ರಹ ಅಲಂಕಾರಗೊಂಡು ಮಲಗಿದೆ. ಮಧ್ಯೆ ದೊಡ್ಡ ಗಂಟೆ ನೇತಾಡುತ್ತಿದೆ. ಈ ಶಿಲ್ಪವನ್ನು ನೋಡಿದಾಗ ಶೈವರ ಅಜಂತ ಎಂದು ಪ್ರಸಿದ್ಧವಾಗಿರುವ ಲೇಪಾಕ್ಷಿಯ ನಾಗಲಿಂಗದ ಶಿಲ್ಪದ ಮಾದರಿ ನೆನಪಿಗೆ ಬರುತ್ತದೆ. ಈ ಶಿಲ್ಪವು ಒಂದೂ ಕಾಲು ಅಡಿ ಅಗಲ, ಒಂದು ಅಡಿ ಉದ್ದದ ಮೂರ್ತಿಶಿಲ್ಪವಾಗಿದೆ. ಈ ಮೇಲಿನ 5 ಮೂರ್ತಿಶಿಲ್ಪಗಳನ್ನು ಬಿಳಿ ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿದ್ದಾರೆ. ಈ ಪುಷ್ಕರಿಣಿಗಳಿಗೆ ನೇರವಾಗಿ ಗುಡ್ಡದಿಂದ ನೀರು ಹರಿದುಬರುವಂತೆ ಅವಕಾಶ ಕಲ್ಪಿಸಲಾಗಿದೆ.

ಈ ಪುಷ್ಕರಿಣಿಗಳನ್ನು ನೋಡಿ ಗುಡ್ಡದ ಕಡೆ ಗಮನ ಹರಿಸಿದರೆ ಎರಡು ಸುತ್ತಿನ ಕೋಟೆ, ಗುಹಾಂತರದೇವಾಲಯ ಮತ್ತು ಬತೇರಿಗಳು ಕಂಡುಬರುತ್ತವೆ. ಮೊದಲನೇ ಸುತ್ತಿನ ಕೋಟೆ ಹೆಬ್ಬಾಗಿಲನ್ನು ದಾಟಿ ಒಳನಡೆದರೆ ಮನೆಗಳ ತಳಪಾಯಗಳಿವೆ. ಹಾಳಾಗಿರುವ ತಳಪಾಯಗಳಿಗೆ ಸ್ವಲ್ಪ ಮೇಲೆ ನಡೆದರೆ,ಎರಡನೇ ಸುತ್ತಿನ ಕೋಟೆ, ಬತೇರಿಗಳು, ಬಲಭಾಗದಲ್ಲಿ ಗುಹಾಂತರ ದೇವಾಲಯ ಕಂಡುಬರುತ್ತವೆ. ಎರಡನೇ ಸುತ್ತಿನ ಹೆಬ್ಬಾಗಿಲನ್ನು ಪ್ರವೇಶಿಸಿ ಒಳನಡೆದರೆ ವಿಶಾಲವಾದ ಮನೆಯ ತಳಪಾಯಗಳು ಕಂಡುಬರುತ್ತವೆ. ಬಲಭಾಗಕ್ಕೆ ಕಣ್ಣು ಹಾಯಿಸಿದರೆ ಗುಡ್ಡದ ಮೇಲಿರುವ ಐದು ಪುಷ್ಕರಣಿಗಳು ನಮ್ಮನ್ನು ಕೈಬೀಸಿ ಕರೆಯುತ್ತವೆ. ಈ ಐದು ಪುಷ್ಕರಣಿಗಳು ವಿಶೇಷವಾಗಿವೆ ಎಂದು ಹೇಳಬಹುದು. ಗ್ರಾನೈಟ್ ಗುಡ್ಡವನ್ನು ಕಡಿದು ಇವುಗಳನ್ನು ನಿರ್ಮಿಸಿದ್ದಾರೆ. ಮೂರು ಪುಷ್ಕರಿಣಿಗಳು ಗುಡ್ಡವನ್ನು ಕಡಿದು ನಿರ್ಮಿಸುವ ಹಂತದಲ್ಲಿದ್ದರೆ, ಎರಡು ಪುಷ್ಕರಿಣಿಗಳು ಪೂರ್ಣಗೊಂಡಿವೆ. ಈ ತರಹದ ಪುಷ್ಕರಿಣಿಗಳನ್ನು ಚಿತ್ರದುರ್ಗದ

ಏಳುಸುತ್ತಿನ ಕೋಟೆಯ ಬೆಟ್ಟದಲ್ಲಿಯೂ ಸಹ ಕಾಣಬಹುದಾಗಿದೆ. ಇಂದು ಈ ಪುಷ್ಕರಿಣಿಗಳನ್ನು ಸಂರಕ್ಷಿಸುವ ಅಗತ್ಯವಿದೆ.

**ಗುಹಾಂತರ ದೇವಾಲಯ**

ಮೊದಲನೇ ಸುತ್ತಿನ ಕೋಟೆಯ ಒಳಗೆ ಮೂಲ ಕೆತ್ತನೆಯನ್ನು ಮಿಶ್ರಣ ಮಾಡಿಕೊಂಡು ಅದ್ವಿತೀಯವಾದ ವಾಸ್ತುಶಿಲ್ಪದ ಗುಹಾಂತರ ದೇವಾಲಯವನ್ನು ನಿರ್ಮಿಸಿದ್ದಾರೆ. ಸ್ಥಳೀಯ ಏಕಶಿಲೆಯ ಗ್ರಾನೈಟ್ ಗುಡ್ಡವನ್ನು ಕಡಿದು ಗುಹಾಲಯವನ್ನು ಪಶ್ಚಿಮಾಭಿಮುಖವಾಗಿ ನಿರ್ಮಿಸಿದ್ದಾರೆ. ಆದರೆ ಹೆಚ್ಚು ಸಂಖ್ಯೆಯ ದೇವಾಲಯಗಳು ನಿರ್ಮಿತವಾಗಿರುವುದು ಪೂರ್ವಾಭಿಮುಖವಾಗಿವೆ. ಗುಹಾಲಯದ ಮುಂಭಾಗದ ಗೋಡೆಯನ್ನು ನಂತರದ ಕಾಲದಲ್ಲಿ ನಿರ್ಮಿಸಿದೆ. ಮುಂಭಾಗದಲ್ಲಿ ಕಬ್ಬಿಣದ ಜಾಲಂಧ್ರವನ್ನು ಕಟ್ಟಿಗೆಯ ಚೌಕವನ್ನು ಬಳಸಿ ಮುಚ್ಚಿದ್ದಾರೆ. ಮುಖ್ಯದ್ವಾರದಲ್ಲಿ ಬಾದಾಮಿ ಚಾಲುಕ್ಯ ಶೈಲಿಯ ಹೋಲಿಕೆ ಇದೆ. ಗುಹಾಲಯದ ಮುಂದೆ ಆಕರ್ಷಕವೂ, ದಷ್ಟಪುಷ್ಟವೂ ಆದ ನಂದಿಶಿಲ್ಪವಿದೆ.

ಗುಹಾಲಯದ ಒಳಭಾಗ 30 ಅಡಿ ಉದ್ದ, 20 ಅಡಿ ಅಗಲ, ಕಂಬಸಾಲಿನ ಮೇಲೆ ಮಂಟಪವಿದೆ. ಗರ್ಭಗೃಹ, ಸುಕನಾಸಿ, ನವರಂಗವನ್ನು ಏಕಶಿಲೆಯ ಗುಡ್ಡದಲ್ಲಿ ಕಂಡರಿಸಲಾಗಿದೆ.

ನವರಂಗ, ಮೂರು ದೇವಕೋಶಗಳು ಪಶ್ಚಿಮದ ಗೋಡೆಯಲ್ಲಿವೆ. ಮುಖ್ಯ ಭಾಗ ಸರಳವಾಗಿದೆ. ಅಜಂತ, ಎಲ್ಲೋರಾ, ಎಲಿಫೆಂಟಾದ ಹಾಗೆ ಯಾವುದೇ ಅಲಂಕಾರಗಳಿಲ್ಲ ; ಆದರೆ ಮಹಾಬಲಿಪುರಂನ ಹಾಗೆ ಹೋಲಿಕೆ ಇದೆ. ಕಂಬಗಳು 8 ಅಡಿ ಎತ್ತರ ಇದ್ದು, 8 ಅರೆಗಂಬಗಳು, 4 ಪೂರ್ಣ ಕಂಬಗಳು ಇವೆ. ಪ್ರತಿ ಕಂಬವೂ ತಳಭಾಗದಲ್ಲಿ ಎರಡೂವರೆ ಅಡಿ ಚಚ್ಚೌಕಾರದಲ್ಲಿವೆ. ಎಲ್ಲಾ ಕಂಬಗಳು ಮತ್ತು ಅರೆಗಂಬಗಳು ವಾಸ್ತುಶಿಲ್ಪದಲ್ಲಿ ಒಂದೇ ತರಹದ ಕೆತ್ತನೆಯನ್ನು ಹೊಂದಿವೆ. ಕಂಬಗಳ ನಾಲ್ಕು ಮೂಲೆಗಳಲ್ಲಿ ವಿಜಯನಗರ ಶೈಲಿಯ ನೇತಾಡುವ ಪುಷ್ಪ ಬೋದಿಕೆಗಳು ಕೆತ್ತಲ್ಪಟ್ಟಿವೆ, ಈ ಗುಹಾಲಯದ ಮೇಲ್ಚಾವಣಿಯಲ್ಲಿ ವರಾಹ, ನಾರಸಿಂಹ, ಬೇಡರ ಕಣ್ಣಪ್ಪ, ಮಹಿಷಮರ್ದಿನಿ, ಶಿವಪಾರ್ವತಿ, ನಂದಿ, ರಾಮ, ಸೀತೆ, ಲಕ್ಷ್ಮಣ, ದಶಾವತಾರ, ಸರಸ್ವತಿ, ವಿವಿಧ ನಮೂನೆಯ ಆಂಜನೇಯ ಶಿಲ್ಪಗಳು, ಭೈರವ, ಷಣ್ಮುಖ, ಗಣಪತಿ, ವೀರಭದ್ರ ಶಿಲ್ಪಗಳು, ರಥವನ್ನು ಕುದುರೆಗಳು ಎರಡು ಕಾಲುಗಳಿಂದ ಎಳೆಯುತ್ತಿರುವ ವಿಶೇಷ ಶಿಲ್ಪಗಳು, ಶಿವನು ವಿವಿಧ ಭಂಗಿಗಳಲ್ಲಿ ಕುಳಿತಿರುವ ದೃಶ್ಯದ ಶಿಲ್ಪ, ಹೂಬಳ್ಳಿಗಳ ಶಿಲ್ಪ, ಕೃಷ್ಣ ಕಾಳಿಂಗಮರ್ದನ ಮಾಡುವ ದೃಶ್ಯ, ನಾಗಕನ್ಯೆಯರ ಶಿಲ್ಪಗಳು, ಗಂಡಭೇರುಂಡ, ಸಿಂಹದ ಮುಖವಿರುವ ಶಿಲ್ಪ, ದ್ವಾರಪಾಲಕರ ಶಿಲ್ಪಗಳು, ಗಂಡಭೇರುಂಡ ಶಿಲ್ಪಗಳು, ಗರುಡ ಹಾವನ್ನು ಹಿಡಿದುಕೊಂಡಿರುವ ಶಿಲ್ಪ, ಇನ್ನಿತರ ಶಿಲ್ಪಗಳನ್ನು ಕಠಿಣವಾದ ಬಿಳಿ ಗ್ರಾನೈಟ್ ಕಲ್ಲಿನಲ್ಲಿ ಆಕರ್ಷಕವಾಗಿ ಕಂಡರಿಸಿದ್ದಾರೆ.

**ಚಾವಣಿಯ ಒಳಭಾಗ**

ಗುಹಾಲಯದಲ್ಲಿ ಭುವನೇಶ್ವರಿಯನ್ನು ಆರು ಅಂಕಣಗಳನ್ನಾಗಿ ವಿಭಾಗಿಸಿದ್ದಾರೆ, ಪ್ರತಿಯೊಂದು ಸೀಲಿಂಗ್ ಅಲಂಕಾರಗೊಂಡು ಅಷ್ಟದಿಕ್ಪಾಲಕರು, ತಾವರೆ ಹೂವು, ಗಂಡಭೇರುಂಡ, ಪಕ್ಷಿಗಳು, ಸಿಂಹದ ಮೇಲೆ ಶಿಲ್ಪಗಳಿದ್ದು ಸೀಲಿಂಗಿನ ಅಲಂಕಾರವನ್ನು ಅತ್ಯಂತ ಆಕರ್ಷಕವನ್ನಾಗಿ ಮಾಡಿವೆ. ವಾಸ್ತುಶಿಲ್ಪ ಹೊಯ್ಸಳರ ಶೈಲಿಯಲ್ಲಿದೆ. ಹೊಯ್ಸಳರ ಕಾಲದಲ್ಲಿ ಯಾವುದೇ ಗುಹಾಂತರ ದೇವಾಲಯಗಳು ನಿರ್ಮಾಣ ಆಗಲಿಲ್ಲ. ಇಲ್ಲಿ ಹೊಯ್ಸಳ ಕೆತ್ತನೆ ಸೀಲಿಂಗ್‌ನ ವಿನ್ಯಾಸದಲ್ಲಿ ಇರುವುದರ ಜೊತೆಗೆ ವಿಜಯನಗರ ವಾಸ್ತುಶೈಲಿಯೂ ಕಂಡುಬರುತ್ತದೆ

**ಸುಕನಾಸಿ**

ಗರ್ಭಗುಡಿಯ ಮುಂದಿನ ಸುಕನಾಸಿ 8.2 ಅಡಿ ಅಗಲ, 4.5 ಅಡಿ ಉದ್ದವಿದೆ. ಈ ಭಾಗ ತುಂಬಾ ಸರಳವಾಗಿದೆ.

**ಗರ್ಭಗುಡಿ**

ವಾಸ್ತುಶಿಲ್ಪದಲ್ಲಿ ಪ್ರಮುಖವಾದ ಅಂಶವೆಂದರೆ ಗರ್ಭಗುಡಿಯ ಸೀಲಿಂಗ್ ಭಾರತದ ಯಾವುದೇ ಗುಹಾಂತರ ದೇವಾಲಯದಂತೆ ಇಲ್ಲ. ಗರ್ಭಗುಡಿಯ ಪಶ್ಚಿಮ ಗೋಡೆ ಕೆತ್ತನೆ ಆಕರ್ಷಕವಾಗಿದ್ದು ಮೂರು ಮೆಟ್ಟಿಲು ಹತ್ತಿ ಹೋಗಬೇಕು, ಬಾಗಿಲು ಸರಳವಾಗಿದ್ದು, ಬಾಗಿಲ ತೋರಣ 5 ಅಡಿ ಎತ್ತರ, 2.5 ಅಡಿ ಅಗಲ ಇದೆ. ಯಾವುದೇ ವಾಸ್ತು ಶಿಲ್ಪದ ಅಲಂಕಾರವಿಲ್ಲ, ಬಾಗಿಲಿನ ಕೆಳಭಾಗದಲ್ಲಿ ಶಿವನ ಎರಡು ಚಿಕ್ಕ ಶಿಲ್ಪಗಳು, ದ್ವಾರ ಪಾಲಕರ ಶಿಲ್ಪಗಳು ಮತ್ತು ಉಪಶಮನ ಮಾಡುವ ಶಿಲ್ಪಗಳಿವೆ.

ಗರ್ಭಗುಡಿಯು ಗೋಡೆಯಲ್ಲಿ ಗೂಡಿನಂತೆ ಇದ್ದು 2.5 ಅಡಿ ಉದ್ದ, 2 ಅಡಿ ಅಗಲವಿದೆ. ಗುಡಿಯ ಎಡ ಮತ್ತು ಬಲಭಾಗದಲ್ಲಿ ದ್ವಾರಪಾಲಕರು ನಿಂತಿರುವ ಶಿಲ್ಪಗಳಿವೆ. ಎರಡನೇ ಪಂಕ್ತಿಯಲ್ಲಿ ಕೈಯಲ್ಲಿ ವೀಣೆ ನುಡಿಸುತ್ತಿರುವ ಸರಸ್ವತಿ ಶಿಲ್ಪ, ಮೇಲ್ಭಾಗದಲ್ಲಿ ಶಿವಪಾರ್ವತಿಯರ ಶಿಲ್ಪಗಳಿವೆ. ಗರ್ಭಗುಡಿಯ ತೋರಣಪಟ್ಟಿಯನ್ನು ಹೂ ಬಳ್ಳಿಗಳಿಂದ ಅಲಂಕರಿಸಲಾಗಿದೆ. ಈ ಶಿಲ್ಪಗಳ ಮಧ್ಯ ಏಳು ಹೆಡೆಯ ನಾಗ ಶಿಲ್ಪವಿದೆ. ಕೆಳಗಿನಿಂದ 4.5 ಇಂಚು ಉದ್ದ, 3 ಇಂಚು ಅಗಲದ ಲಿಂಗವಿದೆ. 7 ಹೆಡೆಯ ನಾಗಶಿಲ್ಪವು ಲಿಂಗದ ಕೆಳಗಿನಿಂದಲೂ ಸುರುಳಿ ಆಕಾರದಲ್ಲಿ ಸುತ್ತಿಕೊಂಡು ಲಿಂಗದ ಮೇಲೆ ಬಾಗಿ ನಿಂತಿರುವುದು ವಿಶೇಷವಾಗಿ ಕಂಡುಬರುತ್ತದೆ.

ಲಿಂಗದ ಮೇಲಿನ ವಾಸ್ತುಶಿಲ್ಪ ಆಕರ್ಷಕವಾಗಿದ್ದು ಈ ತರಹದ ಕೆತ್ತನೆ ಇರುವ ಗುಹಾಲಯ ಬೇರೆಲ್ಲೂ ಇಲ್ಲ ಎಂದು ಡಾ. ಸಿ.ಎಸ್. ಪಾಟೀಲ್‌ರವರು ಅಭಿಪ್ರಾಯ ಪಟ್ಟಿದ್ದಾರೆ ಹಾಗೂ ಈ ಲಿಂಗವನ್ನು 'ರಾಮೇಶ್ವರದ ಲಿಂಗ'ವೆಂದು ಕರೆದಿದ್ದಾರೆ. ಪ್ರೊ. ಎಂ.ಎಚ್. ಕೃಷ್ಣ ಅವರು ಈ ಗುಹಾಲಯ ಅದ್ವಿತೀಯವಾದದು, ಇಂಥ ಗುಹಾಲಯ ಕರ್ನಾಟಕದಲ್ಲಿ ಇನ್ಯಾವ ಕಡೆಯೂ ಇಲ್ಲ ಎಂದಿದ್ದಾರೆ.

**ಕಾಲಮಾನ**

ಈ ಗುಹಾಂತರ ದೇವಾಲಯವನ್ನು ಬಹುಶಃ ವಿಜಯನಗರದ ತರುವಾಯ ಇಲ್ಲವೆ ವಿಜಯನಗರ ಸಾಮ್ರಾಜ್ಯದ ಕೊನೆಯ ಕಾಲದಲ್ಲಿ ನಿರ್ಮಿಸಿರಬಹುದು. ನಾಯಕನಹಟ್ಟಿ ಬಖೈರಿನ ಪ್ರಕಾರ ಕ್ರಿ.ಶ. 1600 ರ ಸಮಯದಲ್ಲಿ ಇದು ನಿರ್ಮಾಣವಾಗಿದೆ ಎಂದಿದೆ. ಕಾಲದ ಬಗ್ಗೆ ಸ್ಪಷ್ಟತೆ ಇಲ್ಲ.

ಗುಹಾಂತರ ದೇವಾಲಯದ ಶೈಲಿಯು ಪವಿತ್ರವಾದ, ಆರೋಗ್ಯಕರವಾದ ಅಲಂಕಾರದ ದೃಶ್ಯಶಿಲ್ಪಗಳನ್ನು ಒಳಗೊಂಡು ಭಾರತದ ಇನ್ನಿತರ ಗುಹಾಂತರ ದೇವಾಲಯಗಳಿಗಿಂತ ವಿಭಿನ್ನವಾಗಿರುವುದನ್ನು ನೋಡಬಹುದು. ಈ ಗುಹಾಲಯದ ಕಂಬಗಳು ಬಿರುಕು ಬಿಟ್ಟಿದ್ದು ಮಳೆಗಾಲದಲ್ಲಿ ದೇವಾಲಯದ ತುಂಬಾ ನೀರು ನಿಲ್ಲುತ್ತಿದೆ. ಕೋಟೆಯ ಭಾಗಗಳು ಅವನತಿಯ ಹಂತದಲ್ಲಿವೆ. ಪುಷ್ಕರಿಣಿಗಳು ಅವನತಿಯ ಹಂತದಲ್ಲಿವೆ, ನಿಧಿಚೋರರು ಕೋಟೆಯ ಭಾಗಗಳನ್ನು ಅಗೆದು ಹಾಳುಮಾಡುತ್ತಿದ್ದಾರೆ. ಇತ್ತೀಚೆಗೆ ಪ್ರವಾಸಿಗರು ದೇವಾಲಯವನ್ನು ನೋಡಲು ಬರುತ್ತಿದ್ದಾರೆ. ಆದರೆ ದೇವಾಲಯಕ್ಕೆ ಹೋಗಲು ಮೂಲಸೌಕರ್ಯಗಳಾದ ರಸ್ತೆ ಅನುಕೂಲತೆ ಇಲ್ಲದೆ ಆತಂಕಪಡುವ ಸ್ಥಿತಿಯಲ್ಲಿದೆ. ಇತ್ತೀಚೆಗೆ  ಸ್ಮಾರಕದ ನಿಯಮಗಳನ್ನು ಪಾಲಿಸದೆ ಅವೈಜ್ಞಾನಿಕವಾಗಿ ಇಲ್ಲಿ ಕಟ್ಟಡಗಳನ್ನೂ ನಿರ್ಮಿಸಲಾಗಿದೆ. ಈ ಸ್ಮಾರಕದತ್ತ ಜಿಲ್ಲಾಧಿಕಾರಿಗಳು, ಪುರಾತತ್ವ ಇಲಾಖೆ, ಸ್ಥಳೀಯರು ಹಾಗೂ ಸರ್ಕಾರ ಈ ಕಡೆ ಗಮನ ಹರಿಸಿ ಕರ್ನಾಟಕದಲ್ಲಿ ಅಪರೂಪ ಎನಿಸಿದ ಗುಹಾಂತರ ದೇವಾಲಯವನ್ನು ಸಂರಕ್ಷಿಸಿ ಪ್ರವಾಸಿಗರ ಸ್ಥಳವನ್ನಾಗಿ ಮಾಡಬೇಕು. ಸ್ಮಾರಕ ಸಂರಕ್ಷಣೆ, ವಿಶ್ವ ಪ್ರವಾಸೋದ್ಯಮ ದಿನಗಳನ್ನು ಆಚರಿಸುತ್ತಿರುವ ಇಂದಿನ ದಿನಗಳಲ್ಲಿ, ಅಪರೂಪವೆನಿಸುವ ಇಂತಹ ಗುಹಾಂತರ ದೇವಾಲಯವನ್ನು ಉಳಿಸುವ ಕರ್ತವ್ಯ ನಮ್ಮದಾಗಬೇಕಾಗಿದೆ.

❑

ಅಪ್ಪಿನಲಾದ ಘಟವು ಅರ್ಪಿ[ತದ]ಲೆ ಲೀಯ,
ಇಪ್ಪತ್ತೈದೆಂದು ಕುರುಹಿಡುವೆ ಏಕೆಲೆ ಮನುಜಾ.
ತಾ ಹುಟ್ಟಿ ತಮ್ಮವ್ವೆ ಬಂಜೆಯೆಂಬ ನ್ಯಾಯದಲ್ಲಿ
ಬೇರೆ ವಿವರಿಸಿ ತೋರಬಲ್ಲಡದು ಯೋಗ.
ಅಭ್ಯಾಸಸಮಾಧ್ಥಿಯಿಂ ಅನುಭವಿಗಳೆಲ್ಲರಿಗೆ
ಬಯಲ ಸಮಾಧ್ಥಿಯಾಗದಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನ

**– ಸಿದ್ಧರಾಮೇಶ್ವರ**

## ಗ್ರಂಥ ಪರಾಮರ್ಶೆ

## ಪ್ರಸಾದ ವರ್ಗೀಕೃತ ಲೇಖನ ಸೂಚಿ

**ಸಂಕಲನಕಾರರು : ಡಾ. ಎಸ್. ಆರ್. ಗುಂಜಾಳ**
ಪ್ರಕಾಶಕರು : ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, 2023
ಪುಟ : 278 ಬೆಲೆ : ರೂ. 200

---

**ಪ್ರಕಾಶ ಗಿರಿಮಲ್ಲನವರ**

ಡಾ. ಎಸ್.ಆರ್. ಗುಂಜಾಳ ಅವರು ಸಂಪಾದಿಸಿದ 'ಪ್ರಸಾದ ವರ್ಗೀಕೃತ ಪರಿಷ್ಕೃತ ಲೇಖನ ಸೂಚಿ' ಕೃತಿ ಸಂಶೋಧಕರಿಗೊಂದು ಅಮೂಲ್ಯ ಆಕರಗ್ರಂಥವಾಗಿದೆ. ಮೈಸೂರಿನ ಸುತ್ತೂರು ಶ್ರೀ ಜಗದ್ಗುರು ವೀರಸಿಂಹಾಸನ ಮಠದ ಜೆ.ಎಸ್.ಎಸ್. ಮಹಾವಿದ್ಯಾಪೀಠದಿಂದ 1968ರಿಂದಲೂ ಪ್ರಕಟವಾಗುತ್ತಿರುವ 'ಪ್ರಸಾದ' ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳ ಸೂಚಿ ಇದು.

'ಪ್ರಸಾದ' ಪತ್ರಿಕೆಯನ್ನು ಸುತ್ತೂರು ಜಗದ್ಗುರು ಶ್ರೀ ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು 1968ರಲ್ಲಿ ಪ್ರಾರಂಭ ಮಾಡಿದರು. ಆ ವರ್ಷ ಬಸವಣ್ಣನವರ ಅಷ್ಟಶತಮಾನೋತ್ಸವ ಸಮಾರಂಭವು ಇಡೀ ನಾಡಿನಾದ್ಯಂತ ಜರುಗಿತು. ಅಂದಿನಿಂದ 2022ರವರೆಗೆ ನಿರಂತರವಾಗಿ 'ಪ್ರಸಾದ' ಪತ್ರಿಕೆ ದ್ವೈಮಾಸಿಕವಾಗಿ ಪ್ರಕಟವಾಗುತ್ತ ಬಂದಿದೆ (ಇತ್ತೀಚೆಗೆ ಅದು ಮಾಸಿಕವಾಗಿ ಪ್ರಕಟವಾಗುತ್ತಿದೆ). ಒಟ್ಟು 54 ವರ್ಷಗಳ ಅವಧಿಯಲ್ಲಿ 2088 ಮೌಲಿಕ ಲೇಖನಗಳನ್ನು ಈ ಪತ್ರಿಕೆ ಪ್ರಕಟಮಾಡಿದೆ. ಇದೊಂದು ಪ್ರತ್ಯೇಕ ಪಿಎಚ್.ಡಿ. ಅಧ್ಯಯನದ ವಿಷಯವೇ ಆಗುವಂತಿದೆ. ಈ ಎಲ್ಲ ಲೇಖನಗಳನ್ನೂ ಡಾ. ಗುಂಜಾಳ ಅವರು ಶರಣ ಸಾಹಿತ್ಯಕ್ಕೆ ಅನುಗುಣವಾಗಿ ಹೊಸದೊಂದು ವರ್ಗೀಕರಣ ಪದ್ಧತಿಯನ್ನು ರೂಪಿಸಿರುವುದು ಶರಣ ಸಾಹಿತ್ಯಾಭ್ಯಾಸಿಗಳಿಗೆ ಸಂತಸ ತರುವ ಸಂಗತಿಯಾಗಿದೆ. ಈ ವರ್ಗೀಕರಣದನ್ವಯ ಲೇಖನಗಳನ್ನು ಆಯಾ ವಿಷಯಕ್ಕೆ ಅನುಗುಣವಾಗಿ ಜೋಡಿಸಲಾಗಿದೆ. ಹೀಗಾಗಿ ಯಾವುದೇ ಒಂದು ವಿಷಯವನ್ನು ಕುರಿತು ಯಾವ ಲೇಖನ ಪ್ರಕಟವಾಗಿದೆ ಎಂಬುದನ್ನು ಸಂಶೋಧಕರು ತಕ್ಷಣ ನೋಡಬಹುದು. ಅಂಥ ಖಚಿತವಾದ ವೈಜ್ಞಾನಿಕ ತಳಹದಿಯ ಮೇಲೆ ಈ ಸೂಚಿಯನ್ನು ಸಿದ್ಧಗೊಳಿಸಲಾಗಿದೆ. ಪ್ರಾಯಶಃ ಎಸ್.ಎಸ್.ಎಲ್.ಸಿ. ಓದಿರುವ ವಿದ್ಯಾರ್ಥಿಗೂ

ಅರ್ಥವಾಗುವ ಸರಳ ದಶಾಂಶ ವರ್ಗೀಕರಣವನ್ನು ಡಾ. ಗುಂಜಾಳ ಗುರುಗಳು ಕೊಟ್ಟಿರುವುದು ಅತ್ಯಂತ ಔಚಿತ್ಯಪೂರ್ಣವಾಗಿದೆ.

ಶಾಸನ, ಕವಿಚರಿತೆ, ತತ್ವಜ್ಞಾನ, ಧರ್ಮ, ಗುರು, ಲಿಂಗ, ಜಂಗಮ, ಷಟ್‌ಸ್ಥಲ, ಪಂಚಾಚಾರ, ಶಿವಯೋಗ–ಅನುಭಾವ, ಮಠಗಳು, ಧರ್ಮಸಂಸ್ಕಾರಗಳು, ಕಾಯಕ, ದಾಸೋಹ, ಸಮಾಜಸೇವೆ, ಭಾಷಾಶಾಸ್ತ್ರ, ವಚನಸಾಹಿತ್ಯ, ಸಂಸ್ಕೃತ ಸಾಹಿತ್ಯ, ಶೂನ್ಯಸಂಪಾದನೆ, ಪುರಾಣ, ಚಂಪೂ, ರಗಳೆ, ತ್ರಿಪದಿ, ಅಷ್ಟಕ ಮೊದಲಾದ ಕಾವ್ಯ ಪ್ರಕಾರಗಳು, ಅನುಭಾವಿ ಕವಿಗಳು, ಜೀವನಚರಿತ್ರೆ, ಬಸವಣ್ಣ, ಪ್ರಭುದೇವ, ಅಕ್ಕಮಹಾದೇವಿ, ಸಿದ್ಧರಾಮ, ತೋಂಟದ ಸಿದ್ಧಲಿಂಗ ಶಿವಯೋಗಿ, ಶರಣರ ಚರಿತ್ರೆಗಳು, ಶರಣೆಯರ ಚರಿತ್ರೆಗಳು, ಅರಸು ಮನೆತನಗಳು, ಮೈಸೂರು ಅರಸು ಮನೆತನ, ಕೆಳದಿ ಅರಸು ಮನೆತನ ಹೀಗೆ ಅನೇಕ ವಿಷಯಗಳಿಗೆ ಸಂಬಂಧಿಸಿದ ಮೌಲಿಕ ಲೇಖನಗಳು 'ಪ್ರಸಾದ' ಪತ್ರಿಕೆಯಲ್ಲಿ ಪ್ರಕಟವಾಗಿವೆ. ಇವುಗಳನ್ನು ಆಧರಿಸಿ ಒಂದು ಪ್ರತ್ಯೇಕವಾದ ಸಾಂಸ್ಕೃತಿಕ ಅಧ್ಯಯನವನ್ನೇ ಮಾಡಬಹುದಾಗಿದೆ.

ಸೂಚಿಯಲ್ಲಿ ಮೊದಲಿಗೆ ಲೇಖಕರ ಹೆಸರು, ಅದರ ಕೆಳಗೆ ಲೇಖನದ ಹೆಸರು, ಸಂಪುಟ, ಸಂಚಿಕೆ, ಪುಟ, ಪ್ರಕಟವಾದ ತಿಂಗಳು ಮತ್ತು ವರ್ಷ ಇಷ್ಟು ವಿವರಗಳಿವೆ. ಕೊನೆಯಲ್ಲಿ ಲೇಖಕರ ಅಕಾರಾದಿ ಪಟ್ಟಿಯಿದೆ. ಅದರಿಂದ ಯಾವ ಲೇಖಕ ಎಷ್ಟು ಲೇಖನಗಳನ್ನು ಬರೆದಿದ್ದಾನೆ ಎಂಬುದನ್ನು ತಕ್ಷಣ ನೋಡಬಹುದು. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು, ಸಿಪಿಕೆ, ಗಂಗಾಧರನ್ ಎಚ್. ಮಲೆಯೂರು ಗುರುಸ್ವಾಮಿ, ಎಸ್. ಆರ್. ಗುಂಜಾಳ, ತಿಪ್ಪೇಸ್ವಾಮಿ, ಎಚ್. ವಿ. ನಾಗರಾಜರಾವ್, ವಿ.ಜಿ. ಪೂಜಾರ, ಡಿ.ಎಂ. ಮಹಾದೇವಮೂರ್ತಿ, ವಿಜಯಕುಮಾರ ಮಹಾನುಭಾವಿಗಳು, ಎಸ್. ಶಿವಣ್ಣ, ಎಫ್.ಟಿ. ಹಳ್ಳಿಕೇರಿ ಇವರು ಅತಿ ಹೆಚ್ಚು ಲೇಖನಗಳನ್ನು ಬರೆದವರು. ಒಂದೊಂದೆ ಲೇಖನಗಳನ್ನು ಬರೆದವರು ಇದ್ದಂತೆ, ಐದರಿಂದ ಇಪ್ಪತ್ತರವರೆಗೆ ಲೇಖನಗಳನ್ನು ಬರೆದವರೂ ಇದ್ದಾರೆ. ಈ ಐವತ್ತು ವರ್ಷಗಳ ಸುದೀರ್ಘ ಕಾಲಘಟ್ಟದಲ್ಲಿ ಪ್ರಕಟವಾದ ಲೇಖನಗಳು ಇಲ್ಲಿರುವುದರಿಂದ, ಆಯಾ ಕಾಲಮಾನದ ವಸ್ತುಸ್ಥಿತಿಯನ್ನು ಈ ಲೇಖನಗಳು ತಿಳಿಸುತ್ತವೆ.

ಶ್ರದ್ಧೆ, ಪರಿಶ್ರಮ, ಗ್ರಂಥಾಲಯಶಾಸ್ತ್ರದ ಶಾಸ್ತ್ರೀಯ ದೃಷ್ಟಿಯ ಪರಿಪಾಕಗಳ ಹಿನ್ನೆಲೆಯಲ್ಲಿ ಈ ಸೂಚಿ ಅತ್ಯಂತ ವೈಜ್ಞಾನಿಕವಾಗಿ ರಚನೆಗೊಂಡಿದೆ. ಈ ಬಗೆಯ ಗ್ರಂಥಗಳ ಅಪೂರ್ವತೆ, ಮಹತ್ವ ಸಾಮಾನ್ಯರಿಗೆ ತಿಳಿಯಲಾಗದು. ಒಂದು ವಿಷಯವನ್ನು ಕುರಿತು ಆಮೂಲಾಗ್ರವಾಗಿ ವ್ಯಾಸಂಗ ಮಾಡಬೇಕೆಂದಾಗ ಅದಕ್ಕೆ ಬೇಕಾಗುವ ಲೇಖನಗಳು ಎಷ್ಟಿವೆ? ಲೇಖನಗಳು ಎಲ್ಲಿ ಸಿಕ್ಕಬಹುದು? ಇತ್ಯಾದಿ ಮಾತುಗಳೊಡನೆ

ಸಂಶೋಧನಾ ವಿಷಯದ ಮಾಹಿತಿಯನ್ನು ಒಳಗೊಳ್ಳುವ 'ಪ್ರಸಾದ ಲೇಖನ ಸೂಚಿ'ಯಂತಹ ಮಾರ್ಗದರ್ಶಿಕೆಗಳ ಹಿರಿಮೆಯನ್ನು ಎಷ್ಟೆಂದು ಹೇಳಬೇಕು! ಕರ್ನಾಟಕ ಸಂಸ್ಕೃತಿಯ ವ್ಯಾಸಂಗಿಗಳಿಗೂ, ಶರಣ ಸಾಹಿತ್ಯದ ಶ್ರದ್ಧಾವಂತ, ಅಭ್ಯಾಸಿಗಳಿಗೂ ಈ ಗ್ರಂಥವು ಒಂದು ಕೈಗನ್ನಡಿಯಾಗುವುದೆಂಬಲ್ಲಿ ಸಂದೇಹವಿಲ್ಲ.

ಸುತ್ತೂರು ಜಗದ್ಗುರು ಮಹಾಸ್ವಾಮೀಜಿಯವರು "ಡಾ. ಎಸ್.ಆರ್. ಗುಂಜಾಳರವರು ಗ್ರಂಥಾಲಯ ಕ್ಷೇತ್ರದಲ್ಲಿ ತಲಸ್ಪರ್ಶಿ ಅಧ್ಯಯನ ಮಾಡಿದ ವಿದ್ವಾಂಸರಲ್ಲೊಬ್ಬರಾಗಿದ್ದಾರೆ. ಈ ಲೇಖನಸೂಚಿಯ ವರ್ಗೀಕರಣದ ಕೆಲಸವನ್ನು ಅವರು ಅತ್ಯಂತ ಸಮರ್ಥವಾಗಿ, ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಇಂತಹ ಅಗಾಧವಾದ ಮತ್ತು ಶ್ರಮಸಾಧ್ಯವಾದ ಕೆಲಸವನ್ನು ಅವರು ತುಂಬು ಪ್ರೀತಿ, ವಿಶ್ವಾಸಗಳಿಂದ ಮತ್ತು ವಿದ್ವತ್ಕಾರ್ಯವೆಂಬ ಆಸಕ್ತಿಯಿಂದ ಮಾಡಿಕೊಟ್ಟಿದ್ದಾರೆ." ಎಂದು ಶುಭ ಹಾರೈಕೆಯಲ್ಲಿ ಹೇಳಿದ್ದಾರೆ.

ಇಂತಹ ಸೂಚಿಗಳ ಮಹತ್ವ ಸಾಮಾನ್ಯರಿಗೆ ಅರ್ಥವಾಗುವುದಿಲ್ಲ. ಆದರೆ ಸಂಶೋಧನೆಯಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಂಡವರಿಗೆ ಇದರ ಮಹತ್ವ ಗೊತ್ತು. ಡಾ. ಚಿದಾನಂದಮೂರ್ತಿ, ಡಾ. ಹಿರೇಮಲ್ಲೂರ ಈಶ್ವರನ್, ಡಾ. ಶಂಬಾ ಜೋಶಿ, ಡಾ. ಪಿ. ಬಿ. ದೇಸಾಯಿ ಮೊದಲಾದ ವಿದ್ವಾಂಸರು ಡಾ. ಗುಂಜಾಳ ಅವರು ಸಿದ್ಧಪಡಿಸಿದ ಸೂಚಿಗಳಿಂದ ಮೇಲೆ ತಮ್ಮ ಸಂಶೋಧನೆಗೆ ಬಹಳಷ್ಟು ಉಪಕಾರವಾಯಿತೆಂದು ಅತ್ಯಂತ ಕೃತಜ್ಞತಾಭಾವದಿಂದ ಸ್ಮರಿಸಿಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ಸುತ್ತೂರು ಜಗದ್ಗುರು ಮಹಾಸನ್ನಿಧಿಯವರು ಈ ಸೂಚಿಯ ಮಹತ್ವವನ್ನು ಬಲ್ಲವರಾದ ಕಾರಣ, ಇದನ್ನು 2009ರಲ್ಲಿಯೇ ಮೊದಲ ಮುದ್ರಣವಾಗಿ ಪ್ರಕಟಿಸಿದ್ದರು. ಪರಿಷ್ಕೃತ ಆವೃತ್ತಿಯಾಗಿ ಈಗ ಮತ್ತೆ ಪ್ರಕಟಿಸಿರುವುದು ಅವರ ವಿದ್ವತ್‌ಪ್ರೀತಿ, ಸಾಹಿತ್ಯಿಕ ಕಾಳಜಿಗೆ ನಿದರ್ಶನವೆನಿಸಿದೆ. ಉಳಿದ ಮಠಾಧೀಶರು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರೆ, ಶರಣ ಸಾಹಿತ್ಯ ವಾಗ್ದೇವಿಯ ಭಂಡಾರವೇ ಲೋಕದೆದುರು ಒಡೆದು ತೋರಬಹುದು.

'ಪ್ರಸಾದ' ಪತ್ರಿಕೆಯನ್ನು ಪ್ರಕಟಿಸುತ್ತಿರುವ ಸುತ್ತೂರು ಜಗದ್ಗುರು ಮಹಾಸನ್ನಿಧಿಯವರಿಗೂ, 'ಪ್ರಸಾದ' ಸಂಪಾದಕ ಮಂಡಳಿಗೂ, ಈ ಸೂಚಿಯನ್ನು ಸಿದ್ಧಗೊಳಿಸಿದ ಡಾ. ಗುಂಜಾಳ ಗುರುಗಳಿಗೂ ಅನಂತ ವಂದನೆಗಳು.

❑

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

### ಸಹೃದಯರ ಮನ ಮೆಚ್ಚಿಸುವ ಮೊಯಿಲಿಯವರ ಬರಹಗಳು

ಮೊಯಿಲಿಯವರ ಬರಹಗಳು ಸಹೃದಯರ ಮನಸ್ಸುಗಳನ್ನು ಮೆಚ್ಚಿಸುತ್ತವೆ ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 2ರಂದು ಚಿಕ್ಕಬಳ್ಳಾಪುರದಲ್ಲಿ ನಡೆದ ಮಾಜಿ ಮುಖ್ಯಮಂತ್ರಿಗಳಾದ ಡಾ. ಎಂ. ವೀರಪ್ಪ ಮೊಯಿಲಿಯವರ ಗದ್ಯ ಮಹಾಕಾವ್ಯ 'ವಿಶ್ವಸಂಸ್ಕೃತಿಯ ಮಹಾಯಾನ' ಕೃತಿ ಲೋಕಾರ್ಪಣೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮೊಯಿಲಿಯವರು ಶ್ರೇಷ್ಠ ರಾಜಕಾರಣಿಗಳೂ ಹೌದು ಹಾಗೂ ಅತ್ಯುತ್ತಮ ಸಾಹಿತಿಗಳೂ ಹೌದು. ಅವರ ಈ ಕೃತಿ ಕನ್ನಡಕ್ಕೆ ಅತ್ಯಗತ್ಯವಾಗಿ ಬೇಕಾಗಿರುವ ಗದ್ಯಕಾವ್ಯವಾಗಿದೆ. ಇಡೀ ಜಗತ್ತಿನ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಲು ಇದು ನೆರವಾಗಲಿದೆ. ಮೊಯಿಲಿಯವರು ಗ್ರಾಮೀಣ ಭಾಗದಿಂದ ಬಂದವರು. ಮಾನಸಿಕ ಸಂತೋಷಕ್ಕೆ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ. ರಾಜಕಾರಣದ ಜೊತೆಗೆ ಸಾಹಿತ್ಯಕ್ಕೂ ಸಮಯವನ್ನು ಹೊಂದಿಸಿಕೊಂಡಿದ್ದಾರೆ. ಹಿಂದೆ ವಿಧಾನಮಂಡಲದಲ್ಲಿ ವಿಷಯಗಳ ಚರ್ಚೆಯ ಜೊತೆಗೆ ಸಾಹಿತ್ಯವೂ ಇರುತ್ತಿತ್ತು ಎಂದು ಹೇಳಿದರು.

ಆದಿಚುಂಚನಗಿರಿ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು ಶುಭ ಸಂದೇಶ ನೀಡಿದರು. ಪ್ರೊ. ಪುರುಷೋತ್ತಮ ಬಿಳಿಮಲೆ ಕೃತಿ ಕುರಿತು ಮಾತನಾಡಿದರು. ಶ್ರೀ ಪುತ್ತೂರು ನರಸಿಂಹ ನಾಯಕ್ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀ ಎನ್. ರಮೇಶ್ ವಂದಿಸಿದರು. ಪ್ರೊ. ಕೆ.ಇ. ರಾಧಾಕೃಷ್ಣ ಕಾರ್ಯಕ್ರಮ ನಿರೂಪಿಸಿದರು.

### ಶ್ರೀ ಸುತ್ತೂರು ಕ್ಷೇತ್ರದಲ್ಲಿ ಸಂಭ್ರಮದ ಮಹಾಶಿವರಾತ್ರಿ

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮಾರ್ಚ್ 8ರಂದು ಮಹಾಶಿವರಾತ್ರಿಯ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಅಹೋರಾತ್ರಿ ವಿಶೇಷ ಪೂಜೆ ಹಾಗೂ ಜಾಗರಣೆ ಕಾರ್ಯಕ್ರಮಗಳು ನೆರವೇರಿದವು.

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ಮಹದೇಶ್ವರ, ಶ್ರೀ ಸೋಮೇಶ್ವರ, ಶ್ರೀ ವೀರಭದ್ರೇಶ್ವರ, ಶ್ರೀ ನಂಜುಂಡೇಶ್ವರ,

ಶ್ರೀ ನಾರಾಯಣಸ್ವಾಮಿ ದೇವಾಲಯುಗಳಲ್ಲಿ ರುದ್ರಾಭಿಷೇಕ, ಅಷ್ಟೋತ್ತರ, ಮಹಾಮಂಗಳಾರತಿ ಮೊದಲಾದ ವಿಶೇಷ ಪೂಜೆಗಳು ಜರುಗಿದವು.

ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲೆಯ ವಿದ್ಯಾರ್ಥಿಗಳು ಭಕ್ತಿಭಾವಭರಿತ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದರು. ಮೈಸೂರಿನ ಶ್ರೀ ಋತ್ವಿಕ್ ಸಿ. ರಾಜ್ ಮತ್ತು ತಂಡದವರು ಭಕ್ತಿಗೀತೆಗಳನ್ನು ಹಾಡಿದರು. ಜೆಎಸ್‌ಎಸ್ ಬಿಇಡಿ ಕಾಲೇಜು ವಿದ್ಯಾರ್ಥಿಗಳು 'ಭೂಕೈಲಾಸ' ಎಂಬ ನಾಟಕವನ್ನು ಪ್ರಸ್ತುತಿ ಪಡಿಸಿದರು. ತುಮಕೂರಿನ ಮಲ್ಲಸಂದ್ರದ ಡಾ. ಲಕ್ಷ್ಮಣ್‌ದಾಸ್‌ಶಾಸ್ತ್ರಿಗಳವರು ಶಿವಕಥಾ ಸಂಕೀರ್ತನೆ ಮಾಡಿದರು. ಮೈಸೂರಿನ ನಾದಲಹರಿ ತಂಡದವರು ಭಕ್ತಿಸುಧೆ, ರಾಮಸಮುದ್ರದ ಶ್ರೀ ಸಿದ್ದಪ್ಪಾಜಿ ನೀಲಗಾರರ ಸಂಘದವರು ಮಹದೇಶ್ವರ ಕಥನ ಗಾಯನವನ್ನು ಮತ್ತು ಹೊರಳವಾಡಿಯ ಶ್ರೀ ಬಸವೇಶ್ವರ ಭಜನಾ ತಂಡದವರು ಭಜನೆ ಕಾರ್ಯಕ್ರಮ ನಡೆಸಿಕೊಟ್ಟರು.

ಚಾಮರಾಜನಗರದ ಕದಳಿ ಮಹಿಳಾ ವೇದಿಕೆ, ಚುಂಚನಹಳ್ಳಿ, ಸೋನಹಳ್ಳಿ, ಹೊರದಳ್ಳಿ, ಬದನವಾಳು, ಹೂಟಗಳ್ಳಿ, ದೇವನೂರು, ಹೆಳವರಹುಂಡಿ, ಆಲಹಳ್ಳಿ ಮತ್ತು ಭೋಗಯ್ಯನಹುಂಡಿ ಭಜನಾ ತಂಡದವರು ಶ್ರೀಮಠ ಹಾಗೂ ಶ್ರೀ ಗದ್ದುಗೆಯಲ್ಲಿ ಅಖಂಡ ಭಜನೆ ನಡೆಸಿದರು.

ಎಸ್. ಹೊಸಕೋಟೆಯ ಡಾ. ಎಚ್.ಎಸ್. ರಾಘವೇಂದ್ರರಾವ್ ಮತ್ತು ಕುಟುಂಬದವರು ಶ್ರೀ ನಂಜುಂಡೇಶ್ವರ ದೇವಸ್ಥಾನದ ಬಾಗಿಲುವಾಡ ಮತ್ತು ಬಾಗಿಲುಗಳಿಗೆ ಬೆಳ್ಳಿ ಕವಚವನ್ನು ಸಮರ್ಪಿಸಿದರು. 50ಕ್ಕೂ ಹೆಚ್ಚು ವಟುಗಳಿಗೆ ಶಿವದೀಕ್ಷೆ ಸಂಸ್ಕಾರ ನೀಡಲಾಯಿತು.. ಕಾರ್ಯಕ್ರಮಗಳಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

## ಗ್ರಂಥಗಳ ಅಧ್ಯಯನದಿಂದ ಅನೇಕ ಸಮಸ್ಯೆಗಳಿಗೆ ಪರಿಹಾರ

ಗ್ರಂಥಗಳ ಅಧ್ಯಯನದಿಂದ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 17ರಂದು ಕಲಬುರಗಿಯ ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನದ 47ನೇ ವಾಷಿಕೋತ್ಸವ ಹಾಗೂ 121 ಗ್ರಂಥಗಳ ಲೋಕಾರ್ಪಣೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಓದುವಿಕೆ ಮನುಷ್ಯನ ಜ್ಞಾನ ಸಂಪಾದನೆಗೆ ಸಹಕಾರಿಯಾಗುವಂಥದ್ದು. ವ್ಯಕ್ತಿಯೊಬ್ಬ ವಿವೇಕಶಾಲಿ ಮತ್ತು ಸಹೃದಯನಾಗಬೇಕಾದರೆ ಗ್ರಂಥಗಳ ಅಧ್ಯಯನ ಅಗತ್ಯ. ಸಹೃದಯನಾದವನು ಸಮಸ್ಯೆಗಳಿಗೆ ಸಾಹಿತ್ಯದಲ್ಲಿ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತಾನೆ. ಒಂದು ಕಾಲದಲ್ಲಿ ಹಸ್ತಪ್ರತಿ ಅಧ್ಯಯನದ ಮೂಲಕ ಜ್ಞಾನ ಸಂಪಾದನೆ ಮಾಡಿಕೊಳ್ಳಬೇಕಿತ್ತು. ಇದೀಗ ಕಾಲ ಬದಲಾಗಿದೆ. ಓದುಗ ಸಹೃದಯನಾದಾಗ ಮಾತ್ರ

ಅರಿವು ದೊರೆಯಲು ಸಾಧ್ಯ. ವಸ್ತುನಿಷ್ಠ ವಿಮರ್ಶೆಯಿಂದ ಉತ್ತಮ ಸಾಹಿತ್ಯ ಬರಲು ಸಾಧ್ಯ. ಒಂದು ಕೃತಿಯ ವಿಮರ್ಶೆ ಮಾಡುವಾಗ ಕೃತಿಯನ್ನು ಮಾತ್ರ ವಿಮರ್ಶೆ ಮಾಡಬೇಕು. ಸಾಹಿತಿಗಳು ರಚಿಸಿದ ಕೃತಿಗಳೇ ಅವರ ವ್ಯಕ್ತಿತ್ವವನ್ನು ನಿರ್ಮಾಣ ಮಾಡುತ್ತವೆ. ಓದುಗರ ಪ್ರಶಂಸೆ ಹೆಚ್ಚಾದರೆ ಕೃತಿಯನ್ನು ನಾನೇ ರಚಿಸಿರುವೆನೆ ಎಂಬ ಭಾವವೂ ಲೇಖಕರಲ್ಲಿ ಉಂಟಾಗುವ ಸಂದರ್ಭಗಳೂ ಇರುತ್ತವೆ. ರಾಷ್ಟ್ರಕವಿ ಕುವೆಂಪುರವರು 'ಶ್ರೀ ಕುವೆಂಪುವ ಸೃಜಿಸಿದೀ ಮಹಾಛಂದಿಸಿನ ಮೇರುಕೃತಿ, ಮೇಣ್ ಜಗದ್ಭವ್ಯ ರಾಮಾಯಣಂ' ಎಂದಿದ್ದಾರೆ. ಕಳೆದ ನಾಲ್ಕು ದಶಕಗಳಿಗೂ ಹೆಚ್ಚು ಕಾಲದಿಂದ ಅನೇಕ ಮೌಲಿಕ ಗ್ರಂಥಗಳನ್ನು ಕಲಬುರಗಿಯ ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆಯಾಗಿ ನೀಡಿದೆ. ಇಂದು 121 ಗ್ರಂಥಗಳು ಒಟ್ಟಿಗೆ ಬಿಡುಗಡೆಯಾಗುತ್ತಿರುವುದು ಸಂತಸದ ಸಂಗತಿ ಎಂದು ಹೇಳಿದರು.

ಶ್ರೀ ಶರಣಬಸವೇಶ್ವರ ಸಂಸ್ಥಾನದ ಶ್ರೀಮತಿ ದಾಕ್ಷಾಯಿಣಿ ಎಸ್. ಅಪ್ಪರವರು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಬಿ.ಕೆ. ತುಳಸಿಮಾಲಾ, ಸಾಹಿತಿಗಳಾದ ಡಾ. ಬಾಳಾಸಾಹೇಬ ಲೋಕಾಪುರ, ಪ್ರೊ. ದಯಾನಂದ ಅಗಸರ, ಶ್ರೀ ಬಸವರಾಜ ಜಿ. ಕೊನೇಕ, ಡಾ. ಗವಿಸಿದ್ದಪ್ಪ ಪಾಟೀಲರವರುಗಳು ಉಪಸ್ಥಿತರಿದ್ದರು. ಪ್ರೊ. ಶಿವರಾಜ ಪಾಟೀಲ್‌ರವರು ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

**ನಂಬಿಕೆಯೇ ದೇವರು**

ದೇವರು ಇದ್ದಾನೆ ಎಂಬ ಶ್ರದ್ಧೆ ಮತ್ತು ನಂಬಿಕೆಗಳೇ ದೈವಸ್ವರೂಪದವು ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 20ರಂದು ಸರಗೂರು ತಾಲ್ಲೂಕು ಕಾಟವಾಳು ಗ್ರಾಮದ ಶ್ರೀ ಹುಲಿಮಾಸ್ತಮ್ಮನವರ ಜಾತ್ರಾ ಮಹೋತ್ಸವ ಹಾಗೂ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಪುತ್ತಳಿ ಅನಾವರಣ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಭಾರತ ಆಧ್ಯಾತ್ಮಿಕ ಮತ್ತು ಧಾರ್ಮಿಕವಾಗಿ ಶ್ರೀಮಂತವಾದ ದೇಶ. ಭಕ್ತಿಮಾರ್ಗದಲ್ಲಿ ನಂಬಿಕೆ ಇಡಬೇಕು. ದೇವಸ್ಥಾನಗಳು ಮನುಷ್ಯ ಬದುಕಿನ ಜಾಗೃತ ತಾಣಗಳು. ಭಗವಂತನ ಇರುವಿಕೆಯಿಂದಲೇ ಉತ್ತಮ ಮಳೆ, ಬೆಳೆಯಾಗುತ್ತಿದೆ. ಆದ್ದರಿಂದ ಭಗವಂತನಲ್ಲಿ ಅಚಲವಾದ ನಂಬಿಕೆಯಿರಬೇಕು ಎಂದು ಹೇಳಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ದೇವನೂರು, ಹಂಚಿಪುರ, ದಡದಹಳ್ಳಿ, ಬೀಚನಹಳ್ಳಿಪುರ, ಮಾದಾಪುರ ಮಠಗಳ ಶ್ರೀಗಳು, ಶಾಸಕರಾದ ಶ್ರೀ ಅನಿಲ್ ಚಿಕ್ಕಮಾದುರವರು ಉಪಸ್ಥಿತರಿದ್ದರು. ಶ್ರೀ ವೀರಭದ್ರಪ್ಪ ಪ್ರಾರ್ಥಿಸಿದರು. ಶ್ರೀ ವಚನ ಕುಮಾರಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

**ವೈದ್ಯಕೀಯ ವಿದ್ಯಾರ್ಥಿಗಳು ಸಂವಹನ ಕೌಶಲವನ್ನು ರೂಢಿಸಿಕೊಳ್ಳಬೇಕು**

ವೈದ್ಯಕೀಯ ವಿದ್ಯಾರ್ಥಿಗಳು ಸಂವಹನ ಕೌಶಲವನ್ನು ಹೆಚ್ಚು ರೂಢಿಸಿಕೊಳ್ಳಬೇಕು ಎಂದು ಮುಂಬೈ ಲೀಲಾವತಿ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಎಂಡೋಕ್ರಾನೋಲಾಜಿಸ್ಟ್ ವಿಭಾಗದ ಹಿರಿಯ ಸಮಾಲೋಚಕರಾದ ಡಾ. ಶಶಾಂಕ್ ಆರ್. ಜೋಷಿಯವರು ಮಾರ್ಚ್ 26ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪದವೀಧರರ ದಿನಾಚರಣೆಯಲ್ಲಿ ಮಾತನಾಡುತ್ತಾ ತಿಳಿಸಿದರು. ಮನೋವೈಜ್ಞಾನಿಕ ವೈದ್ಯರ ಬಳಿಗೆ ಅನೇಕ ರೀತಿಯ ರೋಗಿಗಳು ಬರುತ್ತಾರೆ. ಅವರಿಗೆ ಆರೋಗ್ಯ ತಪಾಸಣೆಯ ಜತೆಗೆ ಮಾನಸಿಕವಾಗಿ ಧೈರ್ಯ ತುಂಬುವ ಕೆಲಸವನ್ನೂ ಮಾಡಬೇಕು. ಈ ಸಂದರ್ಭದಲ್ಲಿ ತಂತ್ರಜ್ಞಾನ ಅಳವಡಿಕೆ ತುಂಬಾ ಮುಖ್ಯ. ವೈದ್ಯ ವಿದ್ಯಾರ್ಥಿಗಳು ಬದ್ಧತೆಯಿಂದ ವೃತ್ತಿ ಸಂಹಿತೆ ಅಳವಡಿಸಿಕೊಳ್ಳಬೇಕು. ವೈದ್ಯರು ಮೊದಲು ಮಾನವೀಯತೆ ಬೆಳೆಸಿಕೊಳ್ಳಬೇಕು. ಅಂತಃಕರಣ, ಸಹೃದಯತೆ ಇದ್ದಾಗ ವೃತ್ತಿಯಲ್ಲಿ ಸಂತೃಪ್ತಿಯನ್ನು ಕಾಣಬಹುದು ಎಂದು ಹೇಳಿದರು.

ಡಾ. ಹೆಚ್. ಬಸವನಗೌಡಪ್ಪ ಸ್ವಾಗತಿಸಿದರು. ಡಾ. ಸಿ.ಜಿ. ಬೆಟಸೂರಮಠ ಕಾಲೇಜಿನ ವಾರ್ಷಿಕ ಸಂಚಿಕೆ 'ಸಾಮರ್ಥ್ಯ' ಬಿಡುಗಡೆಗೊಳಿಸಿದರು. ಡಾ. ಕೆ.ಎಂ. ಶ್ರೀನಾಥ್ ಪ್ರತಿಜ್ಞಾವಿಧಿ ಬೋಧಿಸಿದರು. ಡಾ. ಕೆ. ಪುಷ್ಪಲತಾ ಪದಕ ಮತ್ತು ಪ್ರಶಸ್ತಿ ವಿಜೇತ ವಿದ್ಯಾರ್ಥಿಗಳ ಹೆಸರು ಪ್ರಕಟಿಸಿದರು. ಡಾ. ಎಂ.ಎನ್. ಸುಮಾ ವಂದಿಸಿದರು. ಡಾ. ಎಸ್. ಅರ್ಚನ ಕಾರ್ಯಕ್ರಮ ನಿರೂಪಿಸಿದರು.

**ಬಸವಣ್ಣನವರ ತತ್ತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು**

ಬಸವಣ್ಣನವರ ತತ್ತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 25ರಂದು ನಂಜನಗೂಡು ತಾಲ್ಲೂಕು ಹಲ್ಲರೆ ಶ್ರೀ ಗುರುಮಲ್ಲೇಶ್ವರ ಪಟ್ಟದ ಮಠದಲ್ಲಿ ಏರ್ಪಡಿಸಿದ್ದ ಬಸವ ಜಯಂತಿ ಹಾಗೂ ಶ್ರೀ ಬಸವಣ್ಣ ಸ್ವಾಮಿಗಳವರ ಮೂರನೆಯ ವರ್ಷದ ಪಟ್ಟಾಧಿಕಾರ ಮಹೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಬಸವಣ್ಣನವರು ಜಗತ್ತಿಗೇ ವಿಶ್ವಗುರುವೆನಿಸಿಕೊಂಡ ಮಹಾತ್ಮರು. ವಚನಗಳ ಮೂಲಕ ಮಾನವ ಜನಾಂಗಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಇಂದಿನ ಪೀಳಿಗೆಯು ಬಸವಣ್ಣನವರ ಆದರ್ಶಗಳನ್ನು ಅಳವಡಿಸಿಕೊಂಡಾಗ ಸೌಹಾರ್ದಯುತ ಜೀವನ ನಡೆಸಲು ಸಾಧ್ಯವಾಗುತ್ತದೆ. ಬಸವಣ್ಣನವರು ಒಂದು ಜಾತಿಗೆ ಸೀಮಿತವಾದವರಲ್ಲ, ಎಲ್ಲ ಜನಾಂಗದವರನ್ನು ಅನುಭವ ಮಂಟಪದ ಮೂಲಕ ಒಗ್ಗೂಡಿಸಿದ ಮಹಾನ್ ಶರಣರು ಎಂದು ಹೇಳಿದರು.

ದೇವನೂರು, ಹೊಸಮಠ, ಹುಲ್ಲಹಳ್ಳಿ, ಮರಿಯಾಲ, ಎನ್.ಆರ್.ಪುರ, ಶಿರಮಳ್ಳಿ, ಕಸುವಿನಹಳ್ಳಿ, ಚುಂಚನಹಳ್ಳಿ, ಕುದೇರು ಮಠ, ಹಂಚೀಪುರ, ದಡದಹಳ್ಳಿ, ಕುರುಬೂರು ಮಠಗಳ ಶ್ರೀಗಳು ಹಾಗೂ ಶ್ರೀ ಬುಲೆಟ್ ಮಹದೇವಪ್ಪ ಮೊದಲಾದವರುಗಳು ಉಪಸ್ಥಿತರಿದ್ದರು. ಶ್ರೀ ಎಚ್.ಸಿ. ಶಿವಬುದ್ಧಿಯವರು ಉಪನ್ಯಾಸ ನೀಡಿದರು.

**ಹಕ್ಕು ಮತ್ತು ಕರ್ತವ್ಯಗಳನ್ನು ಸಮಾನವಾಗಿ ಸ್ವೀಕರಿಸಬೇಕು**

ಹಕ್ಕು ಮತ್ತು ಕರ್ತವ್ಯಗಳನ್ನು ಸಮಾನವಾಗಿ ಸ್ವೀಕರಿಸಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 27ರಂದು ಮೈಸೂರು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ಕನ್ನಡ ವಿಭಾಗ ಮತ್ತು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ವತಿಯಿಂದ ಆಯೋಜಿಸಿದ್ದ 'ವಚನ ಸಾಹಿತ್ಯ – ವರ್ತಮಾನದ ತಲ್ಲಣಗಳು' ವಿಷಯ ಕುರಿತ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ತಲ್ಲಣಗಳು ಯಾವಾಗಲೂ ಇರುವಂಥವು. ಆದರಿಂದ ನಾವು ವಿಚಲಿತರಾಗದೆ ಪರಿಹಾರ ಕಂಡುಕೊಳ್ಳುವುದು ಮುಖ್ಯ. ತಲ್ಲಣಗಳಲ್ಲಿ ಎರಡು ವಿಧ. ಒಂದು ಸಹಜವಾಗಿ ಬರುವ ತಲ್ಲಣಗಳು. ಮತ್ತೊಂದು ಸ್ವಯಂ ಸೃಷ್ಟಿಸಿಕೊಳ್ಳುವ ತಲ್ಲಣಗಳು. ಇವೆರಡಕ್ಕೂ ವಚನ ಸಾಹಿತ್ಯದಲ್ಲಿ ಪರಿಹಾರವಿದೆ. ಒಳ್ಳೆಯ ನಡೆನುಡಿಗಳು ಮನುಷ್ಯನನ್ನು ಯಾವಾಗಲೂ ಸಮಾಧಾನಿಯಾಗಿರಿಸುವಂಥವು ಎಂದು ಹೇಳಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸಿ. ಸೋಮಶೇಖರವರು ವ್ಯಕ್ತಿ ಹುಟ್ಟಿನಿಂದ ದೊಡ್ಡವನಾಗುವುದಿಲ್ಲ, ಆತ ತನ್ನ ಸಾಧನೆಯಿಂದ ದೊಡ್ಡವನಾಗುತ್ತಾನೆ. ವಚನಗಳು ಸಾಮೂಹಿಕ ಸೃಷ್ಠಿ. ಮಾನವನು ಅರಿವು ಮತ್ತು ಆಚಾರದ ನಡುವೆ ಸಮನ್ವಯತೆ ಸಾಧಿಸಿದರೆ ಯಾವ ತಲ್ಲಣಗಳೂ ಉದ್ಭವಿಸುವುದಿಲ್ಲ ಎಂದರು.

ಸಾಹಿತಿಗಳಾದ ಪ್ರೊ. ಸಿ.ಪಿ. ಕೃಷ್ಣಕುಮಾರ್‌ರವರು ಜಾತಿಯತೆ ನಮ್ಮಲ್ಲಿಯ ಒಂದು ದೊಡ್ಡ ತಲ್ಲಣವಾಗಿದೆ. ಈ ತಲ್ಲಣವನ್ನು ತಣ್ಣಗಾಗಿಸುವ ಕಸುವು ವಚನ ಸಾಹಿತ್ಯಕ್ಕೆ ಇದೆ. ಸ್ವಾತಂತ್ರ್ಯ, ಸಮಾನತೆ, ಸೋದರತೆ ಇವು ಸಮಾಜಕ್ಕೆ ಮುಖ್ಯವಾದವು. ಇವುಗಳನ್ನು ನಾವು ಹನ್ನೆರಡನೆ ಶತಮಾನದ ಅನುಭವ ಮಂಟಪದಲ್ಲಿ ಕಾಣಬಹುದು. ನಮ್ಮ ಸಮಾಜ ಇಂದು ಸೃಜನಶೀಲತೆಯನ್ನು ಕಳೆದುಕೊಂಡು ಸಂಕರ ಸ್ಥಿತಿಯಲ್ಲಿದೆ, ಅದು ಶಂಕರ ಸ್ಥಿತಿಯನ್ನು ಪಡೆಯಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ. ಪದ್ಮಾ ಶೇಖರ್ ಮಾತನಾಡಿದರು. ದತ್ತಿ ದಾನಿಗಳಾದ ಡಾ. ಸಿ.ಜಿ. ಬೆಟಸೂರಮಠ ಮತ್ತು ಪ್ರೊ. ಡಿ.ಎಸ್. ಸದಾಶಿವಮೂರ್ತಿಯವರು

ಗಳನ್ನು ಅಭಿನಂದಿಸಲಾಯಿತು. ಡಾ. ಎಂ. ಪೂರ್ಣಿಮ ಉಪಸ್ಥಿತರಿದ್ದರು. ಕು. ವಿದ್ಯಾ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀ ಮ.ಗು. ಸದಾನಂದಯ್ಯ ಸ್ವಾಗತಿಸಿದರು. ಡಾ. ರೇಚಣ್ಣ ವಂದಿಸಿದರು. ಶ್ರೀಮತಿ ಜೆ. ಪುಷ್ಪಲತಾ ಕಾರ್ಯಕ್ರಮವನ್ನು ನಿರೂಪಿಸಿದರು.

**ಮೈಸೂರು ಅಭಿವೃದ್ಧಿಗೆ ಮಾಜಿ ಶಾಸಕರಾದ ಶ್ರೀ ವಾಸು ಕೊಡುಗೆ ಅಪಾರ**

ಮೈಸೂರು ನಗರದ ಅಭಿವೃದ್ಧಿಗೆ ಮಾಜಿ ಶಾಸಕರಾದ ಶ್ರೀ ವಾಸುರವರ ಕೊಡುಗೆ ಅಪಾರವಾದುದು ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 28ರಂದು ವಾಸು ವಿಶ್ವಾಸಿ ಬಳಗದ ವತಿಯಿಂದ ಆಯೋಜಿಸಿದ್ದ ಶ್ರದ್ಧಾಂಜಲಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಶ್ರೀ ವಾಸುರವರು ಸದಾ ಉತ್ಸಾಹದ ಚಿಲುಮೆಯಂತಿದ್ದರು. ಸಾಮಾಜಿಕ ಕೆಲಸಕ್ಕೆ ಸದಾ ಮುನ್ನುಗ್ಗುತ್ತಿದ್ದರು. ಯಾವುದೇ ಕೆಲಸವನ್ನು ತೊಡಕಿಲ್ಲದೆ ನಿರ್ವಹಿಸುವ ಚಾತುರ್ಯ ಅವರಲ್ಲಿತ್ತು. ಅವರಿಗೆ ಮೈಸೂರಿನ ಎಲ್ಲ ವಿಷಯಗಳ ಬಗ್ಗೆ ಮಾಹಿತಿಯಿತ್ತು. ಜನಪ್ರತಿನಿಧಿಗಳಾಗಿ ಹಲವಾರು ಜನಪರವಾದ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ ಎಂದು ಹೇಳಿದರು.

ಆದಿಚುಂಚನಗಿರಿ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು ವಾಸುರವರು ಜನಪ್ರತಿನಿಧಿಗಳಾಗಿ ವಿಶೇಷ ಕೆಲಸ ಕಾರ್ಯಗಳನ್ನು ಮಾಡಿದ ವ್ಯಕ್ತಿ. ರಾಜಕಾರಣಿ ಮಾತ್ರ ಆಗಿರದೆ ಸಾಹಿತ್ಯದಲ್ಲೂ ಅಪಾರ ಆಸಕ್ತಿಯನ್ನು ಹೊಂದಿದ್ದರು. ಅವರು ನಡೆ–ನುಡಿಗಳು ಎರಡೂ ಒಂದೇ ಆಗಿದ್ದವು. ಸಮತ್ವದ ಸ್ಥಿತಿ ಅವರ ನಡೆನುಡಿಯಲ್ಲಿತ್ತು ಎಂದರು.

ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಶ್ರೀ ಮಹಾಮೇಧಾನಂದಜೀಯವರು ವಾಸುರವರು ಸರಳ, ಸಜ್ಜನಿಕಯೆ ವ್ಯಕ್ತಿಯಾಗಿದ್ದರು. ಸುಂಸ್ಕೃತ ಸ್ವಭಾವ ಅವರದಾಗಿತ್ತು ಎಂದು ಅವರ ಗುಣಗಳನ್ನು ಸ್ಮರಿಸಿದರು. ಪ್ರೊ. ಎಂ. ಕೃಷ್ಣೇಗೌಡರವರು ವಾಸು ಅವರು ಮೈಸೂರು ಮಹಾನಗರ ಪಾಲಿಕೆಯ ಮೇಯರ್ ಆಗಿ ಹಾಗೂ ವಿಧಾನಸಭಾ ಸದಸ್ಯರಾಗಿ ಸಮಾಜಕ್ಕೆ ನೀಡಿದ ಕೊಡುಗೆಗಳ ಕುರಿತು ನಿರೂಪಿಸಿದ್ದ 'ವಾಸು ಎಂಬ ಸಭ್ಯತಾ ಚೇತನಕ್ಕೆ ಶ್ರದ್ಧಾಂಜಲಿ' ವಿಡಿಯೋವನ್ನು ಕಾರ್ಯಕ್ರಮದಲ್ಲಿ ಪ್ರದರ್ಶಿಸಲಾಯಿತು.

❑

**'ಪ್ರಸಾದ' ಇಮೇಲ್ ಬದಲಾವಣೆ**

ಜೆಎಸ್ಎಸ್ ಮಹಾವಿದ್ಯಾಪೀಠದಿಂದ ಪ್ರಕಟವಾಗುತ್ತಿರುವ 'ಪ್ರಸಾದ' ಮಾಸಪತ್ರಿಕೆಯ ಇಮೇಲ್ ಬದಲಾವಣೆಯಾಗಿದ್ದು, ಲೇಖನಗಳನ್ನು ಕೆಳಗಿನ ಇಮೇಲ್‌ಗೆ ಕಳುಹಿಸಬೇಕೆಂದು ಕೋರಿದೆ. email : prasada@jssonline.org

# ಪ್ರಸಾದ



## ಕೃತಿ-ಸ್ವೀಕೃತಿ

**ಅಂತರಂಗದ ಅವಲೋಕನ**
(ಡಾ. ಎಂ.ಆರ್. ಹುಲಿನಾಯ್ಕರ್)
ಡಾ. ಕೆ.ಆರ್. ಕಮಲೇಶ್
ಪ್ರ: ಶ್ರೀದೇವಿ ಮೀಡಿಯಾ ಸೆಂಟರ್
ಶಿರಾ ಗೇಟ್, ಲಿಂಗಾಪುರ
ತುಮಕೂರು 572106
ಪು: 600, ಬೆಲೆ: 750/–

**ಗ್ರಂಥಪುರುಷ** (ಸುರೇಶ್ ಸಿ. ಷಾ)
ಪ್ರೊ. ಹಂಪ ನಾಗರಾಜಯ್ಯ
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಆರ್. ದೊಡ್ಡೇಗೌಡ
ಪ್ರ: ಸಪ್ನ ಬುಕ್ ಹೌಸ್
ಗಾಂಧಿನಗರ, ಬೆಂಗಳೂರು 560009
ಪು: 300, ಬೆಲೆ: 300/–

**ನೆನಪಿನ ಬುತ್ತಿ**
ಡಾ. ಎಚ್. ತಿಪ್ಪೇರುದ್ರಸ್ವಾಮಿಯವರ ಆತ್ಮಕಥೆ
ಡಾ. ಎಚ್.ಟಿ. ಶೈಲಜ
ಪ್ರ: ಪ್ರಭುದೇವ ಪ್ರಕಾಶನ
223, 12ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ
ಸರಸ್ವತಿಪುರಂ, ಮೈಸೂರು 570009
ಪು: 68, ಬೆಲೆ: 70/–

**ಬಯಲ ಬೆಳಗು**
ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು – 85 ನೆನಪಿನ ಸಂಪುಟ
ಡಾ. ಎಚ್.ಟಿ. ಶೈಲಜ
ಪ್ರೊ. ಮಲೆಯೂರು ಗುರುಸ್ವಾಮಿ
ಡಾ. ಬಿ. ನಂಜುಂಡಸ್ವಾಮಿ
ಡಾ. ಬಿ. ಪ್ರಭುಸ್ವಾಮಿ ಕಟ್ನವಾಡಿ
ಡಾ. ಬಿ.ಎಸ್. ಸುದೀಪ್
ಪ್ರ: ಪ್ರಭುದೇವ ಪ್ರಕಾಶನ
223, 12ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆ
ಸರಸ್ವತಿಪುರಂ, ಮೈಸೂರು 570009
ಪು: 912, ಬೆಲೆ: 1800/–

**ಸಾಹಿತ್ಯಾವಲೋಕನ**
ಡಾ. ಎಚ್. ತಿಪ್ಪೇರುದ್ರಸ್ವಾಮಿ 95ನೇ ನೆನಪಿನ ಸಂಪುಟ
ಪ್ರ: ಪ್ರಭುದೇವ ಪ್ರಕಾಶನ
223, 12ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆ
ಸರಸ್ವತಿಪುರಂ, ಮೈಸೂರು 570009
ಪು: 744, ಬೆಲೆ: 1300/–

**ಮಂಡ್ಯ ರಮೇಶ್ ನಟನ ಕಥೆ**
ಎನ್. ಧನಂಜಯ
ಪ್ರ: ವೀರಲೋಕ ಬುಕ್ಸ್ ಪ್ರೈ. ಲಿ.,
207, 2ನೇ ಮಹಡಿ, 3ನೇ ಮೇನ್
ಚಾಮರಾಜಪೇಟೆ, ಬೆಂಗಳೂರು 560018
ಪು: 216, ಬೆಲೆ: 250/–

**ಲೋಲಿಂಬರಾಜ ವೈದ್ಯಜೀವನ**
ಕನ್ನಡ ಅನುವಾದ: ಡಾ. ಕೆ.ಎಸ್. ಉಮಾಶಂಕರ್
ಪ್ರ: ಕೆ.ಆರ್.ಎಸ್. ಪ್ರಕಾಶನ
760, 19ನೇ ಅಡ್ಡರಸ್ತೆ
27ನೇ ಮುಖ್ಯ ರಸ್ತೆ, 2ನೇ ಹಂತ
ಜೆ.ಪಿ. ನಗರ, ಮೈಸೂರು
ಪು: 120, ಬೆಲೆ: 100/–

**ರುದ್ರಾಕ್ಷಿ ಮತ್ತು ಬಿಲ್ವದ ಮಹತ್ವ**
(ದೈವಿಕ ವನಸ್ಪತಿಗಳು)
ಗುಂಬೀಶಂ (ಗುಂಡಕನಾಳ)
ಪ್ರೊ. ಶಂಕರಗೌಡ ಮ. ಬಿರಾದಾರ
ಪ್ರ: ಸಹಕಾರ ಪ್ರಕಾಶನ
ಚಿಕ್ಕತೊಟ್ಲುಕೆರೆ
ಕೋರಾ ಹೋಬಳಿ 572128
ತುಮಕೂರು ತಾ. & ಜಿ.
ಪು: 144

## ಲೇಖಕರ ವಿಳಾಸ

**ಡಾ. ಎಂ.ಎನ್. ನಂದೀಶ್ ಹಂಚೆ**
# 217, 6ನೇ ಕ್ರಾಸ್, ಲಲಿತಮಹಲ್ ನಗರ
ಮೈಸೂರು 570028
ಮೊ: 9008815888

**ಡಾ. ಎಸ್.ಜಿ. ರಾಮದಾಸ ರೆಡ್ಡಿ**
ಇತಿಹಾಸ ಪ್ರಾಧ್ಯಾಪಕರು
ಎಚ್.ಐ.ಜಿ.–32, ಗ್ರೂಪ್–1
ಕೆ.ಎಚ್.ಬಿ.ಕಾಲೋನಿ
ಹೂಟಗಳ್ಳಿ
ಮೈಸೂರು 570018
ಮೊ: 9845309081

**ಶ್ರೀ ಎಚ್.ಎಸ್. ಸಿದ್ಧಗಂಗಪ್ಪ**
ನಂ. 1617, 'ಮಾತೃಶ್ರೀ'
ಸರ್ ಎಂ. ವಿಶ್ವೇಶ್ವರಯ್ಯ
ಮುಂದುವರೆದ ಬಡಾವಣೆ
8ನೇ ಬ್ಲಾಕ್, ಸ್ಫೂರ್ತಿಧಾಮದ ಎದುರು
ಮುದ್ದಿನಪಾಳ್ಯ ಮುಖ್ಯ ರಸ್ತೆ
ಬೆಂಗಳೂರು 560091
ಮೊ: 9845565871

**ಡಾ. ಬಿ. ನಂಜುಂಡಸ್ವಾಮಿ**
ಪಂಡಿತ ತಾರಾನಾಥ್
ಆಯುರ್ವೇದ ಚಿಕಿತ್ಸಾಲಯ
ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್
ಬಿ.ಎಚ್. ರಸ್ತೆ
ತುಮಕೂರು 572102
ಮೊ : 9880996196

**ಕು. ಹುಸ್ಕೂರು ಅಂಬಿಕಾ ಶಿವನಂಜಪ್ಪ**
ಸಹಾಯಕ ಪ್ರಾಧ್ಯಾಪಕರು
ಜೆಎಸ್ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ
ವಿಶ್ವವಿದ್ಯಾನಿಲಯ
ಮೈಸೂರು
ಮೊ : 9901657675

**ಶ್ರೀ ಪ್ರಕಾಶ ಗಿರಿಮಲ್ಲನವರ**
ಐ.ಟಿ.ಐ ಕಾಲೇಜು
ಶಿವಬಸವನಗರ
ಬೆಳಗಾವಿ–590010
ಮೊ: 9902130041

ಹಿಂಬದಿ ಪುಟದ ಚಿತ್ರ

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮಹಾಶಿವರಾತ್ರಿಯಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ನಂಜುಂಡೇಶ್ವರ ದೇವಸ್ಥಾನದ ಬಾಗಿಲವಾಡ ಮತ್ತು ಬಾಗಿಲುಗಳಿಗೆ ಬೆಳ್ಳಿ ಕವಚವನ್ನು ಸಮರ್ಪಿಸಿದ ಹೊಸಕೋಟೆಯ ಡಾ. ಎಚ್.ಎಸ್. ರಾಘವೇಂದ್ರರಾವ್ ಮತ್ತು ಕುಟುಂಬದವರನ್ನು ಪೂಜ್ಯರು ಸನ್ಮಾನಿಸಿ ಆಶೀರ್ವದಿಸಿದರು (8 ಮಾರ್ಚ್ 2024)

**ಫಾರಂ (ರೂಲ್ 8 ರಂತೆ)**
**'ಪ್ರಸಾದ' ದ್ವೈಮಾಸಿಕದ ಮಾಲಿಕತ್ವ ಮತ್ತು ಇತರ ವಿವರಗಳು**

| | | |
|---|---|---|
| 1. ಪತ್ರಿಕೆಯ ಹೆಸರು ಮತ್ತು ವಿಳಾಸ | : | ಪ್ರಸಾದ<br>ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು |
| 2. ದ್ವೈಮಾಸಿಕವೆ ? ಮಾಸಿಕವೆ ? ವಾರಪತ್ರಿಕೆಯೆ ? | : | ಮಾಸಿಕ |
| 3. ಪ್ರಕಾಶಕರ ಹೆಸರು ಮತ್ತು ವಿಳಾಸ | : | ಡಾ. ಸಿ.ಜಿ. ಬೆಟಸೂರಮಠ<br>ಕಾರ್ಯನಿರ್ವಾಹಕ ಕಾರ್ಯದರ್ಶಿ<br>ಜೆಎಸ್‌ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |
| 4. ಸಂಪಾದಕರ ಹೆಸರು | : | ಡಾ. ಎಂ.ಎನ್. ನಂದೀಶ್ ಹಂಚೆ |
| ಭಾರತೀಯರೆ, ಹೊರದೇಶದವರೆ ? | : | ಭಾರತೀಯರು |
| ಮತ್ತು ವಿಳಾಸ | : | ಪ್ರಕಟಣ ವಿಭಾಗ<br>ಜೆಎಸ್‌ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |
| 5. ಮುದ್ರಕರ ಹೆಸರು ಮತ್ತು ವಿಳಾಸ | : | ಜೆಎಸ್‌ಎಸ್ ಮುದ್ರಣಾಲಯ<br>ಮೈಸೂರು 570 004 |
| 6. ಭಾರತೀಯರೆ, ಹೊರದೇಶದವರೆ ? | : | ಭಾರತೀಯರು |
| 7. ಪತ್ರಿಕೆಯ ಮಾಲೀಕತ್ವ ಮತ್ತು ವಿಳಾಸ ಒಬ್ಬರಿಗಿಂತ ಹೆಚ್ಚು ಜನ ಅದರ ಒಡೆತನದಲ್ಲಿದ್ದರೆ ಅವರ ಹೆಸರು, ವಿಳಾಸ ಮತ್ತು ವಿವರಗಳು | : | ಜೆಎಸ್‌ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |

ಮೇಲಿನ ವಿವರಗಳು ಸತ್ಯ ಮತ್ತು ನೈಜ ವಿವರಗಳೆಂದು ಹೇಳುತ್ತೇನೆ.

ಸಿ.ಜಿ. ಬೆಟಸೂರಮಠ
ಪ್ರಕಾಶಕ, 'ಪ್ರಸಾದ' ಮಾಸಿಕ
ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಸರಗೂರು ತಾಲ್ಲೂಕು ಕಾಟವಾಳು ಗ್ರಾಮದ ಶ್ರೀ ಹುಲಿಮಾಸ್ತಮ್ಮನವರ ಜಾತ್ರಾ ಮಹೋತ್ಸವದಲ್ಲಿ ಧಾರ್ಮಿಕ ಸಭೆಯನ್ನು ಪರಮಪೂಜ್ಯ ಜಗದ್ಗುರುಗಳು ಹಾಗೂ ಸಿದ್ಧಗಂಗಾ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶಾಸಕರಾದ ಶ್ರೀ ಅನಿಲ್ ಚಿಕ್ಕಮಾದು, ದೇವನೂರು ಮತ್ತು ದಡದಹಳ್ಳಿ ಶ್ರೀಗಳಿದ್ದಾರೆ (20 ಮಾರ್ಚ್ 2024)



ನಂಜನಗೂಡು ತಾಲ್ಲೂಕು ಹಲ್ಲರೆ ಶ್ರೀ ಗುರುಮಲ್ಲೇಶ್ವರ ಪಟ್ಟದ ಮಠದಲ್ಲಿ ಏರ್ಪಡಿಸಿದ್ದ ಬಸವ ಜಯಂತಿ ಹಾಗೂ ಶ್ರೀ ಬಸವಣ್ಣ ಸ್ವಾಮಿಗಳವರ ಮೂರನೆಯ ವರ್ಷದ ಪಟ್ಟಾಧಿಕಾರ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಮರಿಯಾಲ, ಶಿರಮಳ್ಳಿ, ಹಲ್ಲರೆ, ಕುದೇರುಮಠ ಹಾಗೂ ಹಂಚೀಪುರ ಮಠಗಳ ಶ್ರೀಗಳಿದ್ದಾರೆ (25 ಮಾರ್ಚ್ 2024)



ಮೈಸೂರು ನಗರ ಘಟಕ ಶರಣ ಸಾಹಿತ್ಯ ಪರಿಷತ್ತಿನ ವತಿಯಿಂದ ಪಂ. ಪಂಚಾಕ್ಷರಿ ಗವಾಯಿಗಳವರ ಸ್ಮರಣಾರ್ಥ ಆಯೋಜಿಸಿದ್ದ ವಚನ ಸಂಗೀತೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಮ.ಗು. ಸದಾನಂದಯ್ಯ, ಶ್ರೀಮತಿ ದಾಕ್ಷಾಯಿಣಿ ಸೋಮಶೇಖರ್, ಡಾ. ಸುಕನ್ಯಾ ಪ್ರಭಾಕರ್, ಡಾ. ಜಿ. ಸಿದ್ಧೇಶ್, ಶ್ರೀ ಎಂ. ಪ್ರದೀಪ್‌ಕುಮಾರ್ ಹಾಗೂ ಶ್ರೀ ಟಿ.ಎಸ್. ಕುಮಾರಸ್ವಾಮಿಯವರುಗಳಿದ್ದಾರೆ (24 ಮಾರ್ಚ್ 2024)



ಮೈಸೂರು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ಕನ್ನಡ ವಿಭಾಗ ಮತ್ತು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ವತಿಯಿಂದ ಆಯೋಜಿಸಿದ್ದ 'ವಚನ ಸಾಹಿತ್ಯ– ವರ್ತಮಾನದ ತಲ್ಲಣಗಳು' ವಿಷಯ ಕುರಿತ ವಿಚಾರ ಸಂಕಿರಣವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಮ.ಗು. ಸದಾನಂದಯ್ಯ, ಡಾ. ಪದ್ಮಾ ಶೇಖರ್, ಡಾ. ಸಿ. ಸೋಮಶೇಖರ, ಪ್ರೊ. ಸಿ.ಪಿ. ಕೃಷ್ಣಕುಮಾರ್, ಡಾ. ಸಿ.ಜಿ. ಬೆಟಸೂರಮಠ, ಡಾ. ಡಿ.ಎಸ್. ಸದಾಶಿವಮೂರ್ತಿ ಹಾಗೂ ಡಾ. ಎಂ. ಪೂರ್ಣಿಮಾರವರುಗಳಿದ್ದಾರೆ (27 ಮಾರ್ಚ್ 2024)




ಮೈಸೂರು ಸಂಗೀತ ಸಭೆಗಳ ಒಕ್ಕೂಟದಿಂದ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಸಂಗೀತ ವಿದ್ವಾಂಸರಾದ ವಿದ್ವಾನ್ ಪ್ರೊ. ರಾ. ವಿಶ್ವೇಶ್ವರನ್ ಹಾಗೂ ಶ್ರೀಮತಿ ಉಷಾ ವಿಶ್ವೇಶರನ್ ದಂಪತಿಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಅಭಿನಂದಿಸಲಾಯಿತು. ವಿದುಷಿ ಕೃಪಾ ಪಡ್ಕೆ, ಡಾ. ರಮಾ ವಿ. ಬೆಣ್ಣೂರು, ಕಲಾವಿದರುಗಳು, ವಿದ್ವಾಂಸರುಗಳು ಹಾಗೂ ವಿವಿಧ ಸಂಗೀತ ಸಭೆಗಳ ಪದಾಧಿಕಾರಿಗಳಿದ್ದಾರೆ (28 ಮಾರ್ಚ್ 2024)



ಮಣಕವಾಡದಲ್ಲಿ ಶ್ರೀಗುರು ಅನ್ನದಾನೀಶ್ವರ ದೇವಮಂದಿರ ಮಹಾಮಠದಲ್ಲಿ ಮಣಕವಾಡ ಹೆರಿಟೇಜ್ ವಸತಿ ಶಾಲೆಯ ಕಟ್ಟಡವು ಸುತ್ತೂರು, ಗದಗ ಮತ್ತು ಸಿದ್ಧಗಂಗಾ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಲೋಕಾರ್ಪಣೆಗೊಂಡಿತು. ಶ್ರೀ ಎನ್.ಎಚ್. ಕೋನರೆಡ್ಡಿ, ನಾಗನೂರು, ಶಾಂತಾಶ್ರಮ, ಬಸವನಬಾಗೇವಾಡಿ ಇತರ ಮಠಗಳ ಶ್ರೀಗಳು ಹಾಗೂ ಗಣ್ಯರುಗಳಿದ್ದಾರೆ (16 ಮಾರ್ಚ್ 2024)



ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಚಾಮರಾಜೇಶ್ವರಿ ಅಕ್ಕನ ಬಳಗವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀಮತಿ ಪ್ರತಿಮಾ ಮಂಜುನಾಥ್, ಶ್ರೀಮತಿ ಮಾದಲಾಂಬಿಕೆ ನಂಜುಂಡಸ್ವಾಮಿ, ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಶ್ರೀಮತಿ ಸುಮನಾ, ಹರವೆ ಶ್ರೀಗಳು, ವಿದುಷಿ ಪಾವನಿ ಭಾರದ್ವಾಜ್, ಶ್ರೀಮತಿ ವರ್ಷ ಶ್ರೀಕಂಠಸ್ವಾಮಿ ಹಾಗೂ ಶ್ರೀ ಮ.ಗು. ಸದಾನಂದಯ್ಯನವರುಗಳಿದ್ದಾರೆ (29 ಮಾರ್ಚ್ 2024)



ಮೈಸೂರು ಶ್ರೀ ರಾಜೇಂದ್ರ ಭವನದಲ್ಲಿ ಜೆಎಸ್‌ಎಸ್ ಗ್ರಂಥಮಾಲೆಯಿಂದ ಪ್ರಕಟವಾದ ಶೂನ್ಯಸಂಪಾದನೆ ಆಫ್ ಶಿವಗಣಪ್ರಸಾದಿ ಮಹದೇವಯ್ಯ, ಪ್ರಸಾದ ವರ್ಗೀಕೃತ ಪರಿಷ್ಕೃತ ಲೇಖನಸೂಚಿ, ಶ್ರೀ ಜಯಚಾಮರಾಜೇಂದ್ರ ಒಡೆಯರ್ ಜನ್ಮಶತಮಾನೋತ್ಸವ ವಿಚಾರಸಂಕಿರಣ ಕೃತಿಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಬಿಡುಗಡೆ ಮಾಡಲಾಯಿತು. ಶ್ರೀ ಎ. ಕಿರಣ್ ಸುಬ್ಬಯ್ಯ, ಪ್ರೊ. ಎನ್.ಕೆ. ಲೋಕನಾಥ್, ಶ್ರೀ ಯೋಗಿ ಶ್ರೀನಿವಾಸ ಅರ್ಕ, ಪ್ರೊ. ಶರಣಪ್ಪ ವಿ. ಹಲಸೆ, ಡಾ. ಡಿ.ಎ. ಶಂಕರ್, ಡಾ. ಎಚ್.ಎಸ್. ಅನುಪಮಾ, ಡಾ. ಕವಿತಾ ರೈ, ಶ್ರೀಮತಿ ರಾಜೇಶ್ವರಿ ಗಡಕರರವರುಗಳಿದ್ದಾರೆ (29 ಫೆಬ್ರವರಿ 2024)




ಕಲಬುರಗಿಯಲ್ಲಿ ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನದ 47ನೇ ವಾಷಿಕೋತ್ಸವ ಹಾಗೂ 121 ಗ್ರಂಥಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯ ಲೋಕಾರ್ಪಣೆಗೊಳಿಸಲಾಯಿತು. ಶ್ರೀ ಬಸವರಾಜ ಪಾಟೀಲ್ ಸೇಡಂ, ಪ್ರೊ. ದಯಾನಂದ ಅಗಸರ, ಡಾ. ಬಾಳಾಸಾಹೇಬ ಲೋಕಾಪುರ, ಪ್ರೊ. ಬಿ.ಕೆ. ತುಳಸಿಮಾಲಾ, ಶ್ರೀಮತಿ ದಾಕ್ಷಾಯಿಣಿ ಎಸ್. ಅಪ್ಪ, ಶ್ರೀ ಬಸವರಾಜ ಜಿ. ಕೊನೇಕರವರುಗಳಿದ್ದಾರೆ (20 ಮಾರ್ಚ್ 2024)

Registered with the Registrar of Newspapers in India Under No. 50622 / 1986
'Prasada' Monthly, Vol. 39 Issue No. 3, March 2024



ISSN 2583-7648

ಬಿಡಿ ಪ್ರತಿ : ರೂ.10/-

e-mail: prasada@jssonline.org ⋆ www.jssonline.org